ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 3 ಸಂಚಿಕೆ 35

ಆಗಸ್ಟ್ 30, 2009

ರೂ. 5/-

ರೈತರು ಮತ್ತು ಕಾರ್ಮಿಕರ ಮೇಲೆ 'ಮುಕ್ತ ವ್ಯಾಪಾರ'ದ ದಾಳಿ

ಸಮವಸ್ತ್ರ ವಿವಾದ:



ದಕ್ಷಿಣ ಕನ್ನಡದಲ್ಲಿ ಗಲಭೆ ಹಬ್ಬಿಸುವ ಮತ್ತೊಂದು ಯತ್ನ



ಆಪರೇಷನ್ ಕಮಲಕ್ಕೆ ಮುಖಭಂಗ

ಕೃಷ್ಣಾ, ಗೋದಾವರಿ ಅನಿಲ :
ಮಾಲೀಕರ್ಯಾರು ?



ಚೀನಾ ಗಲಭೆ:
ಅಮೆರಿಕದ ಪೆಟ್ರೋಲ್ ಲೂಟಿ ಸಂಚು



ಬರದ ಬಾಧೆ:
ಸೆಟೆದು ನಿಂತ ಬೀದರ್ ಜನತೆ

ಎರಡು ದಶಕಗಳ ಆರ್ಥಿಕ ಉದಾರೀಕರಣದ ದುಷ್ಪರಿಣಾಮ, ಜಾಗತಿಕ ಆರ್ಥಿಕ ಬಿಕ್ಕಟ್ಟು, ಬೆಲೆ ಏರಿಕೆ ಹಾಗೂ ಮಳೆ ಕೊರತೆಯಿಂದ ಉಂಟಾದ ಬರ ಪರಿಸ್ಥಿತಿ ಇವೆಲ್ಲವೂ ಒಟ್ಟೊಟ್ಟಿಗೆ ಬಂದು ಲಗ್ಗೆ ಇಟ್ಟಿವೆ. ಏನಿದಕ್ಕೆ ಪರಿಹಾರ?

ಭೀಕರ ಬರ

ಬೇಕು ಸೂಕ್ತ ಪರಿಹಾರ

ಕರ್ನಾಟಕ ರಾಜ್ಯ ದೇಶ ಭೀಕರ ಬರದತ್ತ ಸಾಗುತ್ತಿದೆ ಎಂಬುದು ಖಚಿತವಾಗುತ್ತಿದೆ. ದೇಶದ ಕೋಟಿ ಕೋಟಿ ರೈತರು, ಕೂಲಿಕಾರರ ಜನಸಾಮಾನ್ಯರು ಹಸಿವು, ಕಡು ಬಡತನ ಹಾಗೂ ಸಂಕಷ್ಟಗಳತ್ತ ಸರಿಯುತ್ತಿದ್ದಾರೆ. ಗುಳೆ ಹೊರಡುವುದು. ದನಕರುಗಳನ್ನು ಸಾಕಲಾಗದ ಹತಾಶೆಯಿಂದ ಕೈಗೆ ಹತ್ತಿದ ಬೆಲೆ ಅವನ್ನು ಮಾರುವುದು ಇವೆಲ್ಲಾ ಮಾಮೂಲಿ ಎಂಬಂತಾಗುತ್ತಿದೆ.

ಕೇಂದ್ರಾಡಳಿತ ಪ್ರದೇಶಗಳು ಸೇರಿ ದೇಶದ ವಿವಿಧ ರಾಜ್ಯ ಘಟಕಗಳಲ್ಲಿ 35ರ ಪೈಕಿ 25ರಲ್ಲಿ ಮಳೆ ಕೊರತೆ ಕಾಣಿಸಿಕೊಂಡಿದೆ. ಈ ವರ್ಷದ ಬರವು ಕಳೆದ 2 ದಶಕಗಳಲ್ಲಿ ಅಂದರೆ ಇಪ್ಪತ್ತು ವರ್ಷದಲ್ಲಿ ಕಾಣದ ಭೀಕರ ಪ್ರಮಾಣದ್ದಾಗಿದೆ. ಮಾನ್ಸೂನ್‌ನ 2 ತಿಂಗಳ ಅವಧಿಯಲ್ಲಿ ದೇಶದಲ್ಲಿ ಒಟ್ಟಾರೆ ಶೇ.25 ರಷ್ಟು ಮಳೆ ಕೊರತೆಯಾಗಿದೆ ಎಂಬ ವರದಿ ಇದೆ. ಕಳೆದ 20 ವರ್ಷಗಳಲ್ಲಿ ಶೇ.19 ರಷ್ಟು ಮಳೆ ಕೊರತೆ ಎಂಬುದು ಅತಿ ಹೆಚ್ಚಿನ ಮಳೆ ಕೊರತೆ ಎಂದು ದಾಖಲಾಗಿತ್ತು. ಈಗಿನ ಕೊರತೆ ಅದನ್ನು ಮೀರಿದೆ. ದೇಶದ 246 ಜಿಲ್ಲೆಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಅಂದರೆ ದೇಶದ ಶೇ.47ರಷ್ಟು ಜಿಲ್ಲೆಗಳು ಬರ ಪೀಡಿತವಾಗಿವೆ.

ಬೆಳೆ ಪ್ರದೇಶ ಕುಸಿತ

ಸಾಮಾನ್ಯವಾಗಿ ಭತ್ತ ಬೆಳೆಯುವ ಪ್ರದೇಶದ ಪೈಕಿ ಈ ವರ್ಷ ಕೇವಲ ಶೇ.58 ರಷ್ಟು ಪ್ರದೇಶದಲ್ಲಿ ಮಾತ್ರವೇ ಬಿತ್ತನೆಯಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ 60 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬಿತ್ತನೆಯಲ್ಲಿ ಕೊರತೆಯಾಗಿದೆ. ಎಣ್ಣೆಕಾಳುಗಳ ಬಿತ್ತನೆಯಲ್ಲಿ 1 ಲಕ್ಷ ಹೆಕ್ಟೇರ್‌ಗಿಂತ ಹೆಚ್ಚಿನ ಪ್ರದೇಶದಲ್ಲಿ ಬಿತ್ತನೆ ಆಗಿಲ್ಲ. ಈ ವರ್ಷ ಕೃಷಿ ಉತ್ಪನ್ನದಲ್ಲಿ 4.7 ಶೇ. ಕುಸಿತ ಕಾಣಲಿದೆ ಎಂದು ಅಂದಾಜು ಮಾಡಲಾಗಿದೆ. ಕಳೆದ ವರ್ಷವೇ ಶೇ.1.5 ರಷ್ಟು ಕೃಷಿ ಉತ್ಪನ್ನ ಕುಸಿತ ಕಂಡಿತ್ತು. ಈಗ ಇನ್ನಷ್ಟು ಕುಸಿತ.

ನಿಸರ್ಗದತ್ತ ಬರ ಮಾತ್ರವೇ ಈ ರೀತಿಯ ಪರಿಸ್ಥಿತಿ ಕಾರಣವಲ್ಲ. ಕೃಷಿ ಪ್ರದೇಶ ಸಂಕುಚಿತಗೊಳ್ಳುವಲ್ಲಿ ಆಳುವ ಸರ್ಕಾರಗಳ ನೀತಿಯ ಪಾತ್ರವೂ ಇದೆ. 2 ದಶಕಗಳ ಉದಾರೀಕರಣ ನೀತಿ ಕೃಷಿ ಸಬ್ಸಿಡಿಗಳ ಕಡಿತ, ಕೃಷಿಯ ಅತ್ಯಗತ್ಯ ಲಾಗವಾಡುಗಳಾದ ರಸಗೊಬ್ಬರ, ಬೀಜ, ಔಷಧಿ ಇತ್ಯಾದಿಗಳು ದುಬಾರೀಕರಣ, ವಿದ್ಯುತ್ ಖಾಸಗೀಕರಣ, ದುಬಾರಿಕರಣದಂತಹ ನೀತಿಗಳಿಂದಲೂ ಕೃಷಿಕರು ತತ್ತರಿಸಿ ಕೃಷಿಯಿಂದ ಹಿಂದೆ ಸರಿದಿದ್ದರ ಪರಿಣಾಮ ಇದರಲ್ಲಿದೆ. ಈಗ ಬರ ಪರಿಸ್ಥಿತಿಯುನ್ನು ವಿಷಮಗೊಳಿಸಿದೆ.

ಇಷ್ಟೇ ಅಲ್ಲ

ಜನರ ಕಷ್ಟಗಳು ಇಲ್ಲಿಗೆ ಮುಗಿಯುವುದಿಲ್ಲ. ಒಂದೆಡೆ ಅಕ್ರಮ ದಾಸ್ತಾನು ಜೂಜುಕೋರ ಮುಂಗಡ ವ್ಯಾಪಾರದಿಂದಾಗಿ ಅಗತ್ಯ ವಸ್ತುಗಳ ಬೆಲೆಗಳು ಏರುತ್ತಲೇ ನಡೆದಿವೆ. ಮತ್ತೊಂದೆಡೆ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮ ಸುರುಳಿ ಸುರುಳಿಯಂತೆ ಬಿಚ್ಚಿಕೊಳ್ಳುತ್ತಾ ನಡೆದಿದೆ. ಈ ಎಲ್ಲಾ ದಾಳಿಗಳನ್ನು ಎದುರಿಸಿ ಜನ ಬದುಕಬೇಕಿದೆ.

ಬಾಯಿ ಮಾತಿನಲ್ಲಿ ಜೇನುತುಪ್ಪವನ್ನೇ ಸೋರಿಸುವ ಪ್ರಧಾನಮಂತ್ರಿ, ಮುಖ್ಯಮಂತ್ರಿ, ಮಂತ್ರಿ ಮಹೋದಯರುಗಳ ಭರವಸೆಗಳು ಕೃತಿಯಲ್ಲಿ ಇಳಿಯುವುದೆಷ್ಟು ಎಂಬುದು ಗಂಭೀರ ಪ್ರಶ್ನೆ. ಉದಾರೀಕರಣ, ನೀತಿಗಳನ್ನು ಅಪ್ಪಿಕೊಂಡ ಸರ್ಕಾರಗಳ ಮಾತಿನ ಮಂಟಪದಲ್ಲಿ ನೊಂದು ಬೆಂದ ಜನತೆಗೆ ಆಶ್ರಯ ಸಿಗಲಾರದು.



ಪಶುಗಳಿಗೆ ಹುಲ್ಲು ನೀರು ಕಾಣಿಸುವ ಒಂದು ಆಶ್ರಯ ತಾಣ, ಅದರ ಜೊತೆಗೆ ಮನುಷ್ಯ ಮನುಷ್ಯರಂತೆ ದುಡಿದು ತಿನ್ನಲು ಅವಕಾಶ ಮಾಡಿಕೊಡುವಂತಹ ಅವಕಾಶಗಳನ್ನು ಸೃಷ್ಟಿಸುವುದು ಆಳುವ ಸರ್ಕಾರಗಳ ಕರ್ತವ್ಯ.

ಕೇಂದ್ರ ಯುಪಿಎ ಸರ್ಕಾರಕ್ಕೆ ಜನರಿಗೆ ಬರ ಪರಿಹಾರ ಕಾರ್ಯಕ್ರಮ ಕೈಗೊಳ್ಳುವುದಕ್ಕಿಂತ ಖಾಸಗಿ ವಿಮಾನ ಕಂಪನಿಗಳ ಲಾಭದ ಖಜಾನೆಗೆ ಧಕ್ಕೆಯಾಗದಂತೆ ಅದಕ್ಕೆ ಪರಿಹಾರ ತುಂಬಿಕೊಡುವ ಬಗ್ಗೆಯೇ ಗಮನ ಜಾಸ್ತಿ.

ಇನ್ನು ರಾಜ್ಯ ಸರ್ಕಾರದ ಆದ್ಯತೆಯ ಬಗೆಗಂತೂ ಹೇಳುವುದೇ ಬೇಡ. ಮಠ ಮಾನ್ಯಗಳು ಅವುಗಳ ಕೋಮುವಾದಿ ಅಜೆಂಡಾಗಳಿಗೆ ಮಾತ್ರವೇ ಈ ಸರ್ಕಾರದ್ದು 'ಎತ್ತಿದ ಕೈ'. ಉಳಿದದ್ದಕ್ಕೆ ಅಷ್ಟು ಸುಲಭವಾಗಿ ಕೈ ಮೇಲೇಳುವುದಿಲ್ಲ.

ಆದರೆ ಜನ ಬಿಡುವುದಿಲ್ಲ. ರೈತರು, ಕೂಲಿಕಾರರು ಮಹಿಳೆಯರು ರಾಜ್ಯದಲ್ಲೂ , ದೇಶದಲ್ಲೂ ಈಗಾಗಲೇ ಬೀದಿಗೆ ಇಳಿದಿದ್ದಾರೆ. ಬರ ಪರಿಹಾರ ಕಾಮಗಾರಿಗಳಿಗಾಗಿ, ದುಡಿಮೆಯ ಅವಕಾಶಗಳಿಗಾಗಿ ಆಗ್ರಹಿಸಿ ಆಂದೋಲನಗಳು ಆರಂಭಗೊಂಡಿವೆ. ಸಿಪಿಐ(ಎಂ) ನೇತೃತ್ವದಲ್ಲಿ ಆಗಸ್ಟ್ 17 ರಂದು ಬೀದರ್‌ನಲ್ಲಿ ನಡೆದ ಬೃಹತ್ ಆಂದೋಲನ ಚಿಕ್ಕಬಳ್ಳಾಪುರದಲ್ಲಿ ನಡೆದ ಬೃಹತ್ ಪ್ರತಿಭಟನಾ ರ್‍ಯಾಲಿಗಳು ಇದಕ್ಕೆ ಸಾಕ್ಷಿಯಾಗಿವೆ.

ಆಂದೋಲನದ ಆಗ್ರಹಗಳು ಹೀಗಿವೆ.

1. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ವಿಸ್ತರಿಸಿ ವ್ಯಾಪಕಗೊಳಿಸುವುದು.
2. ಪಡಿತರ ವ್ಯವಸ್ಥೆಯನ್ನು ಬಲಪಡಿಸಬೇಕು. ಆಹಾರ ಧಾನ್ಯ ಬೇಳೆ ಕಾಳುಗಳು, ಎಣ್ಣೆ ಸಹಿತ ಅವು ಜನರಿಗೆ ತಲುಪುವಂತಾಗಬೇಕು.
3. ಕೇಂದ್ರ ಸರ್ಕಾರವು ಬರ ಪರಿಸ್ಥಿತಿಯ ತೀವ್ರತೆಯನ್ನು ಅಂದಾಜು ಮಾಡಿ ನಿರ್ದಿಷ್ಟ ಪರಿಹಾರ ಕ್ರಮಗಳನ್ನು ಸೃಷ್ಟಿಸಲು ತುರ್ತು ಕ್ರಮಗಳನ್ನು ವಹಿಸತಕ್ಕದ್ದು.
4. ಬಿತ್ತನೆಯಾಗದೇ ಉಳಿದ ಬರಪೀಡಿತ ಪ್ರದೇಶದ ಪ್ರಮಾಣ ಮತ್ತು ಇಳುವರಿ ಕುಸಿತ, ಬೆಳೆ ನಾಶದ ಅಂದಾಜು ಮಾಡಲು ಅಗತ್ಯವಾದ ತಂಡವನ್ನು ರಚಿಸುವುದು ಮತ್ತು ಬರದಿಂದ ಬಾಧಿತರಾದವರಿಗೆ ಅಗತ್ಯವಾದ ವಿನಾಯ್ತಿ ರಿಯಾಯಿತಿಗಳನ್ನು ನೀಡುವುದು.
5. ನೈಸರ್ಗಿಕ ವಿಕೋಪ ಪರಿಹಾರ ನಿಧಿ(ಎನ್‌ಸಿಸಿಎಫ್) ಯನ್ನು ಹೆಚ್ಚಿಸಿ ವಿವಿ[illegible] ಪ್ರದೇಶಗಳ ವೈವಿಧ್ಯಮಯ ಪ್ರಾಕೃತಿಕ ವಿಕೋಪಗಳನ್ನು ಎದುರಿಸಲು ಅದು ಒದಗುವಂತೆ ಈ ನಿಧಿಯ ವ್ಯಾಪ್ತಿಯನ್ನು ವಿಸ್ತರಿಸಬೇಕು.
6. ಬರಪೀಡಿತ ಪ್ರದೇಶಗಳಲ್ಲಿ ಮಳೆ ಕೊರತೆಯಿಂದ ಹಾನಿಗೊಳಗಾಗಿರುವ ರೈತರು, ಹಾಗೂ ಕೃಷಿ ಕೂಲಿಕಾರರಿಗೆ ಸೂಕ್ತ ಪರಿಹಾರಗಳನ್ನು ನೀಡಬೇಕು.
7. ಬರಪೀಡಿತ ಪ್ರದೇಶಗಳಲ್ಲಿ ಅಗತ್ಯವಿರುವಲ್ಲೆಲ್ಲಾ ಉಚಿತವಾಗಿ ಸೂಕ್ತ ಬೀಜ, ಗೊಬ್ಬರ, ಔಷಧಿ ಮತ್ತಿತರ ಕೃಷಿ ಲಾಗುವಾಡುಗಳನ್ನು ಹಾಗೂ ಪಶು ಆಹಾರವನ್ನು ಒದಗಿಸುವುದು ಆಗಬೇಕು.
8. ಬರಪೀಡಿತ ಪ್ರದೇಶಗಳ ರೈತರ ಸಾಲ ಮನ್ನಾ ಮಾಡುವುದು ಮತ್ತು ಹೊಸದಾಗಿ ಬಡ್ಡಿ ರಹಿತವಾದ ಸಾಲ ಒದಗಿಸುವುದು.
9. ಕೃಷಿಗೆ ಉಚಿತವಾಗಿ ನಿರಂತರವಾಗಿ ವಿದ್ಯುತ್ ಅನ್ನು ಪೂರೈಸಲು ಕ್ರಮ ವಹಿಸುವುದು. ಕೇಂದ್ರದ ಮೂಲದಿಂದ ರಾಜ್ಯಗಳಿಗೆ ಹೆಚ್ಚುವರಿ ವಿದ್ಯುತ್‌ನ[illegible] ಪೂರೈಸುವುದು.
10. ಬೆಳೆದ ಬೆಳೆಗೆ ತತ್‌ಕ್ಷಣ ಬೆಂಬಲ ಬೆಲೆ ಘೋಷಿಸುವುದು ಸಜ್ಜೆ, ಜೋಳ, ರಾಗಿ ಮುಂತಾದ ಬೆಳೆಗಳಿಗೆ ಸಹ ಬೆಂಬಲ ಬೆಲೆ ನೀಡತಕ್ಕದ್ದು.

ಬರ ಪರಿಹಾರ ಕ್ರಮಗಳಿಗಾಗಿ ಒತ್ತಾಯಿಸಿ ಆಗಸ್ಟ್ 31, 2009 ತಾಲ್ಲೂಕು ಮಟ್ಟದ ರಾಜ್ಯವ್ಯಾಪಿ ಪ್ರತಿಭಟನೆ

ಕರ್ನಾಟಕ ಪ್ರಾಂತ ರೈತ ಸಂಘ, ಕೃಷಿಕೂಲಿಕಾರರ ಸಂಘಟನೆಗಳ ಕರೆ

ರಾಜ್ಯದ 86 ತಾಲ್ಲೂಕುಗಳು ಬರಪೀಡಿತವೆಂಬ ಘೋಷಣೆಯೇನೋ ಆಗಿದೆ. ಆದರೆ ಏರುತ್ತಿರುವ ಬರದ ತೀವ್ರತೆಯು ಅದನ್ನು ಅನುಭವಿಸುವ ರೈತರು ಕೂಲಿಕಾರರು .ಬಡವರಿಗೆ ಗೊತ್ತು. ವಿಮಾನ, ಹೆಲಿಕ್ಯಾಪ್ಟರ್‌ಗಳಲ್ಲಿ ಹಾರಾಡಿ, ಹವಾನಿಯಂತ್ರಿತ ಕೊಠಡಿಗಳಲ್ಲಿ ವಾಸಿಸುವ ಅಧಿಕಾರಸ್ಥರಿಗೆ ಅವು ಅಷ್ಟು ಸುಲಭಕ್ಕೆ ಅರ್ಥವೇ ಆಗುವುದಿಲ್ಲ. ಕೇಂದ್ರ ಯುಪಿಎ ಹಾಗೂ ಬಿಜೆಪಿ ಸರ್ಕಾರಗಳು ಬರದ ದವಡೆಯಲ್ಲಿ ಸಿಲುಕಿರುವ ಜನರ ಬದುಕು ರಕ್ಷಿಸಲು ತುರ್ತಾಗಿ ಕ್ರಮ ವಹಿಸಬೇಕೆಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ(ಕೆಐಎಡಬ್ಲ್ಯುಯು) ಗಳ ರಾಜ್ಯ ಸಮಿತಿಗಳು ಜಂಟಿಯಾಗಿ ಹೋರಾಟದ ಕರೆ ನೀಡಿವೆ.

ಆಗಸ್ಟ್-31, 2009 ರಂದು ತಾಲ್ಲೂಕು ಮಟ್ಟಗಳಲ್ಲಿ ರಾಜ್ಯಾದ್ಯಂತ ಪ್ರತಿಭಟನೆಗಳನ್ನು ನಡೆಸಿಈ ಕೆಳಕಂಡ ಬೇಡಿಕೆಗಳಿಗೆ ಆಗ್ರಹಿಸಲು ತೀರ್ಮಾನಿಸಲಾಗಿದೆ.

ಬೇಡಿಕೆಗಳು

1. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೆಲಸದ ದಿನಗಳನ್ನು 200 ದಿನಕ್ಕೆ ಏರಿಸಬೇಕು. ಕೂಲಿಯನ್ನು ದಿನಕ್ಕೆ 150 ರೂ.ಗೆ ಏರಿಕೆ ವಾರಕ್ಕೊಮ್ಮೆ ತಪ್ಪದೇ ಪಾವತಿಸಬೇಕು.
2. ಪಡಿತರ ಚೀಟಿ-ರೇಷನ್‌ಕಾರ್ಡ್‌ಗಳಲ್ಲಿ ಎಪಿಎಲ್ /ಬಿಪಿಎಲ್ ಎಂಬ ಭೇದ ಮಾಡದೇ ಎಲ್ಲರಿಗೆಅಂತ್ಯೋದಯ ಚೀಟಿಯಲ್ಲಿ ಕೊಡುವಂತೆ ಕೆ.ಜಿ.ಗೆ 3 ರೂ. ಬೆಲೆಯಲ್ಲಿ ಕನಿಷ್ಠ 30 ಕೆ.ಜಿ. ಅಕ್ಕಿ ಅಥವಾ ಗೋಧಿಯಂತಹ ಆಹಾರ ಧಾನ್ಯ ಕೊಡಬೇಕು.
3. ನೀರಿನ ಕೊರತೆ ಇರುವಲೆಲ್ಲಾ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಪೂರೈಸಬೇಕು.
4. ಗ್ರಾಮ ಪಂಚಾಯ್ತಿ ಆಶ್ರಯದಲ್ಲಿ ಪ್ರತಿ ಗ್ರಾಮಗಳಲ್ಲಿ ಗೋಶಾಲೆ ಆರಂಭಿಸಿ ಮೇವು ನೀರು ಒದಗಿಸಬೇಕು.
5. ಬಿತ್ತನೆ ಮಾಡಿ ವೈಫಲ್ಯವಾಗಿರುವ ಕಡೆ, ಬೆಳೆ ಒಣಗಿ ಹೋಗಿರುವ ಕಡೆ ಸರ್ಕಾರ ನಷ್ಟ ಪರಿಹಾರ ಕೊಡಬೇಕು. ಆಗಸ್ಟ್ ಕೊನೆಯವರೆಗೆ ಸಹ ವಿಮಾ ಕಂತು ಪಾವತಿಸುವ ಅವಕಾಶವಿದ್ದು ಸರ್ಕಾರ ಬೆಳೆ ವಿಮೆ ಪರಿಹಾರ ದೊರಕುವಂತೆ ತುರ್ತು ಕ್ರಮ ವಹಿಸಬೇಕು. ಪರಿಹಾರ ನೀಡುವ ವಿಷಯದಲ್ಲಿ ಬ್ರಿಟಿಷರ ಕಾಲದ ಮಾರ್ಗದರ್ಶಿ ಸೂತ್ರಗಳನ್ನು ಕೈಬಿಟ್ಟು ತಿದ್ದುಪಡಿ ಮಾಡಿ ಜನಪರಗೊಳಿಸಬೇಕು.
6. ಬರಪೀಡಿತ ಪ್ರದೇಶಗಳ ರೈತರ ಸಾಲ ಮನ್ನಾ ಮಾಡುವುದು, ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತಿಸುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಬೇಕು.
7. ಮತ್ತೆ ಬೆಳೆ ಬಿದ್ದ, ಬೀಳುತ್ತಿರುವ ಪ್ರದೇಶಗಳಲ್ಲಿ ಅಲ್ಪಾವಧಿ ತಳಿಗಳ ಬೀಜ, ಗೊಬ್ಬರ, ಔಷಧಿ ಇತ್ಯಾದಿ ಕೃಷಿ ಲಾಗವಾಡುಗಳನ್ನು ಉಚಿತವಾಗಿ ಪೂರೈಸಬೇಕು.

ದ.ಕ. ಜಿಲ್ಲೆಯಲ್ಲಿ ಕೋಮುಗಲಭೆಗಾಗಿ ಸಂಘ ಪರಿವಾರದ ತುಡಿತ

ಮಸೀದಿ, ದೇವಸ್ಥಾನಗಳಲ್ಲಿ ಮಾಂಸದ ಎರೆಚಾಟ, ಕಾಲೇಜುಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರ ಮೇಲೆ ನಿರ್ಬಂಧಗಳು

ದ.ಕನ್ನಡ ಜಿಲ್ಲೆಯಲ್ಲಿ ಕರಾವಳಿಯಲ್ಲಿ ಕೋಮುದ್ವೇಷ ಯಾವಾಗಲೂ ನಿಗಿನಿಗಿ ಕೆಂಡದಂತೆ ಜ್ವಲಿಸುತ್ತಿರಬೇಕು. ಅಲ್ಲೊಂದು ಕಡೆ, ಇಲ್ಲೊಂದು ಕಡೆ ಬೆಂಕಿ ಹರಡಿ ಮನೆ-ಮಠಗಳು ಸುಡುತ್ತಿರಬೇಕು. ಅದರಲ್ಲಿ ಬದುಕುಗಳು ಸುಟ್ಟ ಕಮರು ವಾಸನೆ ಮೂಗಿಗೆ ಹೊಡೆಯುತ್ತಿರಬೇಕು. ಆಗಲೇ ಸಂಘ ಪರಿವಾರದ ಕ್ರೂರಿಗಳಿಗೆ ತೃಪ್ತಿ.

ಇತ್ತೀಚೆಗೆ ಮಂಗಳೂರಿಗೆ ಭೇಟಿ ನೀಡಿದಾಗ ಪತ್ರಿಕೆಗಳ 'ಕರಾವಳಿ ಪುರವಣಿ'ಗಳ ತುಂಬಾ ಎರಡು ಮೂರು ದಿನ ಸುದ್ದಿಗಳೇ ಸುದ್ದಿಗಳು. ಮದರಸದ ಬಳಿಯಲ್ಲಿ ಪ್ರಾಣಿಯ ದೇಹದ ತುಂಡುಗಳು, ಆ ದೇವಸ್ಥಾನದ ಗೇಟಿನ ಬಳಿ ಪ್ರಾಣಿಯ ದೇಹದ ತುಂಡುಗಳು. ಉದ್ವೇಗ ವಾತಾವರಣ, ಪೋಲೀಸರು ಸ್ಥಳಕ್ಕೆ ಧಾವಿಸಿದರು. ಭಜರಂಗದಳ ವಿಶ್ವ ಹಿಂದೂ ಪರಿಷತ್‌ನ ಪುಂಡಾಡಿಕೆಯ ಪ್ರಯತ್ನಗಳು ನಡೆದವು.

ಒಳಸಂಚು ಫಲಿಸಲಿಲ್ಲ, ಸುಮ್ಮನಾಗುವವರೇ ಸಂಘ ಪರಿವಾರದ ಕ್ರೂರಿಗಳು?

ಆದರೆ ಮಾಂಸದ ಈ ಎರೆಚಾಟದಿಂದ ಕೋಮುದ್ವೇಷವನ್ನು ಉದ್ರೇಕಿಸಿ ಗಲಭೆಗಳನ್ನು ಎಬ್ಬಿಸುವ ಒಳಸಂಚು ಫಲಿಸಲಿಲ್ಲ. ಫಲಿಸಲಿಲ್ಲ ನಿಜ. ಹಾಗೆಂದು ಇದನ್ನು ನಿಶ್ಚಿತ ದುರುದ್ದೇಶ, ಸಾಕಷ್ಟು ಪ್ರಯತ್ನದಿಂದ ಯೋಜಿಸಿದ ಸಂಘ ಪರಿವಾರದ ದುಷ್ಟ ಮನಸ್ಸುಗಳು ಇಷ್ಟಕ್ಕೆ ತೃಪ್ತಿಗೊಳ್ಳಲು ಸಾಧ್ಯವೇ?. ದ.ಕ. ಜಿಲ್ಲೆಯಲ್ಲಿ ನಿರಂತರವಾಗಿ ಕೋಮುದ್ವೇಷವನ್ನು ಹಬ್ಬಿಸದೆ ಇದ್ದರೆ ಜನ ಏನು ಮಾಡುತ್ತಾರೆ? ಜನ ತಮ್ಮ ಬದುಕಿನ ಬಗ್ಗೆ, ಅದರ ಸಮಸ್ಯೆಗಳ ಬಗ್ಗೆ ಯೋಚಿಸಲಾರಂಭಿಸುತ್ತಾರೆ. ರಾಜ್ಯ ಸರ್ಕಾರದ ಬಗ್ಗೆ ಅತೃಪ್ತಿ, ಅಸಮಾಧಾನಗಳು ಬೆಳೆಯುತ್ತವೆ. ಜನ ಬಿಜೆಪಿಯಿಂದ ದೂರ ಸರಿಯುತ್ತಾರೆ.

ಜಿ.ಎನ್.ನಾಗರಾಜ್

ಬಿಜೆಪಿಯೊಳಗಿನ ಕಚ್ಚಾಟ

ಬಿಜೆಪಿಯ ರಾಷ್ಟ್ರೀಯ ಘಟಕದಲ್ಲಿ ನಡೆಯುತ್ತಿರುವ ಕಲಹಗಳು, ಕಚ್ಚಾಟಗಳು ಆ ಪಕ್ಷದ ಬಗ್ಗೆ ಜನರಲ್ಲಿ ಅಭಿಮಾನವನ್ನು ಬೆಳೆಸುವುದಿರಲಿ ಇದ್ದ ಅಭಿಮಾನವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಭಿನ್ನಮತ, ಗೊಂದಲ, ನಾಯಕತ್ವಕ್ಕಾಗಿ ಕಚ್ಚಾಟ, ಶಿಸ್ತಿನ ಬಹಿರಂಗ ಉಲ್ಲಂಘನೆ ಇವುಗಳು ದಿನನಿತ್ಯದ ಮಾತಾಗಿವೆ. ಆದರೆ ಇದರಲ್ಲಿ ಸಾಮಾನ್ಯ ಜನತೆಯ ಹಿತದ ಯಾವ ಪ್ರಶ್ನೆಯಾದರೂ ಅಡಗಿದೆಯೇ? ರಾಜ್ಯಮಟ್ಟದಲ್ಲಿಯೂ ಲೋಕಸಭಾ ಚುನಾವಣೆಯ ನಂತರ ನಿರಂತರ ಗುಂಪುಗಾರಿಕೆ, ಭಿನ್ನಮತದ ಸುದ್ದಿಗಳೇ ರಾರಾಜಿಸುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಜನತೆಯ ವಿಶ್ವಾಸವನ್ನು ಉಳಿಸಿಕೊಳ್ಳಲು ಹೇಗೆ ಸಾಧ್ಯ?

ಜನರ ಸಮಸ್ಯೆಗಳೋ ಅತ್ಯಂತ ತೀವ್ರಗತಿಯಲ್ಲಿ ಉಲ್ಬಣಗೊಳ್ಳುತ್ತಿವೆ. ಬೆಲೆ ಏರಿಕೆ, ನಿರುದ್ಯೋಗ, ಅಡಿಕೆ ತೆಂಗು ಮೊದಲಾದ ಫಸಲುಗಳ ಬೆಲೆ ಇಳಿಕೆ ಇತ್ಯಾದಿ ಸಮಸ್ಯೆಗಳು ಜನರನ್ನು ಕಾಡುತ್ತಿವೆ. ಈ ಸಮಸ್ಯೆಗಳನ್ನು ಪರಿಹರಿಸುವ ಮೂಲಕ ಜನರ ವಿಶ್ವಾಸವನ್ನು ಉಳಿಸಿಕೊಳ್ಳಬಹುದು. ಆದರೆ ಅಂತಹ ಮನಸ್ಸು, ಅದಕ್ಕಾಗಿ ರಾಜ್ಯ ಬಜೆಟ್‌ನ ಹಣವನ್ನು ಖರ್ಚು ಮಾಡುವುದು, ಸರ್ಕಾರದ ನೀತಿ ರೂಪಿಸುವುದು. ಕಾಳಸಂತೆಕೋರರ ಮೇಲೆ, ಸಗಟು ವ್ಯಾಪಾರಿಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುವುದು ಸಾಧ್ಯವೇ? ಬಿಜೆಪಿಯಂತಹ ದೊಡ್ಡ ಬಂಡವಾಳಶಾಹಿಗಳ, ಗಣಿ ಮಾಫಿಯಾ, ಭೂ ಮಾಫಿಯಾ, ದೊಡ್ಡ ವರ್ತಕರ ಪಕ್ಷ ಇಂತಹ ಕ್ರಮ ಕೈಗೊಂಡು ಜನರ ವಿಶ್ವಾಸವನ್ನು ಗಳಿಸಲು ಸಾಧ್ಯವೇ?

ಇಂತಹ ಸಂದರ್ಭದಲ್ಲಿ ಜನರಲ್ಲಿ ಅಸಮಧಾನ ಬೆಳೆಯಲು ಅವಕಾಶ ಕೊಡಬಾರದೆಂದರೆ ಅದರ ದಿನನಿತ್ಯದ ಬದುಕನ್ನು ಸಮಾಧಾನ ಚಿತ್ತದಿಂದ ಸಾಗಿಸಲು, ಬದುಕಿನ ಸಮಸ್ಯೆಗಳ ಬಗ್ಗೆ ಚಿಂತಿಸಲು ಅವಕಾಶವೇ ನೀಡಬಾರದು ಇದೊಂದೇ ದಾರಿ.

ಅದಕ್ಕಾಗಿ ಸಂಘ ಪರಿವಾರ ಹುಡುಕಿದ ಹೊಸದಾರಿ ಮುಸ್ಲಿಂ ವಿದ್ಯಾರ್ಥಿನಿಯರ ಉಡುಪಿನ ಪ್ರಶ್ನೆ ಎತ್ತಿ ಮುಸ್ಲಿಂ ಜನತೆಯನ್ನು ಸಿಟ್ಟಿಗೆಳಿಸುವುದು. (ಇದೇ ಪುಟದ ಮತ್ತೊಂದು ಲೇಖನ ನೋಡಿ)

ಮುಸ್ಲಿಂ ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ಆತಂಕ ಅಲ್ಪಸಂಖ್ಯಾತರನ್ನು ಸಿಟ್ಟಿಗೇಳಿಸುವ ಕುತಂತ್ರ

ಮದರಸಾ, ದೇವಸ್ಥಾನಗಳ ಮಾಂಸದ ಎರೆಚಾಟದಿಂದ ಕೋಮುಗಲಭೆಗಳನ್ನು ಉದ್ರೇಕಿಸುವ ತಂತ್ರ ಫಲ ನೀಡದ ಹಿನ್ನೆಲೆಯಲ್ಲಿ ಸಂಘ ಪರಿವಾರ ಹುಡುಕಿದ ಹೊಸಮಾರ್ಗ: ಮುಸ್ಲಿಂ ವಿದ್ಯಾರ್ಥಿನಿಯರ ಉಡುಪಿನ ಬಗ್ಗೆ ಆಕ್ಷೇಪ, ಸಾಚಾರ್ ಸಮಿತಿ ವರದಿಯ ಹಿನ್ನೆಲೆಯಲ್ಲಿ ಇಡೀ ದೇಶದಲ್ಲಿ ಮುಸ್ಲಿಂ ಅಲ್ಪಸಂಖ್ಯಾತರಲ್ಲಿ ಶಿಕ್ಷಣದ ಅಭಾವದ ಬಗ್ಗೆ, ಸ್ವಾತಂತ್ರ್ಯಾನಂತರ ಅವರ ಬದುಕಿನ ಸ್ಥಿತಿ ಸ್ವಾತಂತ್ರ್ಯ ಪೂರ್ವಸ್ಥಿತಿಗಿಂತಲೂ ಕೆಟ್ಟಿದೆ. ಅದನ್ನು ಸುಧಾರಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ ನಡೆದಿದೆ. ಅದರಲ್ಲಿಯೂ ಮುಸ್ಲಿಂ ಮಹಿಳೆಯರು ಬುರ್ಖಾ, ಕಾರಣಕ್ಕಾಗಿ ಮನೆಯಿಂದ ಹೊರಗೆ ಬರುವುದೇ ದೊಡ್ಡ ಸಮಸ್ಯೆಯಾಗಿದೆ. ಮದರಸಾಗಳಲ್ಲಿ ಖುರಾನ್ ಶಿಕ್ಷಣ ಪಡೆದ ನಂತರ ಗೃಹಬಂಧನವೇ ಅವರ ಜೀವನವಾಗಿದೆ. ಅಂತಹ ಸಂದರ್ಭದಲ್ಲಿ ಮುಸ್ಲಿಂ ಮಹಿಳೆಯರು ಶಿಕ್ಷಣವನ್ನು ಪಡೆಯುವುದಕ್ಕೆ ಹೆಚ್ಚು ಹೆಚ್ಚು ಅವಕಾಶವನ್ನು ಕಲ್ಪಿಸುವುದು ಎಲ್ಲರ ಕರ್ತವ್ಯವಾಗಬೇಕು. ಇಡೀ ದೇಶದ ಗುರಿಯಾಗಬೇಕು.

ನೊಂದ ವಿದ್ಯಾರ್ಥಿನಿಯ ದೂರು



ಆದರೆ ಇಡೀ ದೇಶವೇ ಒಂದು ಯೋಚಿಸಿದರೆ ಅದರ ವಿರುದ್ಧ ಯೋಚಿಸುವುದೇ ದೇಶಪ್ರೇಮ ಎಂಬುದು ತಾನೇ ಬಿಜೆಪಿಯ ಸಿದ್ಧಾಂತ. ಹೀಗಾಗಿ ಎಲ್ಲರಿಗೂ ಶಿಕ್ಷಣ, ಎಲ್ಲ ಮಹಿಳೆಯರಿಗೂ ಆದ್ಯತೆಯ ಮೇಲೆ ಶಿಕ್ಷಣ ಎಂದು ಯೋಚಿಸದೆ ಹಿಂದು, ಮುಸ್ಲಿಂ ಎಂದು ಬೇಧ ಮಾಡುತ್ತಾ ದ್ವೇಷ ಬೆಳೆಸುವ ಮಾರ್ಗಗಳನ್ನು ಹುಡುಕುವುದೇ ಅವರ ದೇಶಪ್ರೇಮ.

ಇಂತಹ ಹಿನ್ನೆಲೆಯಲ್ಲಿ ಬಂಟ್ವಾಳದ ಖಾಸಗಿ ಕಾಲೇಜು ಹಾಗೂ ಉಪ್ಪಿನಂಗಡಿಯ ಸರ್ಕಾರಿ ಕಾಲೇಜುಗಳಲ್ಲಿ ಸಮವಸ್ತ್ರಧಾರಣೆಯ ನೆಪವೊಡ್ಡಿ ಮುಸ್ಲಿಂ ಮಹಿಳೆಯರನ್ನು ಕಾಲೇಜಿಗೆ ಬರದಂತೆ ತಡೆಹಾಕಲಾಗಿದೆ.

ಬಂಟ್ವಾಳದ ಎಸ್‌ವಿಎಸ್ ಕಾಲೇಜಿನ ಪ್ರಥಮ ಬಿ.ಕಾಂ. ವಿದ್ಯಾರ್ಥಿನಿ ಆಯಿಷ್ ಆಸ್ಮಿನ್‌ಳಿಗೆ ಮತ್ತು ಮತ್ತೊಬ್ಬ ವಿದ್ಯಾರ್ಥಿನಿಗೆ ಬುರ್ಖಾ ಧರಿಸಿ ಕಾಲೇಜಿಗೆ ಬರಬಾರದೆಂದು ವಿದ್ಯಾರ್ಥಿ ಸಂಘಟನೆಯ ಮುಖಂಡನೊಬ್ಬ ಬೆದರಿಸಿದ. ನಂತರ ಬುರ್ಖಾದ ಬದಲಿಗೆ ತಲೆಗೆ ಸ್ಕಾರ್ಫ್ ಧರಿಸಿ ಕಾಲೇಜಿಗೆ ಬರತೊಡಗಿದಳು. ನಂತರ ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿನಿಯ ತಂದೆ ತಾಯಿಯರನ್ನು ಕರೆಸಿ ಮಾತನಾಡಿದ್ದಾರೆ. ಅವರು ಸ್ಕಾರ್ಫ್ ಧಾರಣೆಯನ್ನು ಕೈಬಿಡಲೊಪ್ಪಲಿಲ್ಲ. ನಂತರ ಆಕೆಗೆ ಕಾಲೇಜಿಗೆ ಬರಬಾರದೆಂದು ತಿಳಿಸಲಾಗಿದೆ.

ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿಯಲ್ಲಿರುವ ಸರ್ಕಾರಿ ಕಾಲೇಜಿನಲ್ಲಿ ಏಕಾಏಕಿ ಸಮವಸ್ತ್ರ ಧರಿಸಬೇಕೆಂದು ಆಜ್ಞೆ ಮಾಡಲಾಗಿದೆ. ಸಮವಸ್ತ್ರ ಧರಿಸಿಲ್ಲವೆಂದು 50 ವಿದ್ಯಾರ್ಥಿಗಳನ್ನು ಕಾಲೇಜಿನಿಂದ ಹೊರಹಾಕಲು ಪ್ರಯತ್ನಿಸಲಾಗಿದೆ. ಆ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿರೋಧ ಮಾಡಿದರೆಂದು ಇಬ್ಬರು ವಿದ್ಯಾರ್ಥಿಗಳನ್ನು ಅಮಾನತ್ತುಗೊಳಿಸಲಾಗಿದೆ. ಇಲ್ಲಿ

ಪುಟ4 ಕ್ಕೆ

ಉಪ ಚುನಾವಣೆಗಳು: ಆಪರೇಷನ್ ಕಮಲಕ್ಕೆ ಮುಖಭಂಗ

5 ಕ್ಷೇತ್ರಗಳಲ್ಲಿ ನಡೆದ ಉಪಚುನಾವಣೆಯ ಪ್ರಧಾನ ಫಲಿತಾಂಶವೆಂದರೆ ಆಪರೇಷನ್ ಕಮಲವೆಂಬ ಅಸಹ್ಯ ರಾಜಕಾರಣಕ್ಕೆ ಮುಖಭಂಗ. ಚನ್ನಪಟ್ಟಣ ಮತ್ತು ಗೋವಿಂದರಾಜನಗರ(ಬೆಂಗಳೂರುನಗರ)ಗಳಲ್ಲಿ ಕಾಂಗ್ರೆಸ್‌ನಿಂದ ಕಸಿದುಕೊಂಡ ಇಬ್ಬರೂ ಶಾಸಕರನ್ನು ಜನತೆ ಸೋಲಿಸಿದ್ದಾರೆ. ಇದರಲ್ಲಿ ಲಿಂಗಾಯಿತ ಜಾತಿಯ ರಾಜಕಾರಣದ ಬೆಂಗಳೂರಿನ ಅಧ್ವರ್ಯುವಾಗಿ, ಸಿದ್ಧಗಂಗಾಶ್ರೀ ಪಾದಕಮಲ ಸೇವಕನಾಗಿ ಇತ್ತೀಚಿನ ವರ್ಷಗಳಲ್ಲಿ ಪ್ರಸಿದ್ಧಿ ಪಡೆದಿದ್ದ ಸೋಮಣ್ಣ ನಾನು ಯಾವುದೇ ಪಕ್ಷದಲ್ಲಿದ್ದರೂ ಗೆದ್ದು ಬರುತ್ತೇನೆ ಎಂಬ ಹಮ್ಮಿನಿಂದಲೇ ಬೀಗುತ್ತಿದ್ದರು. ಮಂತ್ರಿಗಿರಿಯ ಅಧಿಕಾರ ಬಲದಿಂದ ತಮ್ಮ ಭೂ ಮಾಫಿಯಾ ಮತ್ತಿತರ ವ್ಯವಹಾರಗಳನ್ನು ಬೆಳೆಸಿ ತಮ್ಮ ಆಸ್ತಿಯನ್ನು ಬೆಳೆಸಿಕೊಳ್ಳುವ ಹಂಬಲದಲ್ಲಿದ್ದರು. ಗೋವಿಂದರಾಜನಗರದ ಸೋಲು ಸೋಮಣ್ಣನವರಿಗೆ ದೊಡ್ಡ ಸೋಲು.

ಈ ಚುನಾವಣೆಗಳಿಂದ ಬಿಜೆಪಿಯ ಒಟ್ಟು ಸ್ಥಾನಗಳ ಸಂಖ್ಯೆ ಮತ್ತೆ ಎರಡರಷ್ಟು ಏರಿಕೆಯೇ ಆಗಿದೆ. ಕಾಂಗ್ರೆಸ್‌ನಿಂದ ಎರಡು ಸ್ಥಾನಗಳನ್ನು ಕಸಿದುಕೊಂಡಿದೆ. ಅದರಲ್ಲಿಯೂ ಖರ್ಗೆಯವರ ಕ್ಷೇತ್ರದಲ್ಲಿ ಅವರ ಪುತ್ರನನ್ನೇ ಸೋಲಿಸಿದೆ. ಆದರೆ ಚನ್ನಪಟ್ಟಣ ಹಾಗೂ ಗೋವಿಂದರಾಜನಗರದ ಸೋಲು ಬಿಜೆಪಿಗೆ ದೊಡ್ಡ ಮುಖಭಂಗ. ಸ್ವತಃ ಸರ್ಕಾರದ ಸಚಿವರಾಗಿ ಸ್ಪರ್ಧೆಯಲ್ಲಿದ್ದರು ಸೋಮಣ್ಣ. ಈ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ತನ್ನ ಸಚಿವ ಸಂಪುಟದ ಘಟಾನುಘಟಿಗಳನ್ನು ಪ್ರಚಾರಕ್ಕಿಳಿಸಿತ್ತು. ತನ್ನ ಎಲ್ಲಾ ಶಕ್ತಿಯನ್ನು ತೊಡಗಿಸಿತ್ತು. ಆ ಮೂಲಕ ಆಪರೇಷನ್ ಕಮಲವನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ನಡೆಸಿತ್ತು. ಜೊತೆಗೆ ದಕ್ಷಿಣ ಕರ್ನಾಟಕದಲ್ಲಿ ತನ್ನ ನೆಲೆಯೂರಲು ಕೂಡ ಈ ಗೆಲುವು

ಪುಟ 4ಕ್ಕೆ

ಮುಸ್ಲಿಂ ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ಆತಂಕ....

ಪುಟ 3 ರಿಂದ

ಪದವಿಪೂರ್ವ ಮತ್ತು ಪದವಿ ಕಾಲೇಜುಗಳನ್ನು ಸೇರಿಸಿ 250 ಕ್ಕೂ ಹೆಚ್ಚು ಮುಸ್ಲಿಂ ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಮಾಡುತ್ತಿದ್ದಾರೆಂದು ವರದಿಯಾಗಿದೆ.

ಸಮವಸ್ತ್ರ ಮತ್ತು ಸಮಾನತೆ, ಶಿಸ್ತು

ಈ ಮಧ್ಯೆ ಸರ್ಕಾರಿ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷೆಯೂ ಆಗಿರುವ ಅಲ್ಲಿನ ಬಿಜೆಪಿ ಶಾಸಕಿ ಮಲ್ಲಿಕಾ ಪ್ರಸಾದ್ ಮಾತ್ರವಲ್ಲ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರೂ ಕೂಡ ಸಮವಸ್ತ್ರ ಸಮಾನತೆಯ ಹಾಗೂ ಶಿಸ್ತಿನ ಪ್ರತೀಕ. ಅದನ್ನು ಎಲ್ಲರೂ ತೊಡಬೇಕೆಂದು ಅಪ್ಪಣೆ ಕೊಡಿಸಿದ್ದಾರೆ.

ಸಮವಸ್ತ್ರದಲ್ಲಿ ಸ್ಕಾರ್ಫ್ ಇರಬಾರದೆಂದು ನಿಯಮ ಮಾಡುವ ಯಾವ ಅಧಿಕಾರವೂ ಶಿಕ್ಷಣ ಸಂಸ್ಥೆಗಳ ಆಡಳಿತ ವರ್ಗಗಳಿಗೆ ಇಲ್ಲ. ಕಾಲೇಜೊಂದು ಎಲ್ಲ ವಿದ್ಯಾರ್ಥಿನಿಯರು ಪ್ಯಾಂಟ್ ಅಥವಾ ಸಲ್ವಾರ್ ಕಮೀಜ್ ಮಾತ್ರವೇ ತೊಡಬೇಕೆಂದು ಸೀರೆಯನ್ನು ತೊಡುವವರಿಗೆ ಪ್ಯಾಂಟು ತೊಡಲೇಬೇಕೆಂದು ಲಂಗ ದಾವಣಿ ತೊಡುವವರಿಗೆ ದಾವಣಿ ತೊಡಬಾರದೆಂದು ಒತ್ತಾಯ ಮಾಡುವ ಅಧಿಕಾರವಿಲ್ಲ. ಹಾಗೆ ಒತ್ತಾಯ ಮಾಡಿದರೆ ಮಹಿಳೆಯರ ಶಿಕ್ಷಣ ನಡೆದೀತೇ?

ಮಹಿಳೆಯರ ಶಿಕ್ಷಣವಿರಲಿ ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಕೂಡ ಜುಟ್ಟು ಬಿಡಬಾರದು ಕ್ರಾಪ್ ಬಿಡಬೇಕು, ಪಂಚೆ ತೊಡಬಾರದು ನಿಕ್ಕರ್, ಪ್ಯಾಂಟ್ ತೊಡಬೇಕು ಎಂದು ಕಡ್ಡಾಯ ಮಾಡಿದ್ದರೆ ಪುರುಷರ ಶಿಕ್ಷಣವಾದರೂ ಸುಸೂತ್ರವಾಗಿ ನಡೆಯಲು ಸಾಧ್ಯವಿತ್ತೇ? ಈಗಲೂ ಜುಟ್ಟುಬಿಟ್ಟು ಪಂಚೆ ತೊಟ್ಟು ಶಾಲಾ, ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಲ್ಲವೇ? ಎಷ್ಟೋ ಜನ ಕಾಲೇಜು ಅಧ್ಯಾಪಕರು ಜುಟ್ಟುಬಿಟ್ಟು ಪಂಚೆ ತೊಟ್ಟು ಪಾಠ ಮಾಡುವವರು ಇಲ್ಲವೇ? ಅವರಿಗೆಲ್ಲಾ ಪ್ಯಾಂಟು ತೊಟ್ಟೇ ಬರಬೇಕು. ಸಮವಸ್ತ್ರ ಮತ್ತು ಕಾಲೇಜಿನ ಅಧಿಕಾರ ಎಂದರೆ ಒಪ್ಪಿಕೊಳ್ಳಲು ಸಾಧ್ಯವೇ? ಸಿಖ್ ಧರ್ಮದವರಿಗೆ ನೀವು ಪೇಠ ತೊಡುವಂತಿಲ್ಲ, ಗಡ್ಡ ಬಿಡುವಂತಿಲ್ಲ ಎಂದು ಯುರೋಪಿನ ದೇಶಗಳಲ್ಲಿ ಮಾಡುತ್ತಿರುವ ಕಡ್ಡಾಯದ ವಿರುದ್ಧ ಅಲ್ಲಿ ಸಿಖ್ ಧರ್ಮೀಯರು ಇತರ ಎಲ್ಲಾ ಏಷ್ಯನರು ಒಟ್ಟಾಗಿ ದನಿಯೆತ್ತುತ್ತಿದ್ದಾರೆ.

ಧರ್ಮ ಮತ್ತು ವ್ಯಕ್ತಿ

ಶಿಕ್ಷಣ ಪಡೆಯಬಯಸುವ ಆಯಿಷ್ ತನ್ನ ಉಡುಪಿನ ಬಗ್ಗೆ ತನ್ನದೇ ತೀರ್ಮಾನ ತೆಗೆದುಕೊಳ್ಳಲು ಅವಕಾಶವಿದೆಯೇ? ಅವರ ತಂದೆ ತಾಯಿಗಳಿಗಾದರೂ ಆ ಸ್ವಾತಂತ್ರ್ಯವಿದೆಯೇ? ಎಂದ ಮೇಲೆ ಕಾಲೇಜು ಎಲ್ಲಾ ವಿದ್ಯಾರ್ಥಿನಿಯರೂ ಒಂದೇ ಸಮವಸ್ತ್ರವನ್ನು ಧರಿಸಬೇಕೆಂದರೆ ವಿವಿಧ ಧರ್ಮಗಳನ್ನೇ ಸುಧಾರಿಸುವ ಕೆಲಸಕ್ಕೆ ಕೈಹಾಕಬೇಕಾಗುತ್ತದೆ. ಯಾವುದೇ ಧರ್ಮದ ಸುಧಾರಣೆ ಆಯಾ ಧರ್ಮದ ಒಳಗಿನ ಜನರಿಂದ, ಅವರ ಒತ್ತಡದಿಂದ ಆಗುತ್ತದೆಯೇ ಹೊರತು ಹೊರಗಿನ ಹೇರಿಕೆಯಿಂದಲ್ಲ.

ಶಿಕ್ಷಣ ಸಂಸ್ಥೆಗೆ ಎಲ್ಲರಿಗೂ ಶಿಕ್ಷಣಕ್ಕೆ ತನ್ನ ಬಾಗಿಲನ್ನು ತೆರೆದಿಡುವುದು, ಶಿಕ್ಷಣ ಪಡೆಯುವಂತೆ ಮಾಡುವುದೇ ಆದ್ಯತೆ. ಅದಕ್ಕೆ ಅಡ್ಡಿಯಾಗುವುದನ್ನೆಲ್ಲಾ ಕಿತ್ತೊಗೆಯಬೇಕು. ಇದಕ್ಕಾಗಿ ಇಡೀ ಸಮಾಜವೇ ಒತ್ತಾಯ ಮಾಡಬೇಕು.

ಮುಸ್ಲಿಂ ಅಲ್ಪಸಂಖ್ಯಾತರ ಶಿಕ್ಷಣದ ಹಕ್ಕುಗಳು, ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹತ್ತಿಕ್ಕುವ ಪ್ರಯತ್ನಗಳನ್ನು ಪ್ರಜಾಪ್ರಭುತ್ವ ಪ್ರೇಮಿಗಳೆಲ್ಲವೂ ವಿರೋಧಿಸಬೇಕು. ಅದನ್ನು ಮುಸ್ಲಿಂ ಮೂಲಭೂತವಾದಿ ಸಂಘಟನೆ ಮಾತ್ರ ಬಿಡಬಾರದು. ದಕ್ಷಿಣ ಕನ್ನಡ ಅಲ್ಪಸಂಖ್ಯಾತರ ನಡುವೆ ಬೆಳೆಯುತ್ತಿರುವ ಮ ಮೂಲಭೂತವಾದಿ ಸಂಘಟನೆಗಳು ಪರಿಸ್ಥಿತಿಯನ್ನು ದುರುಪಯೋಗ ಮಾಡಿಕೊ ಬಿಡಬಾರದು.

ಒಂದು ನೆಪ ಮಾತ್ರ

ಸಮವಸ್ತ್ರದ ಪ್ರಶ್ನೆ, ದನದ ಮಾಂಸ, ಮತಾ ಇತ್ಯಾದಿಗಳಂತೆ ಹಿಂದು, ಮುಸ್ಲಿಮರ ನಡುವೆ ಹುಟ್ಟಿಸಲು ಅದನ್ನು ನಿರಂತರವಾಗಿಸಲು ಒ ನೆಪ ಮಾತ್ರ. ಸಂಘ ಪರಿವಾರದ ಈ ತಂತ್ರ ಜನಸಮುದಾಯ ಅರ್ಥ ಮಾಡಿಕೊಂಡರೆ ಆಗ ಅವರ ಕುತಂತ್ರ ಸೋತಂತೆಯೇ.

ಆಪರೇಷನ್ ಕಮಲಕ್ಕೆ ಮುಖಭಂಗ

ಪುಟ 3 ರಿಂದ

ಅವರಿಗೆ ಮುಖ್ಯವಾಗಿದ್ದವು. ಆದ್ದರಿಂದ ಬಿಜೆಪಿಗೆ ಅದರ ರಾಜಕೀಯ ತಂತ್ರ-ಕುತಂತ್ರಗಳಿಗೆ ಈ ಸೋಲು ದೊಡ್ಡ ಪಾಠವಾಗಿದೆ.

ಕಾಂಗ್ರೆಸ್ ದೌರ್ಬಲ್ಯ ಮತ್ತೆ ಬಯಲು: ಈಗಾಗಲೇ ನಮ್ಮ ಪತ್ರಿಕೆಯಲ್ಲಿ ಹಲವು ಬಾರಿ ಬರೆದಿರುವಂತೆ ಆಪರೇಷನ್ ಕಮಲದ ದಾಳಿಯನ್ನು ಎದುರಿಸುವ, ಬಿಜೆಪಿಯನ್ನು ಸೋಲಿಸುವ ಒಂದು ದೃಢ ನಿಶ್ಚಯವನ್ನು ಒಂದು ರಾಜಕೀಯ ಪಕ್ಷವಾಗಿ ಕೆಲಸ ಮಾಡುವುದನ್ನೇ ಕಾಂಗ್ರೆಸ್ ಮರೆತಿರುವುದು ಈ ಚುನಾವಣೆಗಳಲ್ಲಿಯೂ ಮುಂದುವರೆದಿದೆ. ಕಾಂಗ್ರೆಸ್‌ನ ಭದ್ರಕೋಟೆಗಳಾಗಿದ್ದ ಎರಡೂ ಕ್ಷೇತ್ರಗಳನ್ನು ಅದರಲ್ಲಿಯೂ ಘಟನಾನುಘಟಿ ಖರ್ಗೆಯವರ ಪುತ್ರನನ್ನು ಕಣಕ್ಕಿಳಿಸಿಯೂ ಸೋತಿದ್ದು ಭಾರಿ ಮುಖಭಂಗವೇ.

ಜೆಡಿ(ಎಸ್) ಸಾಧನೆ: ಜೆಡಿ(ಎಸ್) ಎರಡು ಸ್ಥಾನಗಳ ಗೆಲುವು ತನ್ನ ಸಾಮರ್ಥ್ಯವನ್ನು ಮತ್ತೆ ಸಾಬೀತು ಮಾಡಿದಂತಾಗಿದೆ. ಒಂದು ಸ್ಥಾನವನ್ನು ಕಾಂಗ್ರೆಸ್ ಮತ್ತು ಬಿಜೆಪಿಗಳ ತೆಕ್ಕೆಯಿಂದ ಕಸಿದುಕೊಂಡದ್ದು ಒಂದು ಬೋನಸ್. ಗೋವಿಂದರಾಜನಗರ ಕ್ಷೇತ್ರದಲ್ಲಿಯೂ ಕಾಂಗ್ರೆಸ್‌ನ ಗೆಲುವು ಕಾಂಗ್ರೆಸ್ ಗೆಲುವು ಮಾತ್ರವೇ ಅಲ್ಲ. ಅದರಲ್ಲಿ ಜೆಡಿ(ಎಸ್) ಪಾತ್ರವೂ ಗಣನೀಯವಾಗಿದೆ. ಹೀಗೆ ಬಿಜೆಪಿಯನ್ನು ಹಿಮ್ಮೆಟ್ಟಿಸುವಲ್ಲಿ, ಆಪರೇಷನ್ ಕಮಲವನ್ನು ಹಿಮ್ಮೆಟ್ಟಿಸುವಲ್ಲಿ ಜೆಡಿ(ಎಸ್) ದೃಢತೆಯಿಂದ ಕೆಲಸ ಮಾಡಿ ಯಶಸ್ಸು ಪಡೆದಿದೆ. ಇದು ರಾಜ್ಯದ ಪ್ರಜಾಪ್ರಭುತ್ವ ಪ್ರೇಮಿ ಜನರೆಲ್ಲರ ಪ್ರಶಂಸೆಗೆ ಪಾತ್ರವಾಗಿದೆ.

ನಾಳಿನ ಕಾರ್ಯಕ್ರಮಗಳು

- **ಆಗಸ್ಟ್ 28-31 2009.** ಎಸ್‌ಎಫ್‌ಐ ದಕ್ಷಿಣ ಕರ್ನಾಟಕ ಅಧ್ಯ ಶಿಬಿರ, ದಕ್ಷಿಣ ಕನ್ನಡ
- **ಆಗಸ್ಟ್ 28-31, 2009.** ಜನವಾದಿ ಮಹಿಳಾ ಸಂಘಟನೆಯ ರಾಜ್ಯಮಟ್ಟದ ಅಧ್ಯಯನ ಶಿಬಿರ, ಬಿಜಾಪುರ
- **ಆಗಸ್ಟ್ 30, 2009** ಕಾಂ. ಸೂರಿ ಜನ್ಮ ದಿನಾಚರಣೆ ಸೆನೆಟ್ ಹಾಲ್, ಬೆಂಗಳೂರು.
  ಬೆಳಿಗ್ಗೆ 10.30 ರಿಂದ ಸಂಜೆವರೆಗೆ
  ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಕುರಿ ವಿಚಾರಸಂಕಿರಣ, ಸಾಂಸ್ಕೃ ಕಾರ್ಯಕ್ರಮಗಳು
  ಭಾಗವಹಿಸುವವರು - ಪ್ರಭಾ ಪಟ್ನಾಯಕ್ ಮತ್ತಿತರರು.

ಕರ್ನಾಟಕಕ್ಕೆ ತಗುಲಿರುವ ಎಚ್1ಎನ್1

ಮಗ: ಅಪ್ಪ, ನೀವು ಬಿಜೆಪಿಗೆ ಓಟು ಹಾಕದಿದ್ರೆ ಹಾಳಾಗಿ ಹೋಗ್ತೀರ ಉದ್ಧಾರ ಆಗಲ್ಲ, ರಸ್ತೆಗಳೆಲ್ಲ ಹೀಗೇ ಹಾಳಾಗೇ ಇರುತ್ತೆ. ಅಭಿವೃದ್ಧಿ ಆಗಲ್ಲ. ಅಂತ ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರಂತೆ.

ಅಪ್ಪ: ಹೌದು ಮಗು, ಅದು ಕೊಡ್ತಿವಿ, ಇದು ಕೊಡ್ತೀವಿ ಅಂತ ಹೇಳಿದ್ರೆ 'ನೀತಿ ಸಂಹಿತೆ' ಉಲ್ಲಂಘನೆ ಆಗುತ್ತ ಅಂತ ಹೀಗೆ 'ಅನೀತಿ ಸಂಹಿತೆ' ಪಾಲಿಸಿರಬಹುದು.

ಮಗ: ಅದ್ರೆ ಅವರು ಹೇಳಿದ್ದು ನಿಜ ಅಲ್ವೇ? ಅವರು ಹಾಗೆ ಮಾಡುವವರೇ ತಾನೇ?

ಅಪ್ಪ: ಇರಬಹುದು ಮಗು.

ಮಗ: ನಿಜ ಹೇಳಿದ್ದಕ್ಕೆ ಚುನಾವಣಾ ಆಯೋಗ ಅವರಿಗೆ ಛೀಮಾರಿ, ಥೂಮಾರಿ ಹಾಕಿದೆಯಲ್ಲ ಯಾಕೆ?

ಅಪ್ಪ: ಗೊತ್ತಿಲ್ಲ ಮಗು.

* * *

ಮಗ: ಅಪ್ಪ ಹಂದಿ ಜ್ವರ ಎಷ್ಟು ಜನರಿಗೆ ಬಂದಿದೆ?

ಅಪ್ಪ: ದಿನಾ ಪೇಪರ್ ಗಳಲ್ಲಿ ಪ್ರತಿಕ್ಷಣ ಟೀವಿಗಳಲ್ಲಿ ಅದೇ ಸುದ್ದಿ ತಾನೆ? ಕ್ರಿಕೆಟ್ ಆಟದಲ್ಲಿ ಬೌಂಡರಿ, ಸಿಕ್ಸರ್ ಬಾರಿಸಿದಾಗ ಕೂಗಿಕೊಳ್ಳುವ ಹಾಗೆ ಇನ್ನೊಂದು ಸಾವು, ಮತ್ತೊಂದು ಸಾವು ಅಂತ ಸಂಭ್ರಮದಿಂದ ಕೂಗಿಕೊಳ್ತಿದ್ದಾರಲ್ಲ. ಇನ್ನು ರೋಗಿ ಕಫ ಉಗುಳುವುದನ್ನು ವಾಂತಿ, ಬೇಧಿಯನ್ನು 'ಲೈವ್' ತೋರಿಸುವುದೊಂದೇ ಬಾಕಿ.

ಮಗ: ಆ ಮಾತ್ರೆ, ಲಸಿಕೆ, ಉಪಕರಣಗಳ ತಯಾರಕರು ಈ ಮಾಧ್ಯಮಗಳಿಗೂ ಏನಾದರೂ 'ಸೋಂಕು' ತಗುಲಿಸಿದ್ದಾರೇನಪ್ಪ?

ಅಪ್ಪ: ಗೊತ್ತಿಲ್ಲ ಮಗು.

* * *

ಕ್ಯಾತೆ

ಶ್ರೀ

ಮಗ: ರಾಜ್ಯದ ಆರೋಗ್ಯ ಮಂತ್ರಿ ನಿದ್ದೆ ಮಾಡ್ತಿದ್ದಾರೆ ಅಂತ ಸಿದ್ದರಾಮಯ್ಯ ಹೇಳಿದ್ದಾರಂತೆ.

ಅಪ್ಪ: ಹೌದು ಮಗು, ಜನಗಳಿಗೆ ಏನಾದರಾಗಲಿ, ಸರಕಾರ ಉಪಚುನಾವಣೆ ಜ್ವರದಿಂದ ಬಳಲುತ್ತಿದೆ.

ಮಗ: ಆರೋಗ್ಯ ಮಂತ್ರಿ ಬಗ್ಗೆ ಮಾತನಾಡಿದ ತಪ್ಪಿಗೆ ಸಿದ್ದರಾಮಯ್ಯನವರಿಗೆ ಹಂದಿ ಜ್ವರ ಬರಲಿ ಅಂತ (ಅನಾರೋಗ್ಯ) ಮಂತ್ರಿ ಜನಾರ್ಧನ ರೆಡ್ಡಿಗಾರು ಶಾಪ ಕೊಟ್ಟಿದ್ದಾರಂತೆ.

ಅಪ್ಪ: ಹೌದು ಮಗು ಪೇಪರ್ ನಲ್ಲಿ ಓದಿದೆ.

ಮಗ: ಈ ರೆಡ್ಡಿಗಳೇ ಬಿ ಜೆ ಪಿ ಗೆ ಎಚ್1ಎನ್1 ಹಾಗೆ ತಗುಲಿಕೊಂಡಿದ್ದಾರೆ ಅಂತ ಹಳೇ ಬಿಜೆಪಿಯವರೇ ಗೊಣಗಿಕೊಳ್ಳುತ್ತಿದ್ದಾರಂತೆ.

ಅಪ್ಪ: ಗೊತ್ತಿಲ್ಲ ಮಗು, ಪೇಪರ್ ನಲ್ಲಿ ಬಂದಿಲ್ಲ.

ಮಗ: ಹಾಗೇ ಈ ಬಿ ಜೆ ಪಿ ಗಳೇ ಕರ್ನಾಟ ತಗುಲಿರುವ ಎಚ್1ಎನ್1 ಅಂತ ಇನ್ನಾ ಹೇಳ್ತಿದ್ರು.

ಅಪ್ಪ: ಗೊತ್ತಿಲ್ಲ ಮಗು.

* * *

ಮಗ: ಅಪ್ಪ ದಂಧೆ ಜ್ವರ ಎಲ್ಲ ಕಡೆ ಹ ಇದೆ.

ಅಪ್ಪ: ಸರಿಯಾಗಿ ಹೇಳು ಮಗು ಅದು ಹ ಜ್ವರ ಅಲ್ವೇ?

ಮಗ: ಮಾತ್ರೆಗಳನ್ನು, ಲಸಿಕೆಗಳ ಉಪಕರಣಗಳನ್ನು ತಯಾರು/ಮಾರಾಟ ಮಾ ಬಂಡವಾಳಿಗರು ತಮ್ಮ ದಂಧೆ ಹೆಚ್ಚಿಸಿಕೊಳ್ಳು ಈ ಜ್ವರದ ಭೀತಿ ಹರಡುತ್ತಾ ಇದ್ದಾ ಹೌದೇನಪ್ಪ?

ಅಪ್ಪ: ಹೌದು ಮಗು.

ಮಗ: ಇದೇನಪ್ಪ ಇದು ಯಾವಾಗ್ಲೂ 'ಗೊ ಮಗು' ಅಂತಿದ್ದೋನು ಹೌದು ಮಗು ಅಂತಿದ್ದಿ ನಿಂಗೇನಾದ್ರೂ ಜ್ವರ ಬಂದಿದೆಯಾ?

ಅಪ್ಪ: ಗೊತ್ತಿಲ್ಲ ಮಗು!

ಕೋಟ್ಯಾಂತರ ರೈತರು, ಮೀನುಗಾರರು, ಕಾರ್ಮಿಕರ ಮೇಲೆ ಮುಕ್ತ ವ್ಯಾಪಾರದ ದಾಳಿ

ಯುಪಿಎ ಸರ್ಕಾರದ ಭಾರಿ ಜನದ್ರೋಹ

ಜಿ.ಎನ್.ನಾಗರಾಜ್

15.08.2009 ಭಾರತ ದೇಶವಿಡೀ 63ನೇ ತಂತ್ರ್ಯೋತ್ಸವದ ಸಂಭ್ರಮ. ಆದರೆ ಅಂದೇ ತದ ಪತ್ರಿಕೆಗಳಲ್ಲಿ ಭಾರತದ ಕೋಟ್ಯಾಂತರ ರು, ಮೀನುಗಾರರು ಹಾಗೂ ಕಾರ್ಮಿಕರಿಗೆ ರಣ ಶಾಸನವಾಗುವ ವ್ಯಾಪಾರ ಒಪ್ಪಂದಕ್ಕೆ ಕೇಂದ್ರ ರ್ಕಾರ ಸಹಿ ಹಾಕಿದ ವಿವರಗಳು ಚ್ಚುಕೊಳ್ಳತೊಡಗಿದ್ದವು. ಎರಡು ದಿನಗಳ ಹಿಂದೆ .8.2009 ರಂದು ಥೈಲ್ಯಾಂಡ್ ದೇಶದ ರಾಜಧಾನಿ ್ಯಾಂಕಾಕ್‌ನಲ್ಲಿ ಭಾರತದ ಮತ್ತು ಆಸಿಯಾನ್ ೇಶಗಳ ನಡುವೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ರತದ ವಾಣಿಜ್ಯ ಸಚಿವ ಆನಂದ್ ಶರ್ಮಾ ಸಹಿ ಕಿದರು.

ಬಿಜೆಪಿಯ ವಾಜಪೇಯಿ ಸರ್ಕಾರ 2003 ರಲ್ಲಿ ರಂಭ ಮಾಡಿದ ಈ ಒಪ್ಪಂದದ ಪ್ರಕ್ರಿಯೆ ಆರು ರ್ಷಗಳ ನಂತರ 2009 ರಲ್ಲಿ ಸಹಿ ಹಾಕಲಾಗಿದೆ. ಪ್ಪಂದದ ಮಾತುಕತೆಯ ಸಮಯದಲ್ಲಿಯೇ ರತದ ಪ್ಲಾಂಟೇಷನ್ ಉದ್ಯಮ, ಜವಳಿ ಕೈಗಾರಿಕೆ, ಭಾರತ ಕಿಸಾನ್ ಸಭಾ, ಸಿಐಟಿಯು ದ ಮೇಲೆ ಈ ಒಪ್ಪಂದ ಆಘಾತಕಾರಿ ಣಾಮ ಬೀರಲಿದೆ ಎಂದು ಸರ್ಕಾರಕ್ಕೆ ಮನವಿ ಸಿದ್ದವು. ಒಪ್ಪಂದಕ್ಕೆ ಸಹಿ ಹಾಕುವ ಮುನ್ನವೇ ಳ ಸರ್ಕಾರವೇ ಕೇಂದ್ರ ಸರ್ಕಾರಕ್ಕೆ ಈ ಒಪ್ಪಂದಕ್ಕೆ ಹಾಕಬಾರದು ಎಂದು ಒತ್ತಾಯ ಮಾಡಿತ್ತು. ಆದರೆ ಈ ಎಲ್ಲಾ ಒತ್ತಾಯಗಳನ್ನು ಧಿಕ್ಕರಿಸಿ, ತ್ತಿನಲ್ಲಿ ಕೂಡ ಒಂದೇ ಒಂದು ಮಾತು ಚರ್ಚಿಗೆ ಿ, ಒಪ್ಪಂದದ ವಿವರ ಮತ್ತು ಪರಿಣಾಮಗಳನ್ನು ದ ಗಮನಕ್ಕೆ ತರದೇ ಯುಪಿಎ ಸರ್ಕಾರ ಸಹಿ ದ್ದು ದೇಶದ ಜನತೆಗೆ ಮಾಡಿದ ದೊಡ್ಡ ಯ.

ಗೆ ಮರಣ ಶಾಸನ

ಆಸಿಯಾನ್ ದೇಶಗಳು ಭಾರತದಂತೆಯೇ ಉಷ್ಣ ಯದ ಮಳೆನಾಡು ವಾತಾವರಣ ಹೊಂದಿರುವ ಗಳು. ಅಲ್ಲಿಯ ಮುಖ್ಯ ಕೃಷಿ ಉತ್ಪನ್ನಗಳು ಕರಾವಳಿ ಪ್ರದೇಶದ ಉತ್ಪನ್ನಗಳಾದ ತೆಂಗು , ರಬ್ಬರ್, ಏಲಕ್ಕಿ, ಮೆಣಸು ಮೊದಲಾದ ಬಾರ ಪದಾರ್ಥಗಳು, ಕಾಫಿ, ಟೀ, ಅಕ್ಕಿ ಅದರಲ್ಲಿಯೂ ಈ ದೇಶಗಳಿಂದ ನಮ್ಮ ಈಗ ಹತ್ತು ವರ್ಷಗಳಿಂದಲೂ ದೊಡ್ಡ ಣದಲ್ಲಿ ತಾಳೆ ಎಣ್ಣೆ-ಪಾಮ್ ಆಯಿಲ್ ಾಗುತ್ತಿದೆ. ಇದು ತೆಂಗು ಬೆಳೆಯ ಮೇಲೆ ಮಾತ್ರ ಅಲ್ಲದೆ ಭಾರತದ ಎಲ್ಲ ಎಣ್ಣೆ ಕಾಳು ಬೆಳೆಗಾರರ ಮೇಲೆ ದೊಡ್ಡ ದುಷ್ಪರಿಣಾಮವನ್ನು ಬೀರಿತ್ತು. ಕಡಲೆಕಾಯಿ (ಶೇಂಗಾ), ಸೂರ್ಯಕಾಂತಿ ಬೆಳೆಗಾರರಿಗೆ ಮರಣಾಂತಿಕ ಪೆಟ್ಟು ಕೊಟ್ಟಿತ್ತು. ಸೂರ್ಯಕಾಂತಿ ಬೆಳೆಯ ಪ್ರಮಾಣವೇ ಕುಸಿದುಹೋಗಿತ್ತು. ಕಡಲೇಕಾಯಿ ಬೆಲೆ ಕುಸಿತ ಶಿರಾದಲ್ಲಿ ರೈತರ ಹೋರಾಟ ಮತ್ತು ಗೋಲಿಬಾರ್‌ನಿಂದ ಇಬ್ಬರು ರೈತರ ಸಾವಿಗೆ ಕಾರಣವಾಗಿತ್ತು. ಈ ಬೆಳೆಗಳನ್ನು ಬೆಳೆಯುವ ಪ್ರದೇಶಗಳಲ್ಲಿ ಆತ್ಮಹತ್ಯೆಗಳು ಹೆಚ್ಚಾದವು. ಹೀಗೆ ಮುಕ್ತವ್ಯಾಪಾರ ಒಪ್ಪಂದಕ್ಕೆ ಮೊದಲೇ ಇಂತಹ ಪರಿಣಾಮವನ್ನು ಭಾರತದ ರೈತರು ಎದುರಿಸಬೇಕಾಯಿತು.

ಆಸಿಯಾನ್ ಎಂದರೆ

ಆಸಿಯಾನ್ ಎಂದರೆ ಏಷ್ಯಾದ ಹುಲಿಗಳು ಮ ಕರೆಸಿಕೊಂಡ ಭಾರತದ ಪೂರ್ವಕ್ಕೆ ವ 10 ದೇಶಗಳು ಸೇರಿದ ವಾಣಿಜ್ಯ ಕೂಟ. ೀಷ್ಯಾ, ಇಂಡೋನೇಷ್ಯಾ, ಮ್ಯಾನ್ಮಾರ್ ರ್ಮಾ), ಥೈಲ್ಯಾಂಡ್, ಫಿಲಿಫೈನ್ಸ್, ಯಟ್ನಾಂ, ಕಾಂಬೋಡಿಯಾ, ಲಾವೋಸ್, ಾಪುರ

ಮೇರಿಕಾ ದೇಶದ ಜೊತೆ ಆಪ್ತ ಮೈತ್ರಿಯನ್ನು ಂದಿದ್ದ ದೇಶಗಳಿವು. ವ್ಯಾಪಾರದಲ್ಲಿ ವಿಶೇಷ ಕೂಲಗಳನ್ನು ಪಡೆದು ದೊಡ್ಡ ಣದಲ್ಲಿ ತನ್ನ ಉತ್ಪಾದನೆಗಳನ್ನು ಆ ದೇಶಕ್ಕೆ ಮಾಡುತ್ತಿದ್ದ ದೇಶಗಳು. ಹೀಗಾಗಿ ಾರದ ಬೆಳವಣಿಗೆಯಲ್ಲಿ ಭಾರತಕ್ಕಿಂತ ಮುಂದಿದ್ದವು. ಇದರಿಂದಾಗಿ ವೇಗವಾಗಿ ದವು. ಆ ಕಾರಣಕ್ಕಾಗಿಯೇ ಏಷ್ಯಾದ ಗಳು ಎಂಬ ಹೆಸರನ್ನು ಪಡೆದಿವೆ.

ಶ್ರೀಲಂಕಾದೊಂದಿಗೆ ಮುಕ್ತ ವ್ಯಾಪಾರ ಒಪ್ಪಂದದ ಅನುಭವ

ಈಗಾಗಲೇ ಭಾರತ, ಶ್ರೀಲಂಕಾದೊಂದಿಗೆ ಮುಕ್ತ ವ್ಯಾಪಾರ ಮಾಡಿಕೊಂಡಿದೆ. ಭಾರತಕ್ಕೆ ಹೋಲಿಸಿದರೆ ಬಹಳ ಸಣ್ಣ ದೇಶ ಶ್ರೀಲಂಕಾ. ಅದರೊಂದಿಗೆ ಮಾಡಿಕೊಂಡಿರುವ ಮುಕ್ತ ವ್ಯಾಪಾರ ಒಪ್ಪಂದ ಭಾರತದಲ್ಲಿ ಟೀ, ಅಡಿಕೆ, ತೆಂಗು ಮತ್ತು ಸಾಂಬಾರ ಪದಾರ್ಥಗಳ ಬೆಲೆಯನ್ನು ಕುಗ್ಗಿಸಿದೆ. ಕೇರಳದ ವೈನಾಡು ಪ್ರದೇಶದಲ್ಲಿ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವಾಗಿದೆ. ಕರ್ನಾಟಕದ ಕರಾವಳಿಯ ರೈತರ ಮೇಲೆ ಕೂಡಾ ತೀವ್ರ ಪರಿಣಾಮ ಬೀರಿದೆ.

ಅಲ್ಲಿ ಇಳುವರಿ ಹೆಚ್ಚು, ಖರ್ಚು ಕಡಿಮೆ

ಆಸಿಯಾನ್ ದೇಶಗಳಲ್ಲಿ ಈ ವಿವಿಧ ಬೆಳೆಗಳ ಪ್ರತಿ ಎಕರೆ ಇಳುವರಿ ಭಾರತಕ್ಕೆ ಹೋಲಿಸಿದರೆ 2 ಪಟ್ಟಿನಿಂದ ಹತ್ತು ಪಟ್ಟು ಹೆಚ್ಚು.

ಎಕರೆಗೆ ಇಳುವರಿ

	ಭಾರತ	ವಿಯಟ್ನಾಂ	ಇಂಡೋನೇಷ್ಯಾ
ಕಾಫಿ	306 ಕೆ.ಜಿ	700 ಕೆ.ಜಿ	
ಮೆಣಸು	128 ಕೆ.ಜಿ.	480 ಕೆ.ಜಿ.	920 ಕೆ.ಜಿ

ಮೇಲಿನ ಉದಾಹರಣೆಗಳನ್ನು ನೋಡಿದರೆ ಸಾಕು. ಈ ದೇಶಗಳಿಂದ ಕಾಫಿ, ಮೆಣಸು ಭಾರತಕ್ಕೆ ಧಾಳಿಯಿಟ್ಟರೆ ಭಾರತದ ರೈತರ ಸ್ಥಿತಿ ಏನಾಗಬಹುದು ಎಂಬುದು ಯಾರಿಗಾದರೂ ಹೊಳೆಯುತ್ತದೆ. ಇದೇ ರೀತಿ ತೆಂಗು, ಅಡಿಕೆ, ಟೀ ಏಲಕ್ಕಿ ಮುಂತಾದ ಬೆಳೆಗಳಲ್ಲಿಯೂ ಇಳುವರಿ ಹೆಚ್ಚು. ಪಾಮ್ ಆಯಿಲ್ ಅಂತೂ ವಿಪರೀತ ಹೆಚ್ಚು ಇಳುವರಿ.

ಜೊತೆಗೆ ಉತ್ಪಾದನಾ ವೆಚ್ಚವೂ ಕೂಡ ಭಾರತಕ್ಕಿಂತ ಬಹಳ ಕಡಿಮೆ. ರಸಗೊಬ್ಬರ, ವಿದ್ಯುತ್, ಔಷಧಿಗಳು ಇವುಗಳ ಬೆಲೆ ಕಡಿಮೆ. ಹೆಚ್ಚು ಇಳುವರಿ, ಕಡಿಮೆ ಉತ್ಪಾದನಾ ವೆಚ್ಚ ಎರಡೂ ಸೇರಿ ಅತ್ಯಂತ ಅಗ್ಗದ ಬೆಲೆಗೆ ಕೃಷಿ ಉತ್ಪನ್ನಗಳು ಆಮದಾದರೆ ಭಾರತದ ಕಾಫಿ, ಟೀ, ತೆಂಗು, ಅಡಿಕೆ, ಮೆಣಸು ಇತ್ಯಾದಿಗಳ ಬೆಳೆಗಾರರು ತಮ್ಮ ತೋಟಗಳನ್ನು ಸುಡುವುದೊಂದೇ ಮಾರ್ಗವಾಗುತ್ತದೆ.

ಮೀನುಗಾರರು, ಜವಳಿ ಮತ್ತಿತರ ಕೈಗಾರಿಕೆಗಳು

ಈಗಾಗಲೇ ಮೀನುಗಾರರು ಭಾರತದಲ್ಲಿ ತೀವ್ರ ಸಂಕಷ್ಟದಲ್ಲಿದ್ದಾರೆ. ಮುಕ್ತ ವ್ಯಾಪಾರ ಒಪ್ಪಂದದ ಫಲವಾಗಿ ಕಡಲ ಉತ್ಪನ್ನಗಳು ತೀವ್ರವಾಗಿ ಧಾಳಿ ಇಟ್ಟರೆ ಲಕ್ಷಾಂತರ ಮೀನುಗಾರರ ಪರಿಸ್ಥಿತಿ ಏನಾಗಬಹುದು. ಕೈಗಾರಿಕೆಗಳಲ್ಲಿ ಬಟ್ಟೆಗಳ ಉತ್ಪಾದನೆ ಈ ದೇಶಗಳಲ್ಲಿ ಭಾರತಕ್ಕಿಂತ ಅಗ್ಗವಾಗಿದೆ. ಅನೇಕ ಲಘು ಕೈಗಾರಿಕೆಗಳು, ಗೃಹ ಉಪಕರಣಗಳು, ಆಟದ ಸಾಮಾನುಗಳು ಇತ್ಯಾದಿ ಕೂಡ ಅಗ್ಗವಾಗಿ ತಯಾರಾಗುತ್ತವೆ. ಈ ಕೈಗಾರಿಕೆಗಳು ಕೂಡ ತೀವ್ರವಾಗಿ ತೊಂದರೆಗೊಳಗಾಗುತ್ತವೆ. ಮುಖ್ಯವಾಗಿ ಕಾರ್ಮಿಕರು ನಿರುದ್ಯೋಗಿಗಳಾಗುವ ಪರಿಸ್ಥಿತಿ ಉದ್ಭವವಾಗುತ್ತದೆ.

ಕೈಗಾರಿಕೆಗಳಿಗೆ ರಕ್ಷಣೆ, ರೈತರು, ಕಾರ್ಮಿಕರಿಗೆ?

ಈ ಒಪ್ಪಂದ ತೊಂದರೆಗೊಳಗಾಗುವ ಕೈಗಾರಿಕೆಗಳಿಗೆ, ಅವರ ಮಾಲೀಕರ ನಷ್ಟಕ್ಕೆ ಪರಿಹಾರ ನೀಡಲು ಭಾರತ ಸರ್ಕಾರ ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ಕೇಳಿದೆ. ಆದರೆ ರೈತರಿಗೆ, ಮೀನುಗಾರರಿಗೆ, ಕಾರ್ಮಿಕರಿಗೆ ಯಾವ ರಕ್ಷಣೆಯ ಮಾತೂ ಇಲ್ಲ.

ಲಾಭ ಯಾರಿಗೆ?

ಇಂತಹ ಒಪ್ಪಂದದಿಂದ ಭಾರತಕ್ಕೆ ಯಾವ ಪ್ರಯೋಜನವೂ ಇಲ್ಲವೇ? ಇಲ್ಲದಿದ್ದರೆ ಯಾಕೆ ಈ ಒಪ್ಪಂದ ಮಾಡಿಕೊಳ್ಳಲು ಹೋಗುತ್ತದೆ? ಎಂಬ ಪ್ರಶ್ನೆಗಳು ಏಳುತ್ತವೆ. ಲಾಭ ಇದೆ. ಭಾರತದ ದೊಡ್ಡ ಬಂಡವಾಳಶಾಹಿಗಳು ಈ ದೇಶಗಳಲ್ಲಿ ಹೋಗಿ ಬಂಡವಾಳ ಹೂಡಬಹುದು. ತಮ್ಮ ಕೈಗಾರಿಕೆಗಳ ಶಾಖೆಗಳನ್ನು ತೆರೆಯಬಹುದು. ಹೆಚ್ಚು ಲಾಭ ಪಡೆಯಬಹುದು. ಆ ದೇಶಗಳಲ್ಲಿ ಉದ್ಯೋಗ ನಿರ್ಮಾಣ ಭಾರತದಲ್ಲಿ ನಿರುದ್ಯೋಗ. ಉಕ್ಕು ಮೊದಲಾದ ಆಧುನಿಕ ಕೈಗಾರಿಕೆಗಳ ರಫ್ತುಗಳಲ್ಲಿ ಹೆಚ್ಚಳ, ವಿಮೆ, ಬ್ಯಾಂಕಿಂಗ್, ಶಿಕ್ಷಣ, ಆರೋಗ್ಯ ಮೊದಲಾದ ಸೇವಾ ವಲಯಗಳಲ್ಲಿಯೂ ಭಾರತದ ದೊಡ್ಡ ಬಂಡವಾಳಶಾಹಿಗಳಿಗೆ ಲಾಭವಾಗಲಿದೆ.

ಹೀಗೆ ಭಾರತದ ದೊಡ್ಡಬಂಡವಾಳಗಾರರ ಅತಿ ಲಾಭದಾಸೆಗಾಗಿ ಭಾರತದ ರೈತರ, ಮೀನುಗಾರರ, ಕಾರ್ಮಿಕರ ಹಿತವನ್ನು ಕಾಂಗ್ರೆಸ್ ಮತ್ತು ಯುಪಿಎ ಬಲಿಕೊಡುತ್ತಿದೆ.

ಮುಕ್ತ ವ್ಯಾಪಾರ ಒಪ್ಪಂದ ಎಂದರೇನು?


ದೇಶದಿಂದ ದೇಶಕ್ಕೆ ಯಾವುದೇ ವಸ್ತುವಿನ ವ್ಯಾಪಾರ ನಡೆಯುವಾಗ ಆಯಾ ದೇಶವು ತಮ್ಮ ದೇಶದ ಹಿತಕ್ಕೆ ಅನುಗುಣವಾಗಿ ಅನೇಕ ನಿರ್ಬಂಧಗಳನ್ನು ವಿಧಿಸುತ್ತದೆ. ತಮ್ಮ ದೇಶದ ಕೃಷಿ ಕೈಗಾರಿಕೆಗಳಲ್ಲಿ ಯಥೇಚ್ಛವಾಗಿ ಉತ್ಪಾದನೆಯಾಗುವ ವಸ್ತುವಾದರೆ ಸಂಪೂರ್ಣ ಆಮದು ನಿರ್ಬಂಧ ಹೇರಬಹುದು. ಇತರ ವಸ್ತುಗಳಿಗೆ ತಮ್ಮ ದೇಶದ ಉತ್ಪಾದಕರಿಗೆ ನಷ್ಟ ತೊಂದರೆಯಾಗದಂತೆ ವಿವಿಧ ಪ್ರಮಾಣದ ತೆರಿಗೆಗಳನ್ನು ವಿಧಿಸಬಹುದು. ಇಂತಹ ತೆರಿಗೆಗಳು ಶೇ.300 ರಷ್ಟು ಎಂದರೆ ಉತ್ಪಾದನೆ ವೆಚ್ಚದ ಮೂರು ಪಟ್ಟು ಕೂಡ ಆಮದು ಸುಂಕ ಹೇರುವ ಅವಕಾಶಗಳಿವೆ. ಮುಕ್ತ ವ್ಯಾಪಾರವೆಂದರೆ ಇಂತಹ ಯಾವುದೇ ಆಮದು ನಿರ್ಬಂಧವಿಲ್ಲದೆ ಮುಕ್ತವಾಗಿ ಎಲ್ಲ ವಸ್ತುಗಳು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸರಾಗವಾಗಿ ಆಮದಾಗಬಹುದು. ಆಮದು ಸುಂಕವನ್ನು ಕೂಡ ಸೊನ್ನೆಗೆ ಇಳಿಸುವುದು, ಸಂಪೂರ್ಣ ವಾಗಿ ತೆಗೆದು ಹಾಕುವುದು ಮುಕ್ತ ವ್ಯಾಪಾರದ ಗುರಿ.

ಭಾರತ-ಆಸಿಯಾನ್ ಮುಕ್ತ ವ್ಯಾಪಾರ ಒಪ್ಪಂದ: ಭಾರತ ಮತ್ತು ಆಸಿಯಾನ್ ದೇಶಗಳ ನಡುವಣ ಮುಕ್ತವಾದ ಒಪ್ಪಂದವೆಂದರೆ 10,885 ವಸ್ತುಗಳ ಮೇಲೆ ಇರುವ ತೆರಿಗೆಗಳನ್ನು 2010 ಮತ್ತು 2019ರ ನಡುವೆ ವಿವಿಧ ಹಂತಗಳಲ್ಲಿ ಪೂರ್ಣವಾಗಿ ತೆಗೆದು ಹಾಕುವುದು ಎಂದು, 2010ರಿಂದಲೇ ಆರಂಭವಾಗಿ ಪ್ರತಿವರ್ಷ ತೆರಿಗೆಗಳನ್ನು ಇಳಿಸಲಾಗುತ್ತದೆ. 2010-2013ರ ನಡುವೆ 7,788 ವಸ್ತುಗಳು 1252 ವಸ್ತುಗಳ ಮೇಲೆ 2016ರ ಒಳಗೆ ತೆರಿಗೆಗಳನ್ನು ಪೂರ್ಣವಾಗಿ ತೆಗೆದುಹಾಕುವುದು. ಇವುಗಳಲ್ಲಿ ಕೆಲ ವಸ್ತುಗಳನ್ನು ಸೂಕ್ಷ್ಮ/ಅತಿ ಸೂಕ್ಷ್ಮ ಎಂದು ಪರಿಗಣಿಸಲಾಗಿದೆ. ಈ ವಸ್ತುಗಳ ಮೇಲಿನ ತೆರಿಗೆಗಳನ್ನು 2019ರ ಒಳಗೆ ಪೂರ್ಣವಾಗಿ ತೆಗೆದುಹಾಕಲಾಗುತ್ತದೆ. 489 ವಸ್ತುಗಳನ್ನು ಮಾತ್ರ ಹೀಗೆ ತೆರಿಗೆಗಳನ್ನು ಸೊನ್ನೆಗಿಳಿಸುವುದರಿಂದ ಪಾರು ಮಾಡಲಾಗಿದೆ. ಇದಕ್ಕೆ ನೆಗೆಟಿವ್ ಪಟ್ಟಿ ಎನ್ನುತ್ತಾರೆ.

ಯುಪಿಎ ಸರ್ಕಾರದ ವಾದವೇನೆಂದರೆ ಹೀಗೆ ವಿನಾಯಿತಿ ಪಡೆದ ವಸ್ತುಗಳು, ಸೂಕ್ಷ್ಮ/ಅತಿ ಸೂಕ್ಷ್ಮ ಎಂದು ಮಾಡಿರುವ ವಿಂಗಡಣೆಗಳಿಂದ ಭಾರತದ ಕೃಷಿ, ಕೈಗಾರಿಕೆಗಳಿಗೆ ರಕ್ಷಣೆ ದೊರಕುತ್ತದೆ. ಆದ್ದರಿಂದ ಭಾರತದ ರೈತರು, ಕಾರ್ಮಿಕರ ಹಿತಗಳನ್ನು ಕಾಯ್ದುಕೊಳ್ಳಲಾಗಿದೆ.

ಆದರೆ ಸೂಕ್ಷ್ಮ/ಅತಿ ಸೂಕ್ಷ್ಮ ವಸ್ತುಗಳಲ್ಲಿ ಟೀ, ಕಾಫಿ, ಮೆಣಸು, ಪಾಮ್‌ಆಯಿಲ್‌ಗಳ ಮೇಲೆ ಕೂಡ ಆಮದು ಸುಂಕ ಕಡಿತ 2010ರಿಂದಲೇ ಆರಂಭವಾಗುತ್ತದೆ. ಈ ತೆರಿಗೆಗಳು ವಿಶ್ವ ವಾಣಿಜ್ಯ ಸಂಸ್ಥೆಯ ದರಗಳ ಜೊತೆಗೆ ಹೋಲಿಸಿ ಮಾಡುವ ಬದಲು ಭಾರತದಲ್ಲಿ 2005ರಲ್ಲಿ ಜಾರಿಯಲ್ಲಿದ್ದ ದರಗಳ ಅವಲಂಬಿಸಿ ಕಡಿತ ಮಾಡಲಾಗುತ್ತದೆ. ಇದು ಭಾರತದ ರೈತರಿಗೆ 2010ರಿಂದಲೇ ಸಂಕಷ್ಟಗಳನ್ನು ಒಡ್ಡಲಾರಂಭಿಸುತ್ತದೆ. ತೆಂಗು ತೆರಿಗೆ ಕಡಿತದಿಂದ ಹೊರಗೆ ಇರಿಸಲಾಗಿದ್ದರೂ ಕೂಡ ಪಾಮ್‌ಆಯಿಲ್ ಮೇಲೆ ಹಾಕುವ ಸುಂಕದಲ್ಲಿ ವಿನಾಯಿತಿ ನೀಡಿದರೆ ತೆಂಗು ಬೆಳೆಗೆ ದೊಡ್ಡ ಆಘಾತವೇ ಆಗುತ್ತದೆ.

ಹೀಗೆ ಕೃಷಿ, ಕೈಗಾರಿಕೆಗಳನ್ನು ರಕ್ಷಿಸಲಾಗಿದೆ ಎಂಬ ವಾದ ಪೊಳ್ಳಾಗುತ್ತದೆ.



ಕರ್ನಾಟಕದ ಕರಾವಳಿಯಲ್ಲಿರುವ ಆದಿವಾಸಿ ಸಮುದಾಯದ 'ಕೊರಗರ' ಬದುಕು ಬಲು ದಾರುಣವಾಗಿದೆ. ಅವರ ಬದುಕಿನ ಒಂದು ಚಿತ್ರಣ ನಿಮಗಾಗಿ

'ಕೊರಗರು' ಎಂಬುವರ ದಾರುಣ ಬದುಕು

ದಕ್ಷಿಣ ಕನ್ನಡದ ಬುಡಕಟ್ಟು ಸಮುದಾಯ 'ಕೊರಗರು'

ಕೃಷ್ಣಪ್ಪ ಕೊಂಚಾಡಿ

ಅವಿಭಜಿತ ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆಯ ತುಳು ಸಂಸ್ಕೃತಿಯಷ್ಟೇ ವಿಶೇಷ ಮಹತ್ವದ, ಪ್ರತ್ಯೇಕ ಭಾಷೆ, ಆಚಾರ ವಿಚಾರ ಸಾಂಸ್ಕೃತಿಕ ವೈವಿಧ್ಯತೆಯನ್ನು ಹೊಂದಿರುವ ಬುಡಕಟ್ಟು ಸಮುದಾಯವೊಂದಿದೆ. ಅದುವೇ 'ಕೊರಗರು' ಎಂದು ಕರೆಯಲಾಗುವ ಸಮುದಾಯ. ಬ್ರಿಟಿಷರು ಪ್ರಾರಂಭಿಸಿದ ಮೊದಲ ಜನಗಣತಿಯೂ ಸೇರಿದಂತೆ ಕಳೆದ ಒಂದೂವರೆ ಶತಮಾನದ ಜನಗಣತಿಯ ಅಂಕಿ ಸಂಖ್ಯೆಗಳನ್ನು ಗಮನಿಸಿದರೆ ಇವರ ಜನಸಂಖ್ಯೆಯ ಪ್ರಮಾಣ ಕುಸಿತಗೊಂಡಿದೆ. ಸಮಕಾಲೀನ ಭಾರತದಲ್ಲಿ ಹೆಚ್ಚು ಕಡಿಮೆ ಚಿಕ್ಕಬುಡಕಟ್ಟುಗಳ ಜನಸಂಖ್ಯೆಯು ಜನಗಣತಿಯಿಂದ ಜನಗಣತಿಗೆ ಇಳಿಮುಖದ ಬೆಳವಣಿಗೆ ಸಾಮಾನ್ಯ ಅಂಶವಾಗಿದೆ. ಇದು ಕೊರಗ ಸಮುದಾಯಕ್ಕೂ ಅನ್ವಯವಾಗುತ್ತದೆ. ಮೇಲ್ಕಂಡ ಮೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಇರುವ ಕೊರಗ ಸಮುದಾಯದ ಜನಸಂಖ್ಯೆ ಸುಮಾರು 13,000 ರಷ್ಟು ಮಾತ್ರವಿದೆ. ಅಸ್ಪೃಶ್ಯತೆಯ ಅಗಾಧ ಪ್ರಮಾಣದ ಆಚರಣೆಗೆ ಒಳಗಾಗಿರುವ ಇವರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಇತರ ಉಪಜಾತಿಗಳ ಜನರಿಂದಲೂ ಅಸ್ಪೃಶ್ಯತೆಯ ಕಹಿಯನ್ನು ಉಣ್ಣುತ್ತಿದ್ದಾರೆ. ಆ ಮೂಲಕ ಇಡೀ ಸಮಾಜದಿಂದ ಸಾಮಾಜಿಕ ಅವಮಾನ ಮತ್ತು ಶೋಷಣೆಗೆ ಒಳಗಾಗಿರುವ ಇವರು ದಾರಿದ್ರ್ಯದ ಕಟ್ಟ ಕಡೆಯ ಸಮುದಾಯವಾಗಿದ್ದಾರೆ.

ತನ್ನದೆಂಬುದೇನೂ ಇಲ್ಲ

ತಮ್ಮದೆಂಬ ಮನೆ, ನೆಲ ಗಳಾವುದನ್ನು ಹೊಂದಿರದ ಇವರು ಕಾಡಿನ ಅಂಚಿನಲ್ಲಿ ಬಂಡೆಕಲ್ಲುಗಳ ಸಂದಿಗೊಂದಿನಲ್ಲಿ ಮರದಡಿಯಲ್ಲಿ ಪಾಳು ಬಿದ್ದ ಮನೆಗಳಲ್ಲಿ ಅಥವಾ ಜೋಪಡಿಗಳಲ್ಲಿ ನೆಲೆ ಕಟ್ಟಿಕೊಂಡು ಜನರಿಂದ ದೂರವಾಗಿ ಈಗಲೂ ಬದುಕುತ್ತಿದ್ದಾರೆ. ಆದರೆ ಕಳೆದ ಶತಮಾನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ದಲಿತೋದ್ಧಾರಕ' ಎಂದು ಪ್ರಖ್ಯಾತರಾಗಿದ್ದ ಕುದ್ಮುಲ್ ರಂಗರಾವ್‌ರವರು ಪ್ರಾರಂಭಿಸಿದ ಸಮಾಜ ಸುಧಾರಣಾ ಕಾರ್ಯಕ್ರಮಗಳಿಂದ ಕೊರಗ ಸಮುದಾಯಕ್ಕೆ ವಿವಿಧೆಡೆಗಳಲ್ಲಿ ನೆಲೆನಿಂತು ಮನೆ ಹೊಂದಿ ಕಾಲನಿ ರೂಪಿಸುವುದಕ್ಕೆ ಸಹಾಯಕವಾಯಿತು. ಆ ಮೂಲಕ ಇವರು ಅತ್ಯಲ್ಪ ಪ್ರಮಾಣದಲ್ಲಿ ಸ್ವಂತ ಮನೆಯನ್ನು ಹೊಂದಿದ್ದಾರೆ. ಆದರೆ ಬಹುತೇಕ ಕಡೆಗಳಲ್ಲಿ ಈಗಲೂ ದಯನೀಯ ಪರಿಸ್ಥಿತಿಯೊಂದಿಗೆ ತಮ್ಮ ಕುಲಕಸುಬು ಆದ ಬುಟ್ಟಿ ಹೆಣೆಯುವುದು, ತಟ್ಟಿ ಕುಡುಪುಗಳನ್ನು (ಅನ್ನ ಬಸಿಯಲು ಉಪಯೋಗಿಸುವ ಬಿಳಲಿನಿಂದ ತಯಾರಿಸಿದ ಪರಿಕರ) ಮಾರಿ ಬದುಕುತ್ತಿದ್ದಾರೆ. ಕೆಲವರು ಸಫಾಯಿ ಕರ್ಮಚಾರಿಗಳಾಗಿ ಪುರಸಭೆಗಳಲ್ಲಿ ದುಡಿಯುತ್ತಿದ್ದಾರೆ. 'ಕೊರಗರ' ಬಗ್ಗೆ ಬಹಳಷ್ಟು ಜನಾಂಗೀಯ ನೆಲೆಗಟ್ಟಿನ ಅಧ್ಯಯನದ ಪ್ರಯತ್ನಗಳು ನಡೆದಿವೆ. ಪ್ರತಿಯೊಂದು ಅಂಶದ ಬಗ್ಗೆಯೂ ಸಾಕಷ್ಟು ಮಾಹಿತಿಗಳು ಇವೆ. ಅವುಗಳನ್ನು ವಿವರಿಸುವುದು ಕಷ್ಟ. ಆದರೂ ಸಹ ಕೆಲವೊಂದು ಅಂಶಗಳನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.

ಸಂಕಷ್ಟ ವರ್ಗಾವಣೆ... ಬಿಟ್ಟಿ ಚಾಕರಿ

'ಅಜಲು ಪದ್ಧತಿ' ಕೊರಗರನ್ನು ಪಾಳೆಯಗಾರಿ ಮೌಲ್ಯಗಳಿಂದ ಬಂಧಿಸಲ್ಪಟ್ಟ ಒಂದೂ ಕ್ರೂರ ಮತ್ತು ಅಮಾನವೀಯ ಪದ್ಧತಿಗಳ ಕಟ್ಟುಪಾಡು. ಜಾತ್ರೆ, ಕಂಬಳ ಮತ್ತು ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಅಜಲು ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ಗರ್ಭಿಣಿ ಸ್ತ್ರೀಯರ ಸಂಕಷ್ಟಗಳನ್ನು, ರೋಗಿಗಳ ಪಾಲಿನ ಕಷ್ಟ ಕಾರ್ಪಣ್ಯಗಳನ್ನು ಈ ನಂಬಿಕೆಯ ಪ್ರಕಾರ ಬಹಳ ಸುಲಭವಾಗಿ ಕೊರಗರಿಗೆ 'ಹಸ್ತಾಂತರಿಸಲಾಗುತ್ತದೆ'. ಅಸ್ಪೃಶ್ಯತೆ ಆಚರಿಸಲಾಗುತ್ತದೆ. ಜಾತ್ರೆ ಕಂಬಳಗಳಲ್ಲೂ ಕೊರಗರನ್ನು ಅವಮಾನವೀಯವಾಗಿ ದಂಡಿಸಿ ಸೇವೆಯನ್ನು ಬಿಟ್ಟಿಯಾಗಿ ಪಡೆಯಲಾಗುತ್ತಿದೆ. ಇವೆಲ್ಲಕ್ಕೂ ಧಾರ್ಮಿಕ ಭಯ ಭಕ್ತಿಯ ಛಾಪು ಇದೆ.



ಇಂತಹ ಕೆಟ್ಟ ಪದ್ಧತಿಯ ವಿರುದ್ಧ ಕೇವಲ ಕೊರಗ ಸಮುದಾಯ ಮಾತ್ರವೇ ಹೋರಾಡಿ ಅಂತಿಮವಾಗಿ ಕಳೆದ ದಶಕದಲ್ಲಿ ಕರ್ನಾಟಕ ಸರ್ಕಾರ ಅಜಲು ಪದ್ಧತಿಯನ್ನು ನಿಷೇಧಿಸಿ ಶಿಕ್ಷಾರ್ಹ ಅಪರಾಧವೆಂದು ಘೋಷಿಸಿದೆ. ಇಷ್ಟೆಲ್ಲಾ ಆದರೂ ಧಾರ್ಮಿಕ ಮಠ ಮಂದಿರಗಳ ಮಹಾಸಂಗಮವಾದ ಕರಾವಳಿಯಲ್ಲಿ ಇವುಗಳ ಅಡಿಯಲ್ಲಿ ಅಜಲು ಪದ್ಧತಿ ಮತ್ತೂ ಮುಂದುವರಿಯುತ್ತಿದೆ.

ಭೂಮಿ ಸಿಗಲಿಲ್ಲ

ಇದೇ ರೀತಿ ಕಳೆದ ದಶಕದಲ್ಲಿ ಮಹಮ್ಮದ್ ಪೀರ್ ವರದಿಯನ್ನು ಅಂಗೀಕರಿಸಿರುವ ರಾಜ್ಯ ಸರ್ಕಾರ ಆ ಪ್ರಕಾರ ಕೊರಗ ಭೂ ರಹಿತ ಕುಟುಂಬಗಳಿಗೆ ಕೃಷಿ ಭೂಮಿ ವಿತರಿಸುವ ಕಾರ್ಯಕ್ರಮವನ್ನು ತಾತ್ವಿಕವಾಗಿ ಒಪ್ಪಿಕೊಂಡಿದೆ. ಆದರೆ ಪ್ರಾಯೋಗಿಕವಾಗಿ ಇದು ಜಾರಿಯಾಗಿಲ್ಲ. ಇದರ ಜಾರಿಗಾಗಿ ಹೋರಾಟ ರೂಪಿಸಿದ ಕೊರಗರ ಮೇಲೆ ಪೊಲೀಸ್ ದೌರ್ಜನ್ಯ ಮಾತ್ರವಲ್ಲ ಮೇಲ್ವರ್ಗದವರಿಂದಲೂ ಪ್ರತಿರೋಧ ವ್ಯಕ್ತವಾದುದು ಇತಿಹಾಸದಲ್ಲಿ ಕ್ರೂರ ನಡೆಯಾಗಿದೆ.

ಮಹತ್ವದ ಹೋರಾಟ

ಸರಿಸುಮಾರು ಒಂದು ದಶಕಗಳ ಹಿಂದೆ ಕಾರ್ಕಳ ತಾಲ್ಲೂಕಿನ ಕಳತ್ತೂರಿನಲ್ಲಿ ಅರಣ್ಯ ಭೂಮಿಯನ್ನು ವಶಪಡಿಸಿ ಮನೆ ನಿರ್ಮಿಸಿದ ಕೊರಗರ ಹೋರಾಟ ಮಹತ್ವದ್ದಾಗಿದೆ. ಸುಮಾರು ಎರಡು ತಿಂಗಳುಗಳ ಕಾಲ ಉಭಯ ಜಿಲ್ಲೆಗಳಲ್ಲಿರುವ ಕೊರಗರ ಮನೆಯ ಕಾಲನಿಗಳಿಗೆ ಪಾದಯಾತ್ರೆ ನಡೆಸಿ ಸರ್ಕಾರದ ಎದುರು ಮಹಮ್ಮದ್ ಫೀರ್ ವರದಿಯನ್ವಯ ಭೂಮಿ ವಿತರಿಸಲು ಆಗ್ರಹಿಸಲಾಯಿತು. ಸರ್ಕಾರ ವರದಿ ಅಂಗೀಕರಿಸಿ ಸರ್ಕಾರಿ ಭೂಮಿ ಲಭ್ಯವಿಲ್ಲ ಎಂಬ ಸಬೂಬು ನೀಡಿ ಕೈ ತೊಳೆದುಕೊಂಡಿತ್ತು. ಆದರೂ ಸಹ ಕೊರಗರ ಸಂಘದ ನೇತೃತ್ವದಲ್ಲಿ ಸಾಂಕೇತಿಕವಾಗಿ ಕಳತ್ತೂರಿನ ಅರಣ್ಯ ಭೂಮಿಯನ್ನು ಅತಿಕ್ರಮಿಸಿ 25 ಕುಟುಂಬಗಳಿಗೆ ಮನೆ ನಿರ್ಮಿಸಿದರು. ಅರಣ್ಯ ಇಲಾಖೆಯು ಒಕ್ಕಲೆಬ್ಬಿಸುವ ಪ್ರಕ್ರಿಯೆಯನ್ನು ದೈಹಿಕವಾಗಿ ವಿರೋಧಿಸಿದರು. ಪೋಲೀಸ್ ಇಲಾಖೆಯೊಂದಿಗೆ, ನಿರ್ಮಿಸಲಾದ ಮನೆಗಳನ್ನು ನಾಶಪಡಿಸಿ ಸುಮಾರು 27 ಮಂದಿಯನ್ನು ಮಹಿಳೆಯರು ಮಕ್ಕಳು ವಯೋವೃದ್ಧರು ಎಂದು ಯಾವುದನ್ನೂ ಪರಿಗಣಿಸದೆ, ಒಂದು ತಿಂಗಳ ಹಸುಗೂಸನ್ನು ಒಳಗೊಂಡಂತೆ ಜೈಲಿಗೆ ಅಟ್ಟಿದರು. ಒಂದು ತಿಂಗಳ ನಂತರ ಜಾಮೀನಿನಡಿಯಲ್ಲಿ ಬಿಡುಗಡೆಗೊಂಡ ಮೇಲೂ ಮತ್ತೆ ಹೋರಾಟ ಮುಂದುವರಿಯಿತು. ಅನಂತರದ ದಿನಗಳಲ್ಲಿ ಸರ್ಕಾರದ ಖಾಸಗಿ ಭೂಮಿಯನ್ನು ಕ್ರಯಕ್ಕೆ ಪಡೆದು ವಿತರಿಸುವುದಾಗಿ, ಘೋಷಿಸಿದರೂ ಅದು

ಮೂಡಬಿದ್ರೆಯ ಪಾಲಡ್ಕ ಎಂಬಲ
ಇಂತಹುದೇ ಹೋರಾಟವನ್ನು ರೂಪಿಸಿ ಪೋಲೀ
ಕೇಸನ್ನು ಕೊರಗ ಸಮುದಾಯ ಎದುರಿಸುತ್ತಿ
ಸರ್ಕಾರವು ವಿಶೇಷ ಘಟಕ ಯೋಜನೆಯಡಿಯ
ಹಲವಾರು ಸಮಾಜ ಕಲ್ಯಾಣ ಕಾರ್ಯಕ್ರಮಗ
ಇದ್ದರೂ ಭ್ರಷ್ಟಾಚಾರದ ಪರಿಣಾಮವಾಗಿ ಮ
ಕೊರಗರ ಶೋಷಣೆ ನಡೆಯುತ್ತಿದೆ. ಆರೋ
ಸಮಸ್ಯೆ, ಶಿಕ್ಷಣದ ಕೊರತೆ ಈ ಸಮುದಾಯವ
ತೀವ್ರವಾಗಿ ಕಾಡುತ್ತಿದೆ. ಈಗಾಗಲೇ ತಿಳಿಸಿರುವ
ನಿರ್ದಿಷ್ಟವಾಗಿ ವಸತಿ ಮತ್ತು ಉದ್ಯೋಗದ ಸಮ
ಕೂಡಿ ಕೊರಗರ ಪಾಲಿಗೆ ಕಾಡುತ್ತಿದೆ.

ಕಳೆದ ಎರಡು ಮೂರು ಶತಮಾನಗಳ
ಬ್ರಿಟಿಷ್ ಇತಿಹಾಸಕಾರರೂ ಸೇರಿದಂತೆ ಕೊ
ಸಮುದಾಯದ ಬಗ್ಗೆ ಸಾಕಷ್ಟು ಬರಹಗ
ಅಧ್ಯಯನಗಳು ನಡೆ
ಹಾಗೂ ಇನ್ನು ನಡೆಯ
ಇವೆ. ಬಹುಶಃ ದ.ಕ. ಜಿ
ಕಂಡು ಬರುವ ಇತರ ಯಾವುದೇ ಜ
ಸಮುದಾಯಗಳ ಬಗ್ಗೆ ಇಷ್ಟೊಂದು ಚಾರ
ಅಧ್ಯಯನದ ಬರಹಗಳು ಬಂದಿಲ್ಲ ಎಂದು ಹೇ
ತಪ್ಪಾಗಲಾರದು. ವಿಚಿತ್ರವೆಂದರೆ ಇಷ್ಟೆಲ್ಲಾ ರೀತಿ
ಇತಿಹಾಸಕಾರರ, ಆಡಳಿತಗಾರರ, ಸಾಹಿತಿ
ಚಿಂತಕರ ಗಮನ ಸೆಳೆಯಲ್ಪಟ್ಟರೂ ಕೊರಗರ ಬ
ಮತ್ತು ಪರಿಸ್ಥಿತಿಗೆ ಸಂಬಂಧಿಸಿ ಅವರ ಕಷ್ಟದಾ
ಬದುಕನ್ನು ಎತ್ತರಿಸಲು ಯಾ
ರೀತಿಯಲ್ಲೂ ಪ್ರಯೋ
ವಾಗಲಿಲ್ಲ. ಈ ನಿಟ್ಟಿ
ವಿಶ್ಲೇಷಿಸಲಾದ ಕೊರಗರ ಸ
ನಿರ್ಣಯಾತ್ಮಕ ಪಾತ್ರವನ್ನು
ಉಳಿದಂತೆ ಏನನ್ನಾದ
ಮಾಡಿರುವುದಾದರೆ ಅದು
ಮೂರ್‍ನಾಲ್ಕು ವರ್ಷಗಳಿಂದ ಕ
ಮಧ್ಯೆ ಸಕ್ರಿಯವಾಗಿರುವ ವಿ
ನಿಧಿ ಸ್ವಯಂ ಸೇವಾ ಸಂ
ಮಾತ್ರ ಎಂಬುದು ವಿಷಾದನಿ
ದ.ಕ. ದ ಶ್ರೇಣಿಕೃತ ಸಮ
ವ್ಯವಸ್ಥೆಯಲ್ಲಿ ಪಾಳೆಯ
ಕುಟುಂಬಗಳ ಹಿನ್ನಲೆ ಇದ್ದರೂ ಅವೆಲ್ಲ
ಮರೆತು ಈಗಲೂ ಕೆಲವಾರು ವ್ಯಕ್ತಿಗಳು ಕೊ
ಮಧ್ಯೆ ದುಡಿಯುತ್ತಿ ದ್ದಾರೆ. ಈ ಬಹುಶಃ
ಪರಿಣಾಮವಾಗಿಯೇ ಈ ಸಮುದಾಯದ
ಇತರ ಯಾವ ಸಂಘಟನೆಗ
ಅವಕಾಶವಿಲ್ಲದಾಗಿದೆ. ದಲಿತ ಸಂಘಟನೆಯ
ಬಣಗಳೂ ಇಲ್ಲಿ ಗೂಡುಕಟ್ಟಿಲ್ಲ.

ಚರಿತ್ರೆಯ ಪುಟಗಳಲ್ಲಿ ಮದ್ರಾಸ್‌ನಿಂದ ಮ
ಮಲಬಾರ್, ಕೆನರಾ ಜಿಲ್ಲೆಗಳ ಜನಜೀವನ
ಕೃಷಿಯ ಬಗ್ಗೆ ವರದಿ ಸಲ್ಲಿಸಲ್ಲೆಂದು ಅದ
ಪ್ರವಾಸವನ್ನು ಮದ್ರಾಸ್‌ನಲ್ಲಿ ಪ್ರಾರಂಭಿಸಿದ
ಅಧಿಕಾರಿ ಫ್ರಾನ್ಸಿಸ್ ಬಕುನನ್ ಬರೆದ ಮೂರ
ಸಂಚಿಕೆಯಲ್ಲಿ ಆತ ಕ್ರಿ.ಶ.1801ರ
ಉಡುಪಿಯಲ್ಲಿ ಕೊರಗರ ಸಭೆ ನಡೆಸಿರ
ವಿವರಗಳು ದೊರೆಯುತ್ತದೆ. ಆ ಸಮ

ಅಬ್ಬರದ ಮಾತುಗಳಾಚೆಗೆ ಚಲಿಸುವುದೆಂದು?

ಮತ್ತದೇ ಮಾತು.. ಮಾತು.. ಮಾತು. ಕೆಂಪುಕೋಟೆಯಿಂದಲೂ ಮಾತುಗಳ ಅಬ್ಬರ. ನಮ್ಮ ದೇಶದ ಪೂರ್ಣ ಸಾಮರ್ಥ್ಯವನ್ನು ಈಡೇರಿಸಿಕೊಳ್ಳಬೇಕಾದರೆ ನಾವು ಈ ಅಬ್ಬರದ ಮಾತುಗಳು ಮತ್ತು ಹಳಸಲು ಹೇಳಿಕೆಗಳಾಚೆಗೆ ಬಹಳಷ್ಟು ದೂರ ಸಾಗಬೇಕಾಗುತ್ತದೆ. ಸರಕಾರ ಈ ದಿಕ್ಕಿನಲ್ಲಿ ಚಲಿಸುವಂತೆ ಮಾಡಲು ಜನಗಳ ಹೋರಾಟಗಳನ್ನು ಬಲಪಡಿಸುವುದು ನಮ್ಮ ಸ್ವಾತಂತ್ರ್ಯದ 63ನೇ ವರ್ಷದಲ್ಲಿ ಭಾರತೀಯ ಜನತೆಯ ಮುಂದಿರುವ ಅತಿ ದೊಡ್ಡ ಸವಾಲು.

ಭಾರತ ಜವಾಹರಲಾಲ ನೆಹರೂ ವರ್ಣಿಸಿದಂತೆ "ಸ್ವಾತಂತ್ರ್ಯದತ್ತ ಜಾಗ್ರತ"ಗೊಂಡು 62 ವರ್ಷಗಳನ್ನು ಪೂರೈಸಿ ಮುಂದಕ್ಕೆ ಹೋಗುತ್ತಿರುವಂತೆ 63ನೇ ಸ್ವಾತಂತ್ರ್ಯ ದಿನದಂದು ಸಂಪ್ರದಾಯದಂತೆ ಪ್ರಧಾನ ಮಂತ್ರಿಗಳು ಕೆಂಪುಕೋಟೆಯ ಮೇಲಿಂದ ದೇಶವನ್ನುದ್ದೇಶಿಸಿ ಮಾತಾಡಿದರು. ಆ ಭಾಷಣ ಅಕ್ಷರಶಃ 'ಸಂಪ್ರದಾಯದಂತೆ'ಯೇ ಇತ್ತು. ಎಲ್ಲಾ ಅಗತ್ಯವಾದ ಅಬ್ಬರದ ಮಾತುಗಳು. ಇವು ಅವೇ ಹಳಸಲು ಮಾತುಗಳಲ್ಲ, ತೃಪ್ತಿಗಿಳಿಯುವಂತದ್ದು ಎಂಬ ವಿಶ್ವಾಸ ಮೂಡಿಸುವಂತದ್ದೇನೂ ಅದರಲ್ಲಿ ಇರಲಿಲ್ಲ.


ಪ್ರಧಾನ ಮಂತ್ರಿಗಳು ಈಗ ದೇಶದ ಮೇಲೆ ಕರಿನೆರಳು ಹಾಸುತ್ತಿರುವ ಬರದ ಪರಿಸ್ಥಿತಿಯನ್ನು ವರ್ಣಿಸಲು ಸಾಕಷ್ಟು ಸಮಯ ತೆಗೆದುಕೊಂಡರು. ಆದರೆ ಸಂಕಟಗಳನ್ನು ಅನುಭವಿಸುತ್ತಿರುವ ಜನಗಳಿಗೆ ಪರಿಹಾರ ಒದಗಿಸಲು ಏನು ಮಾಡಬೇಕಾಗಿದೆ ಎಂದೇನೂ ಸ್ಪಷ್ಟಗೊಳಿಸಲಿಲ್ಲ. ಜನಗಳ ಹೆಚ್ಚುತ್ತಿರುವ ಸಂಕಟಗಳಿಗೆ ಪರಿಹಾರ ಒದಗಿಸಬೇಕಾದರೆ ತಕ್ಷಣವೇ ಎಲ್ಲಾ ಅವಶ್ಯಕ ಸರಕುಗಳಲ್ಲಿ ಜೂಜುಕೋರ ವ್ಯಾಪಾರವನ್ನು ನಿಷೇಧಿಸಬೇಕು, ಎಣ್ಣೆಬೀಜಗಳು, ಸಕ್ಕರೆ ಮತ್ತು ಇತರ ಅವಶ್ಯಕ ವಸ್ತುಗಳನ್ನು ರೇಶನ್ ಅಂಗಡಿಗಳ ಮೂಲಕ ಹಂಚಬೇಕು ಹಾಗೂ ಎಲ್ಲಕ್ಕೂ ಮುಖ್ಯವಾಗಿ ಪಡಿತರ ವ್ಯವಸ್ಥೆಯನ್ನು ಯಾವುದೇ ಹೆಸರಿನಲ್ಲಿ ಸೀಮಿತಗೊಳಿಸದೆ ಸಾರ್ವತ್ರಿಕಗೊಳಿಸಬೇಕು ಎಂಬ ಬೇಡಿಕೆಗಳ ಬಗ್ಗೆ ಪ್ರಧಾನ ಮಂತ್ರಿಗಳ ಭಾಷಣದಲ್ಲಿ ಪ್ರಸ್ತಾಪವೂ ಇರಲಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲ.

"ಭಾರತದ ಪ್ರತಿಯೊಬ್ಬ ನಾಗರಿಕ ಸಮೃದ್ಧಿ ಮತ್ತು ಪ್ರಗತಿ ಹೊಂದಬೇಕು, ಒಂದು ಘನತೆಯ ಮತ್ತು ಆತ್ಮಗೌರವಪೂರ್ಣ ಬದುಕನ್ನು ನಡೆಸಲು ಸಾಧ್ಯವಾಗುವಂತೆ ಮಾಡಬೇಕು ಎಂಬುದೇ ನಮ್ಮ ಪ್ರಯತ್ನ" ಎಂದು ಪ್ರಧಾನ ಮಂತ್ರಿಗಳು ಗರ್ಜಿಸಿದರು. ಅಷ್ಟೇ ಅಲ್ಲ, ಮುಂದುವರೆದು, ಈಗಿನ ಬರದ ಪರಿಸ್ಥಿತಿಯಲ್ಲಿ "ಒಬ್ಬನೇ ಒಬ್ಬ ಭಾರತದ ನಾಗರಿಕ ಕೂಡ ಎಂದೂ ಹಸಿದಿರದಂತೆ ಮಾಡಬೇಕೆಂಬುದು ನಮ್ಮ ಉತ್ಕಟ ಆಶಯ" ಎಂದರು.

ಆಶಯ-ವಾಸ್ತವ

ವಿಡಂಬನೆಯೆಂದರೆ ಈ ಭಾಷಣ ಆರಂಭವಾಗುವ ಕೆಲವೇ ಗಂಟೆಗಳ ಮೊದಲು ಬಿಹಾರದ ಜೆಹಾನಾಬಾದಿನಲ್ಲಿ ಮೂರು ಮಂದಿ ಹಸಿವಿನಿಂದ ಸಾವನಪ್ಪಿದರು ಎಂದು ಮಾಧ್ಯಮಗಳು ವರದಿ ಮಾಡಿದ್ದವು. ಸ್ವಾತಂತ್ರ್ಯ ದಿನದ ಹಿಂದಿನ 40 ದಿನಗಳಲ್ಲಿ ಕೇವಲ ಆಂಧ್ರಪ್ರದೇಶವೊಂದರಲ್ಲೇ 20 ರೈತರು ಆತ್ಮಹತ್ಯೆ ಮಾಡಿಕೊಂಡರು. ಮಾಧ್ಯಮಗಳ ವರದಿಗಳ ಪ್ರಕಾರ ಅವರಲ್ಲಿ ಇಬ್ಬರು ಪ್ರಧಾನ ಮಂತ್ರಿಗಳು ಹೀಗೆ ಭಾಷಣ ಮಾಡುತ್ತಿದ್ದಾಗಲೇ ಆತ್ಮಹತ್ಯೆ ಮಾಡಿಕೊಂಡರು. ಹಸಿವಿನಿಂದ ಸಾವುಗಳು, ರೈತರ ಆತ್ಮಹತ್ಯೆಗಳು ಈಗಲೂ ಗ್ರಾಮೀಣ ಭಾರತವನ್ನು ಕಾಡುತ್ತಲೇ ಇವೆ. ಈ ಪರಿಸ್ಥಿತಿ ಬದಲಾಗಬೇಕೆಂದರೆ ಅದು ಒಂದು ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಆಹಾರವು ಅಗತ್ಯವುಳ್ಳ ಜನಗಳಿಗೆ ತಲುಪುವಂತೆ ನಿರಂತರ ಪ್ರಯತ್ನ ಮಾಡಿದರಷ್ಟೇ ಸಾಧ್ಯ.

ಕೃಪೆ: ದಿ ಹಿಂದೂ, 21ಅಗಸ್ಟ್



ದೇಶದ ಬೆಳವಣಿಗೆ ದರವನ್ನು ಮತ್ತೆ 9 ಶೇಕಡಾಕ್ಕೆ ತರಬೇಕು ಎಂಬುದೇ ಪ್ರಧಾನ ಮಂತ್ರಿಗಳ ಕೆಂಪುಕೋಟೆ ಭಾಷಣದಲ್ಲಿ ಕಂಡು ಬಂದ ಪ್ರಧಾನ ಒತ್ತು. ಇದು "ನಾವು ಎದುರಿಸುತ್ತಿರುವ ಅತಿ ದೊಡ್ಡ ಸವಾಲು" ಎಂದು ಅವರು ವರ್ಣಿಸಿದರು. ಇದರಲ್ಲಿಆಶ್ಚರ್ಯ ಪಡುವಂತದ್ದೇನೂ ಇಲ್ಲ. ಈಗ ಬೆಳವಣಿಗೆ ದರ 6.7ಶೇ.ಕ್ಕೆ ಇಳಿದಿದೆ. ಇದಕ್ಕೆ ಜಾಗತಿಕ ಆರ್ಥಿಕ ಬಿಕ್ಕಟ್ಟು ಮಾತ್ರವೇ ಕಾರಣವಂತೆ. ಮುಂದುವರೆದು "ನಮ್ಮ ಧೋರಣೆಗಳ ಫಲವಾಗಿಯೇ ನಮ್ಮನ್ನು ಜಾಗತಿಕ ಬಿಕ್ಕಟ್ಟು ಇತರ ಹಲವು ದೇಶಗಳಷ್ಟು ತಟ್ಟಲಿಲ್ಲ" ಎಂದರು. ಆದರೆ ಸಹಜವಾಗಿಯೇ ಅವರು ಈ "ಧೋರಣೆಗಳ"ಲ್ಲಿ ಎಲ್ಲವೂ ಅಲ್ಲದಿದ್ದರೂ ಹೆಚ್ಚಿನವು ಯುಪಿಎ-1 ಸರಕಾರದ ಮೇಲೆ ಎಡಪಕ್ಷಗಳ ಒತ್ತಡದಿಂದ ಬಂದವುಗಳು ಎಂದು ಒಪ್ಪಿಕೊಳ್ಳಲು ಹೋಗಲಿಲ್ಲ.

"ಒಳ್ಳೆಯ ಶಿಕ್ಷಣ ಅಪೇಕ್ಷಣೀಯ ಮಾತ್ರವಲ್ಲ, ನಮ್ಮ ಜನಗಳಿಗೆ ಅದು ಅತ್ಯಗತ್ಯ ಕೂಡಾ" ಎನ್ನುತ್ತಾರೆ ಪ್ರಧಾನ ಮಂತ್ರಿಗಳು. ನಿಜ. ಆದರೀಗ ಕಾಣುತ್ತಿರುವ ವಾಸ್ತವತೆಯೇನು? ಒಂದನೇ ತರಗತಿಗೆ ಸೇರುವ ಪ್ರತಿ 100 ಮಕ್ಕಳಲ್ಲಿ ಕೇವಲ 31 ಮಕ್ಕಳು ಹತ್ತನೇ ತರಗತಿ ತಲುಪುತ್ತಾರೆ. ಇವರಲ್ಲಿಯೂ ಕೇವಲ 16 ಹನ್ನೆರಡನೇ ತರಗತಿ ಪಾಸಾಗುತ್ತಾರೆ. ಉನ್ನತ ಶಿಕ್ಷಣದ ಮೆಟ್ಟಿಲು ಹತ್ತುವವರು ಕೇವಲ 9. ಕೇವಲ ಶಿಕ್ಷಣದ ಹಕ್ಕು ಕಾನೂನನ್ನು ತರುವುದರಿಂದಷ್ಟೇ ಈ ಪರಿಸ್ಥಿತಿ ಬದಲಾಗದು ಅಥವಾ ಉತ್ತಮಗೊಳ್ಳದು. ಇದಕ್ಕಾಗಿ ಮಾಡುವ ಖರ್ಚಿನಲ್ಲಿ ಅಪಾರ ಹೆಚ್ಚಳ ಅಗತ್ಯ. ಆದರೆ ಈ ಬಾರಿಯ ಬಜೆಟ್ ನೀಡಿದರೆ ಅಂತಹ ಸೂಚನೆಗಳೇನೂ ಕಾಣುತ್ತಿಲ್ಲ.

ಮತ್ತು "ಉತ್ತಮ ಆರೋಗ್ಯ ನಮ್ಮ ಒಂದು ಮೂಲಭೂತ ಅಗತ್ಯ" ಎನ್ನುತ್ತಾರೆ ಪ್ರಧಾನ ಮಂತ್ರಿಗಳು. ಇದು ಕೂಡಾ ನಿಜವೇ. ಆದರೆ ಇಲ್ಲಿಯೂ ಈಗಿನ ವಾಸ್ತವತೆಯೇನು? ಸಾರ್ವಜನಿಕ ಆರೋಗ್ಯದ ಮೇಲೆ 2007-08ರಲ್ಲಿ ಮಾಡಿದ ಖರ್ಚಿನ ಪ್ರಮಾಣದಲ್ಲಿ ಭಾರತದ ಸ್ಥಾನ 175 ದೇಶಗಳಲ್ಲಿ 171 ನೇಯದ್ದು ಎಂದು ವಿಶ್ವ ಆರೋಗ್ರ ಸಂಘಟನೆ ಇತ್ತೀಚೆಗಷ್ಟೇ ಬಯಲು ಮಾಡಿದೆ. 100 ಕೋಟಿಗೂ ಹೆಚ್ಚು ಜನರಿರುವ ದೇಶದಲ್ಲಿ ಆರೋಗ್ಯಕ್ಕಾಗಿ ಖರ್ಚು ಮಾಡುವ ಹಣ ಒಟ್ಟು ಆಂತರಿಕ ಉತ್ಪನ್ನದ(ಜಿಡಿಪಿಯ) 5.2ಶೇ. ಮಾತ್ರ. ಇದರಲ್ಲಿಯೂ ಸರಕಾರ ಮಾಡುವ ಖರ್ಚು ಕೇವಲ 0.9ಶೇ. ಉಳಿದದ್ದೆಲ್ಲಾ ಖಾಸಗೀ ವಲಯದಲ್ಲಿ ಖರ್ಚಾಗುತ್ತದೆ. ಈ ಖಾಸಗೀ ವಲಯ ಕೇವಲ "ಹೊಳೆಯುತ್ತಿರುವ ಭಾರತ"ವನ್ನು ನೋಡಿಕೊಳ್ಳುವಂತದ್ದು ಎಂಬುದು ಎಲ್ಲರಿಗೂ ಗೊತ್ತು. ಅಮೆರಿಕಾ ಸಂಯುಕ್ತ ಸಂಸ್ಥಾನ ತನ್ನ ಜಿಡಿಪಿಯ 16 ಶೇ.ವನ್ನು ಆರೋಗ್ಯಕ್ಕೆಂದು ಖರ್ಚು ಮಾಡುತ್ತದೆ, ಅಂದರೆ ನಮಗಿಂತ ಮೂರು ಪಟ್ಟಿಗೂ ಹೆಚ್ಚು. ಒಇಸಿಡಿ ದೇಶಗಳು 11ಶೇಕಡಾ ಖರ್ಚು ಮಾಡುತ್ತವೆ. ಈಗಿನ "ಹಂದಿ ಜ್ವರ"ದ ಆತಂಕವಷ್ಟೇ ಅಲ್ಲ, ಪೋಷಕಾಂಶ ಕೊರತೆಯಿಂದ, ಸಂಪೂರ್ಣ ಗುಣಪಡಿಸಬಹುದಾದ ಕಾಯಿಲೆಗಳಿಂದ ಭಾರತದಲ್ಲಿ ಪ್ರತಿದಿನ 1000 ಮಕ್ಕಳು ಸಾಯುತ್ತವೆ. ಸಾಮಾನ್ಯವಾಗಿ ಪ್ರತಿದಿನ 900 ಮಂದಿ ಕ್ಷಯರೋಗದಿಂದ ಸಾಯುತ್ತಾರೆ. 2004ರಲ್ಲಿ ಹಿಂದಿನ ಯುಪಿಎ ಸರಕಾರ ರಚನೆಗೊಂಡಾಗ ಅದರ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಎಡಪಕ್ಷಗಳ ಒತ್ತಡದಿಂದಾಗಿ ಆರೋಗ್ಯದ ಮೇಲಿನ ಖರ್ಚನ್ನು 0.9ಶೇ.ದಿಂದ 3ಶೇಕಡಾಕ್ಕೆ ಏರಿಸಲಾಗುವುದು ಎಂಬ ಭರವಸೆ ಕೊಡಲಾಗಿತ್ತು. ಐದು ವರ್ಷಗಳ ನಂತರ ಈಗಲೂ ಅದು 0.9ಶೇ.ದಲ್ಲಿಯೇ ನಿಂತಿದೆ.

ಟೊಳ್ಳು ಮಾತುಗಳು ಸಾಕು

ಯುಪಿಎ ಯ ಎಲ್ಲಾ ಪ್ರಮುಖ ಕಾರ್ಯಕ್ರಮಗಳನ್ನು ಮುಂದುವರೆಸಲಾಗುವುದು ಎಂದು ಒತ್ತಿ ಹೇಳಿದ ಮೇಲೆ ಪ್ರಧಾನ ಮಂತ್ರಿಗಳು ಮಾವೋವಾದಿ ಹಿಂಸೆಯ ಬಗ್ಗೆ ಬಹಳ ಆತಂಕ ವ್ಯಕ್ತಪಡಿಸಿದರು. "ಕೇಂದ್ರ ಸರಕಾರ ನಕ್ಸಲ್‌ವಾದಿ ಚಟುವಟಿಕೆಗಳನ್ನು ಎದುರಿಸಲು ತನ್ನ ಪ್ರಯತ್ನಗಳನ್ನು ದ್ವಿಗುಣಗೊಳಿಸುತ್ತದೆ. ರಾಜ್ಯಗಳು ತಮ್ಮ ಪೋಲೀಸ್ ಪಡೆಗಳನ್ನು ಹೆಚ್ಚು ಪರಿಣಾಮಕಾರಿಗೊಳಿಸಲು ನಾವು ಎಲ್ಲಾ ನೆರವು ನೀಡುತ್ತೇವೆ. ಎಲ್ಲೆಲ್ಲಿ ಬೇಕೋ ಅಲ್ಲಿ ಕೇಂದ್ರೀಯ ಪಡೆಗಳನ್ನು ಒದಗಿಸಲಾಗುವುದು. ರಾಜ್ಯಗಳ ನಡುವೆ ಇನ್ನೂ ಉತ್ತಮ ಸಂಯೋಜನೆ ಇರುವಂತೆ ಇನ್ನಷ್ಟು ಮಾಡುತ್ತೇವೆ" -ಇವು ಅವರ ಮಾತುಗಳು. ಕೇಳಲು ಚೆನ್ನಾಗಿವೆ. ಆದರೆ ತಮ್ಮ ಸಂಪುಟದ ಸದಸ್ಯರೇ ಲಾಲ್‌ಗಡ ಮತ್ತು ಪಶ್ಚಿಮ ಬಂಗಾಳದ ಇತರ ಭಾಗಗಳಲ್ಲಿ ಮಾವೋವಾದಿ ಹಿಂಸಾಚಾರಕ್ಕೆ ಇನ್ನೂ ಸಹಾಯ, ಕುಮ್ಮಕ್ಕು ಮುಂದುವರೆಸುತ್ತಿರುವುದನ್ನು ಸಹಿಸಿಕೊಂಡಿರುವುದೇಕೆ ಎಂಬುದನ್ನು ಅವರು ವಿವರಿಸಬಲ್ಲರೇ? ಆದ್ದರಿಂದ ಪ್ರಧಾನ ಮಂತ್ರಿಗಳ ಆತಂಕಗಳು ಟೊಳ್ಳೆನಿಸುತ್ತವೆಯಷ್ಟೇ ಅಲ್ಲ, ಅವು ದಾರಿ ತಪ್ಪಿಸುವಂತೆಯೂ ಕಾಣುತ್ತವೆ.

ಪ್ರಧಾನ ಮಂತ್ರಿಗಳು ನಮ್ಮ ದೇಶದ ಯುವಜನರನ್ನು ಹುರಿದುಂಬಿಸುತ್ತಾ ತಮ್ಮ ಭಾಷಣವನ್ನು ಮುಗಿಸುತ್ತಾರೆ. "ನಮ್ಮ ಯುವಜನರಲ್ಲಿ ನಮಗೆ ಪೂರ್ಣ ವಿಶ್ವಾಸವಿದೆ. ಅವರು ನಮ್ಮ ಭವಿಷ್ಯ." ಖಂಡಿತಾ ಅವರು ನಮ್ಮ ಭವಿಷ್ಯ. ಇದನ್ನು ನಾವು ಬಹಳ ಸಮಯದಿಂದ ಮತ್ತೆ-ಮತ್ತೆ ಹೇಳುತ್ತಿದ್ದೇವೆ. ಭಾರತದ ಜನಸಂಖ್ಯೆಯಲ್ಲಿ 25ವರ್ಷಗಳಿಗಿಂತ ಕಿರಿಯರ ಪ್ರಮಾಣ 54 ಶೇಕಡಾ, ಈ ಅನುಕೂಲಕರ ಅಂಶವನ್ನು ನಮ್ಮ ಮಾನವ ಸಂಪನ್ಮೂಲಗಳನ್ನು ಬಲಪಡಿಸಲು ಪೂರ್ಣವಾಗಿ ಬಳಸಿಕೊಳ್ಳಬೇಕು ಎಂದು ಹೇಳುತ್ತಾ ಬಂದಿದ್ದೇವೆ. ಈ ಯುವಜನ ಉತ್ತಮ ಆರೋಗ್ಯ, ಶಿಕ್ಷಣ ಮತ್ತು ಫಲದಾಯಕ ಉದ್ಯೋಗ ಒದಗಿಸಿದರೆ ಮಾತ್ರವೇ ಭಾರತದ ಅತಿ ದೊಡ್ಡ ಆಸ್ತಿಯಾಗಬಲ್ಲರು. ಇದನ್ನು ಸಾಧಿಸಬೇಕಾದರೆ, ಈ ಮೂಲಕ ನಮ್ಮ ದೇಶದ ಪೂರ್ಣ ಸಾಮರ್ಥ್ಯವನ್ನು ಈಡೇರಿಸಿಕೊಳ್ಳಬೇಕಾದರೆ ನಾವು ಅಬ್ಬರದ ಮಾತುಗಳು ಮತ್ತು ಹಳಸಲು ಹೇಳಿಕೆಗಳಾಚೆಗೆ ಬಹಳಷ್ಟು ದೂರ ಹೋಗಬೇಕಾಗುತ್ತದೆ ಹಾಗೂ ನಮ್ಮ ಯುವಜನರಲ್ಲಿ ಗಮನಾರ್ಹ ಪ್ರಮಾಣದಲ್ಲಿ ಹೂಡಿಕೆ ಮಾಡಬೇಕಾಗುತ್ತದೆ.

ಆದ್ದರಿಂದ ಸರಕಾರ ಈ ದಿಕ್ಕಿನಲ್ಲಿ ಚಲಿಸುವಂತೆ ಮಾಡಲು ಜನಗಳ ಹೋರಾಟಗಳನ್ನು ಬಲಪಡಿಸುವುದು ನಮ್ಮ ಸ್ವಾತಂತ್ರ್ಯದ 63ನೇ ವರ್ಷದಲ್ಲಿ ಭಾರತೀಯ ಜನತೆಯ ಮುಂದಿರುವ ಅತಿ ದೊಡ್ಡ ಸವಾಲು.

ಚೀನಾ ಗಲಭೆ

ಅಮೇರಿಕದ ಪೆಟ್ರೋಲ್ ಲೂಟಿ ಸಂಚು

ಶರತ್‌ಚಂದ್ರ

ಕಳೆದ ತಿಂಗಳು ಚೀನಾದ ಕ್ಸಿಂಗಿಯಾಂಗ್ ಪ್ರಾಂತ್ಯದ ಸ್ವಾಯತ್ತ ಪ್ರದೇಶವಾದ ಉಯ್ಘೂರ್ ನಲ್ಲಿ ನಡೆದ 'ಜನಾಂಗೀಯ' ದಂಗೆಗಳು ಎಲ್ಲರನ್ನೂ ಅಚ್ಚರಿಗೊಳಿಸಿತ್ತು. ಸಾಮಾನ್ಯವಾಗಿ ಜನಾಂಗೀಯ ದಂಗೆಗಳ ಇತಿಹಾಸ ಇರದ ಮತ್ತು ಶಾಂತಿ-ಸುವ್ಯವಸ್ಥೆ ನೆಲೆಯೂರಿರುವ ಚೀನಾದಲ್ಲಿ ಇಂತಹ ದಂಗೆಗಳು ಅಚ್ಚರಿಗೆ ಕಾರಣವಾಗಿದ್ದವು. ಉಯ್ಘೂರ್ ನಲ್ಲಿ 'ಬಹುಸಂಖ್ಯಾತರು', ಆದರೆ ಚೀನಾದ ಆದ್ಯಂತ 'ಅಲ್ಪಸಂಖ್ಯಾತರು' ಆಗಿರುವ ಮುಸ್ಲಿಂ ಸ್ಥಳೀಯರ ಮೇಲೆ ಚೀನಾ ಸರ್ಕಾರದ ದಬ್ಬಾಳಿಕೆಯ ವಿರುದ್ಧ ನಡೆದ ದಂಗೆಗಳು. ಕ್ರಾಂತಿಯ ನಂತರ 'ಬೆಳವಣಿಗೆ' ಹೆಸರಲ್ಲಿ ಚೀನಾದ ಬಹುಸಂಖ್ಯಾತ ಹನ್ ಜನಾಂಗದ ಜನ 'ಹೊರಗಿಂದ' ಬಂದು ಅಲ್ಲಿ ನೆಲೆಸಿ 'ಬಹುಸಂಖ್ಯಾತರು' ಆಗುವ ಹುನ್ನಾರವನ್ನು ಚೀನಾ ಸರ್ಕಾರ ನಡೆಸಿದೆ. ಸರ್ಕಾರದ ಈ ನೀತಿ 'ಹೊರಗಿನ ವಲಸೆಗಾರ ಹನ್' ಮತ್ತು 'ಸ್ಥಳಿಯ ಮುಸ್ಲಿಮರ' ನಡುವೆ ಘರ್ಷಣೆ ಮತ್ತು ದಂಗೆಗೆ ದಾರಿ ಮಾಡಿಕೊಟ್ಟಿತು ಎಂದು ಆಗ ಅಂತರ್ರಾಷ್ಟ್ರೀಯ ಮಾಧ್ಯಮಗಳು ವರದಿ ಮಾಡಿದ್ದವು.

ದಂಗೆಗಳ ವೇಗ, ತೀಕ್ಷ್ಣತೆ ಮತ್ತು ಸಮಯ ಇನ್ನಷ್ಟು ಅಚ್ಚರಿ ತಂದಿತ್ತು. ಉಯ್ಘೂರ್ ದಂಗೆಗಳು ಶಾಂಘಾಯ್ ಸಹಕಾರ ಸಂಘಟನೆಯ ಶೃಂಗಸಭೆ ರಶ್ಯದಲ್ಲಿ ನಡೆಯುತ್ತಿರುವಾಗ ನಡೆದವು. ಚೀನಾದ ಅಧ್ಯಕ್ಷ ಶೃಂಗಸಭೆ ನಡುವೆಯೇ ದೇಶಕ್ಕೆ ಹಿಂದಿರುಗ ಬೇಕಾದಷ್ಟು ಪರಿಸ್ಥಿತಿ ತೀವ್ರವಾಗಿತ್ತು. ಇದು ಅಮೆರಿಕ ಮತ್ತು ಯುರೋಪುಗಳಲ್ಲಿ ನೆಲೆಸಿರುವ ಅನಿವಾಸಿ ಉಯ್ಘೂರ್ ಗುಂಪುಗಳ ಚಿತಾವಣೆಯಿಂದ ನಡೆದ ರಾಜಕೀಯ-ದುರುದ್ದೇಶಪೂರಿತ ದಂಗೆ. ಇದರ ಹಿಂದೆ ಅಮೆರಿಕನ್ ಸರ್ಕಾರದ ಕೈವಾಡ ಇದೆ ಎಂದು ಚೀನಾ ಮಾಧ್ಯಮಗಳು ಮತ್ತು ಸರ್ಕಾರ ಆಪಾದಿಸಿತ್ತು. ಹಾಗಾದರೆ ನಿಜ ಸಂಗತಿ ಏನು ? ಇತ್ತೀಚೆಗೆ ಹೊರಬಂದಿರುವ ಹಲವು ಸಂಗತಿಗಳು ಹೆಚ್ಚೆಚ್ಚಾಗಿ ಅಮೆರಿಕನ್ ಸರ್ಕಾರದ ಕೈವಾಡದತ್ತ ಬೊಟ್ಟು ಮಾಡಿವೆ, ಇದೇ ರೀತಿ ಇರಾನ್ ಚುನಾವಣೆ ನಂತರದ ಗಲಭೆ-ದಂಗೆಗಳ ಬಗ್ಗೆ ಸಹ ನಂತರದ ವರದಿಗಳು ಅಮೆರಿಕನ್ ಸರ್ಕಾರದ ಕೈವಾಡ ಮತ್ತು 'ಸರ್ಕಾರ ಪದಚ್ಯುತಿ' ರಾಜಕೀಯದ ವಾಸನೆ ಕೊಟ್ಟಿದ್ದವು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಗಲಭೆಯಲ್ಲಿ ವಿಶ್ವ ಉಯ್ಘೂರ್ ಕಾಂಗ್ರೆಸ್ ಪಾತ್ರ

ಅಮೆರಿಕದ ವಾಶಿಂಗ್ಟನ್ ನಲ್ಲಿ ಮುಖ್ಯ ಕಚೇರಿ ಇರುವ ಮತ್ತು ಹಲವು ದೇಶಗಳಲ್ಲಿ ಶಾಖೆಗಳನ್ನು ಹೊಂದಿರುವ ವಿಶ್ವ ಉಯ್ಘೂರ್ ಕಾಂಗ್ರೆಸ್ (ಡಬ್ಲ್ಯೂ.ಯು.ಸಿ.) ಈ ದಂಗೆಗಳಲ್ಲಿ ನಾಯಕತ್ವ ಮತ್ತು ಪ್ರಧಾನ ಪಾತ್ರ ವಹಿಸಿದ್ದು ಸತ್ಯ ಎಂದು ಎರಡೂ 'ಪಕ್ಷಗಳು' ಒಪ್ಪಿಕೊಳ್ಳುತ್ತವೆ. ಆದರೆ ದಂಗೆಗಳ ಹಿಂದೆ ಮುಂದೆ ನಡೆದ ಘಟನಾವಳಿಗಳಲ್ಲಿ ಎರಡೂ 'ಪಕ್ಷಗಳ' ನಡುವೆ ಪ್ರಮುಖ ವ್ಯತ್ಯಾಸಗಳಿವೆ. ಡಬ್ಲ್ಯೂ.ಯು.ಸಿ. ವೆಬ್ ಸೈಟ್ ಪ್ರಕಾರ ದಕ್ಷಿಣ ಚೀನಾದ ಗುವಾಂಗ್ ಡಾಂಗ್ ಪ್ರಾಂತ್ಯದ ಆಟಿಗೆ ಕಾರ್ಖಾನೆ ಒಂದರಲ್ಲಿ ಜೂನ್ 26 ರಂದು ಉಯ್ಘೂರ್ ಮುಸ್ಲಿಂ ಪುರುಷ ಕಾರ್ಮಿಕರು ಹನ್ ಮಹಿಳಾ ಕಾರ್ಮಿಕರ ಮೇಲೆ ಅತ್ಯಾಚಾರ ಎಸಗಿದ್ದು ದಂಗೆಗೆ ಕಿಡಿ ಆಯಿತು. ಹನ್ ಕಾರ್ಮಿಕರು ಆ ಉಯ್ಘೂರ್ ಮುಸ್ಲಿಂ ಪುರುಷ ಕಾರ್ಮಿಕರ ಮೇಲೆ ದಾಳಿ ನಡೆಸಿ ಕೊಲೆ ನಡೆಸಿದರು. ಜುಲೈ 1 ರಂದು ಡಬ್ಲ್ಯೂ.ಯು.ಸಿ. ಜರ್ಮನಿಯ ಮ್ಯೂನಿಕ್ ಶಾಖೆ ಈ ಕೊಲೆ ವಿರುದ್ಧ ಉಯ್ಘೂರ್ ಪ್ರಾಂತ್ಯ ಮತ್ತು ಜಗತ್ತಿನ ಎಲ್ಲೆಡೆ ಪ್ರತಿಭಟನಾ ಪ್ರದರ್ಶನಗಳಿಗೆ ಕರೆ ನೀಡಿದೆ. ಆ ದಿನದ ಪ್ರತಿಭಟನೆಯನ್ನು ಚೀನಾದ ಪೋಲಿಸರು ಹಿಂಸಾತ್ಮಕವಾಗಿ ದಮನಿಸುವ ಪ್ರಯತ್ನದಿಂದ ಭಾರೀ ಸಾವು ನೋವುಗಳಾದವು. ಚೀನಾದ ಪೋಲಿಸರು ಕಂಡ ಕಂಡ ಉಯ್ಘೂರ್ ಮುಸ್ಲಿಂ ಸ್ಥಳೀಯರ ಮೇಲೆ ದಾಳಿ ನಡೆಸಿದರು. ಇದರಿಂದ ತೀವ್ರ ದಂಗೆ, ಹಿಂಸಾಚಾರ, ಪ್ರಾಣ ಮತ್ತು ಆಸ್ತಿ ಪಾಸ್ತಿಗಳಿಗೆ ತೀವ್ರ ಹಾನಿ ಆದವು. ಇದು ಡಬ್ಲ್ಯೂ.ಯು.ಸಿ. ಅಂಬೋಣ.





ಜುಲೈ 1 ರಂದು ಡಬ್ಲ್ಯೂ.ಯು.ಸಿ. ಕರೆ ಬರುತ್ತಿದ್ದಂತೆ ಉಯ್ಘೂರ್‌ನ ಕೆಲವು ಮುಸ್ಲಿಂ ಗುಂಪುಗಳು ಹನ್ ಪಾದಚಾರಿಗಳ ಮೇಲೆ ಕಲ್ಲು ಇಟ್ಟಿಗೆ ಮೂಲಕ ಭಾರೀ ದಾಳಿ ಆರಂಭಿಸಿದವು. ಅಲ್ಲದೆ ಕಾರು ಮತ್ತು ಬಸ್ಸು ಮುಂತಾದ ವಾಹನಗಳ, ಸಾರ್ವಜನಿಕ ಆಸ್ತಿ ಮೇಲೆ ಅಗ್ನಿಸ್ಪರ್ಶ, ದಾಳಿ ನಡೆಸಿದವು. ಈ ದಾಳಿ ಮತ್ತು ದಂಗೆಗಳನ್ನು ನಿಲ್ಲಿಸಲು ಜನಸಾಮಾನ್ಯರ ಮತ್ತು ಸಾರ್ವಜನಿಕ-ಖಾಸಗಿ ಆಸ್ತಿಪಾಸ್ತಿ ರಕ್ಷಣೆಗೆ ಪೋಲೀಸರು ಬಿಗಿ ಕ್ರಮ ಕೈಗೊಳ್ಳಬೇಕಾಯಿತು. ಪರಿಸ್ಥಿತಿ ಕೈ ಮೀರಿ ಹೋಗುವುದರಲ್ಲಿ ಇದ್ದಾಗ ಗೋಳಿಬಾರು ಮಾಡಬೇಕಾಯಿತು. ಗುವಾಂಗ್ ಡಾಂಗ್ ಪ್ರಾಂತ್ಯದ ಅತ್ಯಾಚಾರ-ಕೊಲೆ ಪ್ರಕರಣ ದಂಗೆ ಆರಂಭಿಸಲು ಡಬ್ಲ್ಯೂ.ಯು.ಸಿ. ಹೂಡಿದ ನೆಪ, ಮಾಡಿದ ಅಪಪ್ರಚಾರ. ಅದೇ (ಡಬ್ಲ್ಯೂ.ಯು.ಸಿ.) ದಂಗೆಗಳ ಮೂಲಕಾರಣ ಎನ್ನಲಾದ ಈ ಘಟನೆಗಳ ಸತ್ಯಾಸತ್ಯತೆ ಬಗ್ಗೆ ಖಚಿತ ಮಾಹಿತಿಯಾಗಲಿ ಸಾಕ್ಷ್ಯಾಧಾರಗಳಾಗಲಿ ಇರಲಿಲ್ಲವೆಂದು ತನ್ನ ಹೇಳಿಕೆಗಳಲ್ಲಿ ಒಪ್ಪಿಕೊಂಡಿವೆ. ಇದಕ್ಕೆ ಆಪಾದನೆಗಳು ಮತ್ತು ಅಂತೆ-ಕಂತೆ ವದಂತಿಗಳು ಅಷ್ಟೇ ಆಧಾರವಾಗಿತ್ತು. ಸರ್ಕಾರಕ್ಕೆ ಗುವಾಂಗ್ ಡಾಂಗ್ ನಲ್ಲಿ ಇಂತಹ ಘಟನೆ ನಡೆದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಇದು ಚೀನಾದ ಕ್ಸಿನುವಾ ವಾರ್ತಾ ಸಂಸ್ಥೆಯ ಅಂಬೋಣ.

ಹೀಗೆ ಮುಖ್ಯ ಘಟನಾವಳಿಗಳ ಬಗ್ಗೆನೇ ತೀವ್ರ ಸಂಶಯಗಳಿವೆ. ಹಾಗಾದರೆ ಯಾರನ್ನು ನಂಬುವುದು? ಯಾವುದು ನಿಜ ಎಂದು ಹೇಗೆ ನಿರ್ಧರಿಸುವುದು?

'ಎನ್.ಈ.ಡಿ.': ಅಮೆರಿಕನ್ ಸರ್ಕಾರದ 'ಖಾಸಗಿ' ಎನ್.ಜಿ.ಓ.

ಈ ದಂಗೆಗಳಲ್ಲಿ ನಾಯಕತ್ವ ಮತ್ತು ಪ್ರಧಾನ ಪಾತ್ರ ವಹಿಸಿದೆ ಎನ್ನಲಾದ ವಿಶ್ವ ಉಯ್ಘೂ[ರ್] ಕಾಂಗ್ರೆಸ್ (ಡಬ್ಲ್ಯೂ.ಯು.ಸಿ.) ಹಿನ್ನೆಲೆ ಮತ್ತು ಅ[...] ಹಿಂದಿರುವ ಶಕ್ತಿಗಳ ಬಗ್ಗೆ ಸ್ವಲ್ಪ ತಿಳಿದುಕೊಳ್ಳುವು[...] ಇದಕ್ಕೆ ಸಹಾಯ ಮಾಡೀತು. ಅಮೆರಿ[...] ವಾಶಿಂಗ್ಟನ್‌ನಲ್ಲಿ ಮುಖ್ಯ ಕಚೇರಿ ಇರುವ ಮ[...] ಹಲವು ದೇಶಗಳಲ್ಲಿ ಶಾಖೆಗಳನ್ನು ಹೊಂದಿರು[...] ಡಬ್ಲ್ಯೂ.ಯು.ಸಿ., 'ಎನ್.ಈ.ಡಿ.' ಯಿಂದ ವಾರ್ಷಿ[...] 2.15 ಲಕ್ಷ ಡಾಲರು ವಂತಿಗೆ ಪಡೆಯುತ್ತದೆ. ವಂ[...] 'ಮಾನವ ಹಕ್ಕುಗಳ ಬಗ್ಗೆ ಸಂಶೋಧನೆ ಮತ್ತು ಪ್ರಚಾ[...] ಕೈಗೊಳ್ಳಲು. 'ಎನ್.ಈ.ಡಿ.' (ನೇಶನ[...] ಎಂಡೋವ್‌ಮೆಂಟ್ ಫಾರ್ ಡೆಮೊಕ್ರ[...] ಅಮೆರಿಕನ್ ಸರ್ಕಾರದ 'ಖಾಸಗಿ' ಎನ್.ಜಿ[...] ಎನ್ನಲಾದ ವಿಚಿತ್ರ ಸಂಘಟನೆ. ಜಗತ್ತಿನಾದ[...] 'ಪ್ರಜಾಪ್ರಭುತ್ವ' ಹರಡುವುದು ಈ ಸಂಘಟನ[...] ಘೋಷಿತ ಉದ್ದೇಶ.

ಅಮೆರಿಕನ್ ಸರ್ಕಾರದ ದೃಷ್ಟಿಯ[...] 'ಪ್ರಜಾಪ್ರಭುತ್ವ' ಕ್ಕೆ ವಿಶಿಷ್ಟ ಅರ್ಥ ಇದೆ ಎ[...] ಎಲ್ಲರಿಗೂ ಗೊತ್ತು. ಅದರ ಪ್ರಕಾರ (ಉ[...] ವೆನೆಜುವೇಲಾ ಮತ್ತು ಹೊಂಡುರಸ್‌ನ[...] ಚುನಾಯಿತ ಅಧ್ಯಕ್ಷರು ಸಂವಿಧ[...] ಬದಲಾವಣೆಗೆ ಜನಮತ ಸಂ[...] ಸಂಘಟಿಸಲು ಯೋಜಿಸಿದರೆ [...] 'ಪ್ರಜಾಪ್ರಭುತ್ವ' ಕ್ಕೆ ವಿರೋಧ. ಅಮೆ[...] ಪರವಾದ ಜನರಲ್‌ಗಳು (ಉದಾ: ಚಿ[...] ಪಿನೋಶೆ, ಪಾಕಿಸ್ತಾನದ ಮುಶರ[...] ಹೊಂಡುರಸ್‌ನ ಜನರಲ್) ಚುನಾ[...] ಸರ್ಕಾರವನ್ನು ಸಶಸ್ತ್ರ ದಂಗೆ ಮು[...] ಪದಚ್ಯುತಿ ಮಾಡಿದರೆ ಅದು 'ಪ್ರಜಾಪ್ರ[...] ಕ್ಕೆ ತೊಂದರೆ ಮಾಡದು. ಅಮೆರಿಕ ಸರ್ಕಾ[...] ಇಷ್ಟವಿಲ್ಲದ ಪಕ್ಷಗಳನ್ನು ವ್ಯಕ್ತಿಗಳನ್ನು (ಉ[...] ಜಾರ್ಜಿಯಾ, ಉಕ್ರೇನ್, ಪ್ಯಾಲೆಸ್ತೈನ್, ಇರಾ[...] ಜನ ಚುನಾವಣೆಯಲ್ಲಿ ಆರಿಸಿದರೆ [...] 'ಪ್ರಜಾಪ್ರಭುತ್ವ' ಕ್ಕೆ ವಿರೋಧ.

ಪದಚ್ಯುತಿ 'ಪ್ರಜಾಪ್ರಭುತ್ವ'

ಅಮೆರಿಕನ್ ಸರ್ಕಾರದಿಂದ ಎನ್.ಈ[...] ವಾರ್ಷಿಕ ಭಾರೀ ಮೊತ್ತದ ಧನಸಹಾ[...] ಪಡೆಯುತ್ತದೆ. ಇದು ನಾಲ್ಕು ಇತರ 'ಖಾ[...] ಎನ್ನಲಾದ ಫೌಂಡೇಶನ್‌ಗಳ ಮೂಲಕ [...] ವಿತರಿಸುತ್ತದೆ. ಆ ಸಂಘಟನೆಗಳು ಅಮೆರಿಕದ [...] ಪ್ರಮುಖ ರಾಜಕೀಯ ಪಕ್ಷಗಳು, ಪ್ರಮುಖ [...] ಯೂನಿಯನ್ ಮತ್ತು ವಾಣಿಜ್ಯ - ಕೈಗಾ[...] ಛೇಂಬರ್ ಸ್ಥಾಪಿಸಿರುವ ನಾಲ್ಕು ಪ್ರ[...] 'ಪ್ರಜಾಪ್ರಭುತ್ವ ಫೌಂಡೇಶನ್' ಗಳು. ಎನ್.ಈ[...] ಅಮೆರಿಕನ್ ಸರ್ಕಾರದ ದೃಷ್ಟಿಯ 'ಪ್ರಜಾಪ್ರಭುತ್ವ'[...] ಜಗತ್ತಿನ ಜನರ ಮೇಲೆ ಹೊರಿಸುವ ಕೆಲಸದಲ್ಲಿ[...] ರ ದಶಕದಿಂದ ತೊಡಗಿದೆ.

ಅಮೆರಿಕನ್ ಸರ್ಕಾರಕ್ಕೆ ಇಷ್ಟವಾದ ಪಕ್ಷಗಳನ್ನು ವ್ಯಕ್ತಿಗಳನ್ನು ಚುನಾವಣೆ ಮೂಲಕ ಅಥವಾ ಮಿಲಿಟರಿ ದಂಗೆ ಮೂಲಕ ಅಧಿಕಾರಕ್ಕೆ ತರುವುದು; ಅವರಿಗೆ ಷ್ಟವಿಲ್ಲದ (ಅಥವಾ ಕಷ್ಟವಾದ) ಪಕ್ಷಗಳನ್ನು ವ್ಯಕ್ತಿಗಳನ್ನು ಚುನಾವಣೆ ಮೂಲಕ ಅಥವಾ ಮಿಲಿಟರಿ ದಂಗೆ ಮೂಲಕ ಅಧಿಕಾರದಿಂದ ಪದಚ್ಯುತಿಗೊಳಿಸುವುದು; ಇದಕ್ಕೆ ಬೇಕಾದ ವಾತಾವರಣ ನಿರ್ಮಿಸಲು ಆ ದೇಶಗಳಲ್ಲಿ ಪಕ್ಷ ವ್ಯಕ್ತಿ ಸಂಘಟನೆಗಳಿಗೆ 'ತರಬೇತಿ' ಧನಸಹಾಯ ಬೆಂಬಲ ಕೊಡುವುದು - ಇವೆಲ್ಲವನ್ನೂ ಮಾಡುತ್ತಾ ಬಂದಿದೆ. ಹಿಂದೆ ಸೋವಿಯೆತ್ ಒಕ್ಕೂಟ, ಯುಗೋಸ್ಲಾವಿಯಗಳ ವಿಘಟನೆ; ಪೂರ್ವ ಯುರೋಪಿನ 'ವರ್ಣಮಯ ಕ್ರಾಂತಿ'ಗಳು; ಇತ್ತೀಚೆಗೆ ಉಕ್ರೇನ್, ಜಾರ್ಜಿಯಾ, ವೆನೆಜುವೇಲಾ ಮತ್ತು ಹೊಂಡುರಸ್ ನಲ್ಲಿ ನಡಲಾಗುತ್ತಿರುವ 'ಪದಚ್ಯುತಿ ರಾಜಕಾರಣ'ದ ಹಿಂದೆ ಸಹ ಇರುವುದು ಎನ್.ಈ.ಡಿ. ಪೋಷಿತ ಶಕ್ತಿಗಳೇ. ಇವೆಲ್ಲಾ ಅಮೆರಿಕದ ದೈತ್ಯ ಕಂಪನಿಗಳ ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡಲು. ನೈಜ ಪ್ರಜಾಪ್ರಭುತ್ವಕ್ಕೆ ಅಥವಾ ಮಾನವ ಹಕ್ಕುಗಳ ಬೆಂಬಲದ ಮಾತು ಬರಿಯ ಬೊಗಳೆ. ಈ ದೇಶಗಳಲ್ಲಿ ಮೂಗು ತೂರಿಸಲು ಬರಿಯ ನೆಪ ಮಾತ್ರ.

ಯಾರಿಗಾದರೂ ಈ ಬಗ್ಗೆ ಇನ್ನೂ ಭ್ರಮೆಗಳು ಇದ್ದರೆ, ಎನ್.ಈ.ಡಿ. ಸ್ಥಾಪಿಸಲು ಬೇಕಾದ ಕಾನೂನು ರೂಪಿಸಿದ ಅಲೆನ್ ವೈನ್‌ಸ್ಟೈನ್ 1991 ರಲ್ಲಿ ಒಂದು ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಓದಬಹುದು. ಎನ್.ಈ.ಡಿ. ನಲ್ಲಿ 'ಇಂದು ನಾವು ಬಹಿರಂಗವಾಗಿ ಮಾಡುವ ಕೆಲಸಗಳನ್ನು 25 ವರ್ಷಗಳ ಹಿಂದೆ ಸಿ.ಐ.ಎ. ಗುಪ್ತವಾಗಿ ಮಾಡುತ್ತಿತ್ತು' ಎಂದಿದ್ದಾರೆ !

...ೇ ಯಾಕೆ?

ಡಬ್ಲ್ಯೂ.ಯು.ಸಿ. ವಾಶಿಂಗ್ಟನ್ ನಲ್ಲಿ ವಿಪುಲ ಸಿಬ್ಬಂದಿ ಹೊಂದಿರುವ ಭರ್ಜರಿ ಆಫೀಸು ಮತ್ತು ಸುಸಂಘಟಿತ ವೆಬ್ ಸೈಟು ಹೊಂದಿದೆ. ಅದರ ಅಧ್ಯಕ್ಷೆ ರಬಿಯಾ ಕಾದೀರ್ ಉಯ್ಘೂರ್ ಮೂಲದ ಅಮೆರಿಕನ್ ಪ್ರಜೆ. ಆಕೆ ಉಯ್ಘೂರ್ ಅಮೆರಿಕನ್ ಅಸೋಸಿಯೇಶನ್ ಎಂಬ ಇನ್ನೊಂದು 'ಮಾನವ ಹಕ್ಕು ಸಂಘಟನೆ' ಯ ಅಧ್ಯಕ್ಷೆ ಸಹ. ಈ ಸಂಘಟನೆಗೂ ಎನ್.ಈ.ಡಿ. ಯ ಧನಸಹಾಯ ಇದೆ. ಆಕೆ ತನ್ನನ್ನು ಲಾಂಡ್ರಿ ಮಾಲಕಳಿಂದ ದಿಢೀರ್ ಕೋಟ್ಯಾಧೀಶಳಾದವಳು' ಎಂದು ಬಣ್ಣಿಸಿಕೊಂಡಿದ್ದಾಳೆ. ಅಮೆರಿಕದಲ್ಲಿ ಲಾಂಡ್ರಿ ಮಾಲಕತ್ವದಿಂದ ಕೋಟ್ಯಾಧೀಶರಾಗುವುದು ಸಾಧ್ಯವಿಲ್ಲ. ಆದ್ದರಿಂದ ಎನ್.ಈ.ಡಿ. ಯಿಂದ ಹರಿದು ಬರುವ ಲಕ್ಷಾಂತರ ಡಾಲರುಗಳು ಮಾತ್ರ ಇದಕ್ಕೆ ಕಾರಣವಾಗಿರಲು ಸಾಧ್ಯ.

ಈ ವರ್ಷದ ಮೇ ತಿಂಗಳಲ್ಲಿ ಡಬ್ಲ್ಯೂ.ಯು.ಸಿ. ಮತ್ತು ಇನ್ನೊಂದು ಯು.ಎನ್.ಪಿ.ಓ. ಎಂಬ ವಿಚಿತ್ರ ಎನ್.ಜಿ.ಓ. ಜತೆಗೆ 'ಮಾನವ ಹಕ್ಕು ಸಮ್ಮೇಳನ' ನಡೆಸಿತ್ತು. ಅದರ ಪ್ರಾಯೋಜಕರು ಎನ್.ಈ.ಡಿ. ಎಂದು ಬೇರೆ ಹೇಳಬೇಕಾಗಿಲ್ಲವಲ್ಲ. ಈ ಸಮ್ಮೇಳನದ ವಿಷಯ 'ಪೂರ್ವ ತುರ್ಕಿಸ್ತಾನ್: 60 ವರ್ಷಗಳ ಕಮ್ಯುನಿಸ್ಟ್ ಚೀನಾದ ಆಡಳಿತದಲ್ಲಿ' ಆಗಿತ್ತು.

ಯು.ಎನ್.ಪಿ.ಓ. ಜಗತ್ತಿನ ಸ್ವಾಯತ್ತತೆ ಅಥವಾ ಪ್ರತ್ಯೇಕತೆ ಕೇಳುವ ಸುಮಾರು 57 ಪ್ರದೇಶಗಳ 'ಜನತೆ'ಯ ವಿಶ್ವ ಸಂಘಟನೆ. ಉಯ್ಘೂರ್ ಅಲ್ಲದೆ ಕೊಸೊವೊ, ಟಿಬೆಟ್, ರಶ್ಯದ ಚೆಚೆನ್ಯಾ, ಇರಾನಿ ಕುರ್ದಿಶ್, ಇರಾನಿ ಅಜರ್‌ಬೈಜಾನ್ - ಮುಂತಾದವು ಇದರಲ್ಲಿ ಸೇರಿವೆ. ಆದರೆ ಎಲ್ಲಾ 57



ಪ್ರದೇಶಗಳ 'ಜನತೆ'ಯು' ಪಟ್ಟಿಯನ್ನು ಅದು ಪ್ರಕಟಿಸಲು ನಿರಾಕರಿಸಿದೆ.

ಈ ಎಲ್ಲಾ ಪ್ರದೇಶಗಳಿಗೆ ಏನು ಸಾಮಾನ್ಯ ಅಂಶ ಎಂದು ಸೂಕ್ಷ್ಮವಾಗಿ ಗಮನಿಸಿದರೆ, ಇವೆಲ್ಲಾ ಅಮೆರಿಕದ ಪ್ರಮುಖ ವೈರಿ ಅಥವಾ ಎದುರಾಳಿ ದೇಶಗಳ (ಉದಾ. ರಶ್ಯ, ಚೀನಾ, ಇರಾನ್) ಸಾರ್ವಭೌಮತ್ವಕ್ಕೆ ಸೇರಿದ ಪ್ರದೇಶಗಳು. ಆ ದೇಶದ ಧಾರ್ಮಿಕ ಅಥವಾ ಜನಾಂಗೀಯ ಅಲ್ಪ ಸಂಖ್ಯಾತ ಪ್ರದೇಶ. ಇವೆಲ್ಲಕ್ಕಿಂತಲೂ ಹೆಚ್ಚಾಗಿ ತೈಲ ನಿಕ್ಷೇಪ ಇರುವ ಅಥವಾ ಅಂತಹ ಪ್ರದೇಶಗಳಿಗೆ ಪ್ರವೇಶ ನೀಡುವ ಆಯಕಟ್ಟಿನ ಪ್ರದೇಶಗಳು. ಅಮೆರಿಕದ ಜಾಗತಿಕ ರಾಜಕೀಯ-ಮಿಲಿಟರಿ ವ್ಯೂಹದ ದೃಷ್ಟಿಯಿಂದ ಆಯಕಟ್ಟಿನ ಪ್ರದೇಶಗಳು.

ಯು.ಎನ್.ಪಿ.ಓ. ಸ್ಥಾಪಿಸಿದ ಎರ್ಕಿನ್ ಅಲ್ಪ್‌ಟೆಕಿನ್ ಸಹ ಉಯ್ಘೂರ್ ಮೂಲದವನೇ. ಆತ ಅಮೆರಿಕ ಸರ್ಕಾರದ ಮಾಹಿತಿ ಸಂಘಟನೆಯಲ್ಲಿ ಕೆಲಸ ಮಾಡುತ್ತಿರುವಾಗಲೇ ಯು.ಎನ್.ಪಿ.ಓ. ಸ್ಥಾಪಿಸಿದ. ಆತ ಆಗ 'ರೇಡಿಯೋ ಮುಕ್ತ ಯುರೋಪು' ಎಂಬ ಅಮೆರಿಕನ್ ಸರ್ಕಾರದ ಪ್ರಚಾರ ಸಂಸ್ಥೆಯ ಡೈರೆಕ್ಟರ್ ಆಗಿದ್ದ. ಈತನೇ ಡಬ್ಲ್ಯೂ.ಯು.ಸಿ.ಯ ಮೂಲ ಸ್ಥಾಪಕ ಕೂಡಾ ! ವಿಶ್ವಸಂಸ್ಥೆ ನಿಯಮಗಳು ಮತ್ತು ಅಂತರ್ರಾಷ್ಟ್ರೀಯ ಕಾನೂನು ಪ್ರಕಾರ ಮಾನ್ಯತೆ ಪಡೆದಿರುವ ದೇಶಗಳ ಪ್ರದೇಶಗಳ ಪ್ರತ್ಯೇಕತೆಗೆ ಪ್ರಚಾರ ಪ್ರಕ್ಷೋಭೆ ನಡೆಸುವುದು ಅದರ ಉಲ್ಲಂಘನೆ. ಅದೂ ಅಮೆರಿಕನ್ ಸರ್ಕಾರೀ ಸಂಸ್ಥೆಯ ಉದ್ಯೋಗಿಯೊಬ್ಬ.

ಏಪ್ರಿಲ್ 2008 ರಲ್ಲಿ ಯು.ಎನ್.ಪಿ.ಓ. (ಎನ್.ಈ.ಡಿ. ಪ್ರಾಯೋಜಕತ್ವದಲ್ಲಿ) ಡಬ್ಲ್ಯೂ.ಯು.ಸಿ. ಯ 50 ಪ್ರಮುಖ ಕಾರ್ಯಕರ್ತ ಮತ್ತು ನಾಯಕರಿಗೆ ಬರ್ಲಿನ್ ನಲ್ಲಿ 'ನಾಯಕತ್ವದ ತರಬೇತಿ ಶಿಬಿರ' ಏರ್ಪಡಿಸಿತ್ತು. ಇದಲ್ಲದೆ 'ಅಂತರ್ರಾಷ್ಟ್ರೀಯ ಕಾನೂನು ಪ್ರಕಾರ ಸ್ವಾಯತ್ತತೆಯ ಸ್ಥಾನ' ಎಂಬ ಬಗ್ಗೆ ಸಹ ವಿಚಾರ ಸಂಕಿರಣ ನಡೆಯಿತು. ಇದರಲ್ಲಿ ಅಮೆರಿಕನ್ ಸರ್ಕಾರದ ಹಲವು ಅಧಿಕಾರಿಗಳು, ಪ್ರೊಫೆಸರುಗಳು ಸಹ ಭಾಗವಹಿಸಿದ್ದರು. ಈ ಶಿಬಿರದಲ್ಲಿ ಯಾವುದರ ತರಬೇತಿ ನೀಡಲಾಯಿತು. ಏನೇನು ವಿಷಯಗಳ ಬಗ್ಗೆ 'ಚರ್ಚೆ ನಡೆಯಿತು, ಯೋಜನೆ ರೂಪಿಸಲಾಯಿತು, ನಿರ್ಣಯಗಳನ್ನು ಕೈಗೊಳ್ಳಲಾಯಿತು - ಎಂಬುದರ ಬಗ್ಗೆ ಮಾಹಿತಿ ಇಲ್ಲ. ಆದರೆ 'ಸುಸಂಘಟಿತ' 'ಸಮಯೋಚಿತ'' (ಅಮೆರಿಕದ ಜಾಗತಿಕ ರಾಜಕೀಯ-ಮಿಲಿಟರಿ ದೃಷ್ಟಿಯಿಂದ) ಉಯ್ಘೂರ್ ದಂಗೆಗಳ ಹಿನ್ನೋಟದಿಂದ ಅದರ ಬಗ್ಗೆ ಊಹೆ ಮಾಡಬಹುದು.

ಶಾಂಘಾಯ್ ದೇಶಗಳ ಶೃಂಗಸಭೆಯ ಸಮಯದಲ್ಲೇ ಏಕೆ ?

ಶಾಂಘಾಯ್ ದೇಶಗಳ ಶೃಂಗಸಭೆಯ ಸಮಯದಲ್ಲೇ ಉಯ್ಘೂರ್ ದಂಗೆಗಳು ನಡೆದಿದ್ದು ಮೊದಲ ನೋಟಕ್ಕೆ ಕಾಕತಾಳೀಯದಂತೆ ಕಾಣುತ್ತದೆ. ಆದರೆ ಇಲ್ಲೂ ಸೂಕ್ಷ್ಮವಾಗಿ ಗಮನಿಸಿದರೆ ವಿವರವಾದ ಪೂರ್ವ ಯೋಜನೆ, ಸಮಯದ ಆಯ್ಕೆ ಕಾಣುತ್ತದೆ. ಉಯ್ಘೂರ್ ಪ್ರದೇಶ ಇರುವ ಪಶ್ಚಿಮ ಚೀನಾದ ಕ್ಸಿಂಗಿಯಾಂಗ್ ಪ್ರಾಂತ್ಯ ಚೀನಾದ ನೆರೆಯ ದೇಶಗಳ ಜತೆ ಭೂಗಡಿ ಇರುವ ಆಯಕಟ್ಟಿನ ಪ್ರದೇಶ. ಚೀನಾ ನೆರೆಯ ಮಾಜಿ ಸೋವಿಯೆತ್ ಒಕ್ಕೂಟದ ಬಾಗವಾಗಿದ್ದ ಮಧ್ಯ ಏಶ್ಯಾದ 'ಮುಸ್ಲಿಂ' ಬಹುಸಂಖ್ಯಾತ ದೇಶಗಳ ಜತೆ ಘನಿಷ್ಟ ಆರ್ಥಿಕ-ರಾಜಕೀಯ ಸಂಬಂಧ ಬೆಳೆಸುವ ಹಾದಿಯಲ್ಲಿದೆ. ಅದರಲ್ಲೂ ತೈಲ-ಗ್ಯಾಸ್ ಆಮದು-ರಫ್ತು ಮಾಡುವ ಬೃಹತ್ ಪೈಪ್ ಲೈನುಗಳು ಕ್ಸಿಂಗಿಯಾಂಗ್ ಪ್ರಾಂತ್ಯದ ಮೂಲಕವೇ ಹೋಗುತ್ತವೆ. ಹಲವು ಇಂತಹ ಪೈಪ್ ಲೈನುಗಳನ್ನು



ಹಾಕಲಾಗಿದೆ. ಹಲವು ಯೋಜನೆ, ಮಾತುಕತೆ ಹಂತದಲ್ಲಿವೆ.

ಕಝಕಿಸ್ತಾನದ ಜತೆ ಇಂತಹ ಘನಿಷ್ಟ ಆರ್ಥಿಕ-ರಾಜಕೀಯ ಸಂಬಂಧ ಉನ್ನತ ಮಟ್ಟದಲ್ಲಿದೆ. ಕಝಕಿಸ್ತಾನ ಮಧ್ಯ ಏಶ್ಯಾದ ಹೊರಗೆ ಅತಿ ದೊಡ್ಡ ಮತ್ತು ಜಗತ್ತಿನ 5 ನೆ ಅತಿ ದೊಡ್ಡ ತೈಲ ನಿಕ್ಷೇಪ ಇರುವ ದೇಶ. ಕಝಕಿಸ್ತಾನ ತೈಲ-ಗ್ಯಾಸ್ ನಿಕ್ಷೇಪ ಹುಡುಕುವುದು, ಅದನ್ನು ಹೊರತೆಗೆಯಲು' ಸಂಸ್ಕರಿಸಲು ಸಾಗಿಸಲು ಬೇಕಾದ ತಂತ್ರಜ್ಞಾನ, ತಾಂತ್ರಿಕ ತರಬೇತಿ, ತಜ್ಞರನ್ನು ಒದಗಿಸುವುದು ಇತ್ಯಾದಿ ಬಗ್ಗೆ ಚೀನಾ-ಕಝಕಿಸ್ತಾನ ನಡುವೆ ಸಹಕಾರ ಒಪ್ಪಂದ ಇವೆ. ಹಲವು ಜಂಟಿ ಒಡೆತನದಲ್ಲಿ ಇವೆ. ಹಲವು ಜಾರಿಯ ಹಂತದಲ್ಲಿವೆ. ಹಲವು ಮಾತುಕತೆ ಹಂತದಲ್ಲಿವೆ. ಕಝಕಿಸ್ತಾನ ತೈಲ-ಗ್ಯಾಸ್ ಗೆ ಚೀನಾ ದೊಡ್ಡ ಬಳಕೆದಾರ ಸಹ.

ಇದಲ್ಲದೆ ಇತರ ನೆರೆಯ ದೇಶಗಳಾದ ತುರ್ಕಮಾನಿಸ್ತಾನ್, ಉಜ್ಬೇಕಿಸ್ತಾನ ಜತೆ ಇಂತಹ ತೈಲ-ಗ್ಯಾಸ್ ಸಹಕಾರ ಒಪ್ಪಂದ ಸಹ ಆಗಿವೆ. 2007 ರಲ್ಲಿ ತುರ್ಕಮಾನಿಸ್ತಾನ್, ಉಜ್ಬೇಕಿಸ್ತಾನ, ಕಝಕಿಸ್ತಾನ, ಚೀನಾ (ಕ್ಸಿಂಗಿಯಾಂಗ್ ಪ್ರಾಂತ್ಯ)ಗಳಲ್ಲಿ ಹಾದು ಹೋಗುವ 1100 ಮೈಲುಗಳ ಗ್ಯಾಸ್ ಪೈಪ್ ಲೈನು ಸ್ಥಾಪಿಸಲು ಚೀನಾ 200 ಕೋಟಿ ಡಾಲರುಗಳ ಹೂಡಿಕೆಗೆ ಒಪ್ಪಂದ ಆಗಿದೆ. ಇದು 30 ವರ್ಷಗಳ ಗ್ಯಾಸ್ ಪೂರೈಕೆ ಒಪ್ಪಂದವನ್ನೂ ಒಳಗೊಂಡಿದೆ. ರಶ್ಯಾ ಜತೆ ಸಹ ಇಂತಹ ತೈಲ-ಗ್ಯಾಸ್ ಸಹಕಾರ ಒಪ್ಪಂದ ಆಗಿದೆ. ಆಗುತ್ತಿವೆ. ಸೈಬೀರಿಯನ್ ತೈಲ-ಗ್ಯಾಸ್ ಪೈಪ್ ಲೈನು ಸಹ ಕ್ಸಿಂಗಿಯಾಂಗ್ ಪ್ರಾಂತ್ಯದ ಮೂಲಕ ಹಾದು ಹೋಗುತ್ತದೆ. ರಶ್ಯಾದಿಂದ ಆರಂಭವಾಗಿ ಮಧ್ಯ ಏಶ್ಯಾ ಮೂಲಕ ಹಾದು ಚೀನಾದ ವರೆಗಿರುವ ಈ ಯೂರೇಶ್ಯಾದ ಈ ವ್ಯಾಪಕ ಘನಿಷ್ಟ ಆರ್ಥಿಕ-ರಾಜಕೀಯ ಸಂಬಂಧ ಈ ಪ್ರದೇಶದಲ್ಲಿ ಮತ್ತು ಜಾಗತಿಕವಾಗಿಯೂ ಅಮೆರಿಕದ ಅಧಿಪತ್ಯಕ್ಕೆ ಸವಾಲು ಆಗಿದೆ. ಅಮೆರಿಕದ ದೈತ್ಯ ತೈಲ ಕಂಪನಿಗಳು ಜಗತ್ತಿನ ಯಾವದೇ ಪ್ರದೇಶದಲ್ಲಿ ಬೃಹತ್ ತೈಲ-ಗ್ಯಾಸ್ ಕಾಂಟ್ರಾಕ್ಟುಗಳಲ್ಲಿ ತಮಗೇ ಯಾವ ಪಾತ್ರವೂ ಇಲ್ಲದಿರುವ ಸ್ಥಿತಿಯನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ.

ಅಲ್ಲದೆ ಶಾಂಘಾಯ್ ಸಹಕಾರ ಸಂಘಟನೆ ಈ ಘನಿಷ್ಟ ಆರ್ಥಿಕ-ರಾಜಕೀಯ ಸಂಬಂಧಕ್ಕೆ ರಾಜಕೀಯ-ಮಿಲಿಟರಿ ಆಯಾಮ ಕೊಟ್ಟಿದೆ. ಇದು ಅಮೆರಿಕ್ಕೆ ಬಹಳ ಇರುಸು ಮುರುಸು ತಂದಿದೆ. ಈ ಶಾಂಘಾಯ್ ದೇಶಗಳ ಶೃಂಗಸಭೆಯಲ್ಲಿ ಇರಾನ್, ಇಂಡಿಯಾ, ಮಂಗೋಲಿಯಾ, ಪಾಕಿಸ್ತಾನಗಳು ಅಧಿಕೃತವಾಗಿ ವೀಕ್ಷಕ ದೇಶಗಳಾಗಿ ಭಾಗವಹಿಸುತ್ತಿರುವುದು ಅಮೆರಿಕದ ವಿದೇಶ-ಮಿಲಿಟರಿ ನೀತಿ ನಿರ್ಧಾರಕರಿಗೆ ಇನ್ನಷ್ಟು ಆತಂಕ ತಂದಿದೆ.

ಆದ್ದರಿಂದಲೇ ಈ ಹಿನ್ನೆಲೆಯಲ್ಲಿ ಕ್ಸಿಂಗಿಯಾಂಗ್ ಪ್ರಾಂತ್ಯದಲ್ಲಿ ದಂಗೆಗಳು ಮತ್ತು ಸತತ ಪ್ರಕ್ಷುಬ್ಧತೆ, ಅಮೆರಿಕದ ರಾಜಕೀಯ-ಮಿಲಿಟರಿ ವ್ಯೂಹದ ಉದ್ದೇಶಗಳಿಗೆ ಮತ್ತು ಮುಂದೆ ಅಗತ್ಯ ಬಿದ್ದರೆ ಮಿಲಿಟರಿ ಮಧ್ಯಪ್ರವೇಶಕ್ಕೆ ಅಂತರ್ರಾಷ್ಟ್ರೀಯ 'ಜನಾಭಿಪ್ರಾಯ' ಸಿದ್ಧ ಪಡಿಸಲು ಅತೀ ಅಗತ್ಯ. ಚೀನಾದ ನೆರೆ ದೇಶಗಳು ಮುಸ್ಲಿಂ ಬಹುಸಂಖ್ಯಾತ ದೇಶಗಳಾದ್ದರಿಂದ ಚೀನಾ ಮುಸ್ಲಿಂ ಅಲ್ಪ ಸಂಖ್ಯಾತರನ್ನು ದಮನ ಮಾಡುತ್ತಿದೆ ಎಂಬ ಪ್ರಚಾರಕ್ಕಿಂತ ಉತ್ತಮ ಸಾಧನ ಇನ್ನೇನು ಇರಲು ಸಾಧ್ಯ? ಸಾಧ್ಯವಾದರೆ ಚೀನಾ ಮತ್ತು ಅದರ ನೆರೆಯ ದೇಶಗಳ ಸರ್ಕಾರಗಳ ಮತ್ತು ಜನತೆ ನಡುವೆ ವಿರಸ ಜಗಳ ತಂದಿಡುವ ಪ್ರಯತ್ನ ಸಹ, ವಾಶಿಂಗ್ಟನ್ 'ಯೋಜಿತ' 'ಸುಸಂಘಟಿತ' 'ಸಮಯೋಚಿತ'' ಉಯ್ಘೂರ್ ದಂಗೆಗಳ ಹಿಂದೆ ಕಂಡು ಬರುತ್ತವೆ.

ಬರದ ದವಡೆಗೆ ಸಿಕ್ಕಿಬಿದ್ದಿರುವ ಬೀದರ್ ಜನತೆ ತಲೆ ಮೇಲೆ ಕೈ ಹೊತ್ತು ಕೂರಲಿಲ್ಲ. ಕೆಂಬಾವುಟ ಬೀಸುತ್ತಾ ಬೆಟ್ಟದಂತೆ ಬಂದರು... ಬೆಟ್ಟದಂತೆ ಬಂದರು...

ಬೀದರ್: ಬರದ ಬಾಧೆ

ಸಿಡಿದುಬಂದ ಜನ ಸಾಗರ

ಜನತೆ ಬರಗಾಲದ ಬಾಧೆಗೆ ತತ್ತರಿಸಿ ಹೋಗಿದ್ದಾರೆ. ಹಸಿವಿನ ಹಾಹಾಕಾರ ಹೆಚ್ಚಾಗುತ್ತಿದೆ. ಮುಂಗಾರು ಮಳೆ ಪೂರ್ತಿ ಹೋಗಿ ಬೆಳೆ ಕೈ ತಪ್ಪಿದೆ. ಮೇವು ನೀರಿಲ್ಲದೆ ದನ ಕರುಗಳು ಬಡಕಲಾಗಿವೆ. ಕುಡಿಯುವ ನೀರಿಗೂ ತತ್ವಾರ ಬಂದೊದಗಿದೆ. ಈವರೆಗೆ ಒಂಬತ್ತು ಜನ ನೇಗಿಲಯೋಗಿಗಳು ಆತ್ಮಹತ್ಯೆಗೆ ಒಳಗಾಗಿದ್ದಾರೆ. ಆರ್ಥಿಕ ಮುಗ್ಗಟ್ಟು ಸಾಲ ಹಾಗೂ ಬೆಳೆಹಾನಿಯೇ ಇವರ ಸಾವಿಗೆ ಪ್ರಮುಖ ಕಾರಣವಾಗಿದೆ. ಜನರ ಸಂಕಟದ ಜ್ವಾಲೆಗೆ ಎಣ್ಣೆ ಸುರಿದಂತೆ ದಿನಬಳಕೆಯ ವಸ್ತುಗಳ ಬೆಲೆ ಮುಗಿಲು ಮುಟ್ಟಿವೆ. ನೂರು ರೂಪಾಯಿಗೆ ಕಿಲೋ ತೊಗರಿ ಬೇಳೆ ಖರಿದಿಸಿ ಉಣ್ಣಲು ಸಾಧ್ಯವೇ? ಮಹಾರಾಷ್ಟ್ರದಲ್ಲಿ ಹಾಗೂ ಕೇರಳದಲ್ಲಿಯಂತೆ ರೇಷನ್ ಅಂಗಡಿಯ ಮೂಲಕ ಕಡಿಮೆ ದರದಲ್ಲಿ ಬೇಳೆ ಕಾಳುಗಳನ್ನು ವಿತರಿಸುವ ಹೊಣೆ ಕರ್ನಾಟಕ ಸರಕಾರವೂ ಹೊರಬೇಕಾಗುತ್ತದೆ. ಆದರೆ ಬಿಜೆಪಿ ಸರಕಾರವು ಮಠಗಳ ಮೇಲೆ ಪ್ರೀತಿ ಭಕ್ತಿ ವ್ಯಕ್ತಿಸುತ್ತಿದೆ. ಬಡಜನತೆಯನ್ನು ಕಡೆಗಣಿಸುತ್ತಿದೆ. ಪುಕ್ಕಟ್ಟೆ ಕರೆಂಟು ಕೊಡುವುದಾಗಿ ಸುಳ್ಳು ಆಶ್ವಾಸನೆ ಕೊಟ್ಟು ರಾಜ್ಯವನ್ನು ಕತ್ತಲೆ ಕೂಪದಲ್ಲಿ ತಳ್ಳುತ್ತಿದೆ. ನಿಜವಾದ ಬಡಜನತೆಗೆ ರೇಷನ್ ಚೀಟಿಗಳನ್ನು ವಿತರಿಸದೆ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ. ರಾಜ್ಯದ ಜನತೆ ಬರದಿಂದ ತತ್ತರಿಸುವಾಗಲೂ ನೆರವಿಗೆ ಬಾರದ ಸರಕಾರವು ತಾನೊಂದು ಜನವಿರೋಧಿ ಎಂಬುದು ಸಾಬೀತು ಮಾಡಿದೆ. ಸ್ವತಃ ಒಡಕು ಮನೆಯಾದ ಬಿಜೆಪಿಗೆ ಖಂಡಿತ ನಾಡನ್ನು ಕಷ್ಟದಿಂದ ಉಳಿಸುವ ಯಾವ ಇಚ್ಛೆಯೂ ಇಲ್ಲ. ಜಿಲ್ಲೆಯನ್ನು ಬರಗಾಲವೆಂದು ಘೋಷಿಸಲು ಆಗ್ರಹಿಸಿ ಚಳುವಳಿಗಳು ನಡೆದರೂ ನಿರ್ಲಕ್ಷ್ಯ ತೋರಿದ ಸರಕಾರವು ಉಪಚುನಾವಣೆ ಗೆಲ್ಲಲು ಅನಿವಾರ್ಯವಾಗಿ ಬರಗಾಲ ಘೋಷಣೆ ಮಾಡಿದೆ. ಇತರೆ ರಾಜಕೀಯ ಪಕ್ಷಗಳು ಬರಗಾಲ ಘೋಷಣೆಗೆ ಆಗ್ರಹಿಸಿವೆ. ಆದರೆ ಜನತೆಯ ಹಕ್ಕೊತ್ತಾಯಗಳನ್ನು ಮಂಡಿಸಲೇ ಇಲ್ಲ. ಜನತೆಯ ಹೆಸರಲ್ಲಿ ಬರುವ ಹಣವನ್ನು ವ್ಯವಸ್ಥಿತವಾಗಿ ಕೊಳ್ಳೆ ಹೊಡೆಯುವ ಷಡ್ಯಂತ್ರಗಳನ್ನು ಅಲ್ಲಗಳೆಯಲಾಗದು. ಯಾಕೆಂದರೆ ಈಗಾಗಲೇ ದುಡಿಯುವ ಜನತೆಗಾಗಿ ಬಂದ ಉದ್ಯೋಗ ಖಾತ್ರಿ ಹಣವನ್ನು ನುಂಗಿ ನೀರು ಕುಡಿಯುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ.

ಉದ್ಯೋಗ ಖಾತ್ರಿ ಜಾರಿ ಮಾಡಿದ್ದಿದ್ದರೆ...

ಈ ಬಾರಿ ಪ್ರಾಕೃತಿಕ ಬರಗಾಲ ಉಂಟಾಗಿದ್ದನ್ನು ಎದುರಿಸಲು ಉದ್ಯೋಗ ಖಾತ್ರಿ ಕಾಯ್ದೆಯನ್ನು ಸಮರ್ಥವಾಗಿ ಬಳಸಿಕೊಂಡಿದ್ದರೆ ಬರಗಾಲದ ತೀವ್ರತೆಯನ್ನು ತಡೆಗಟ್ಟಲು ಸಾಧ್ಯವಾಗುತ್ತಿತ್ತು. ಜಲ ಸಮೃದ್ಧಿಯನ್ನು ಹೆಚ್ಚಿಸುವ ಮೂಲಕ ಗ್ರಾಮಗಳ ಅಭಿವೃದ್ಧಿಯು ಉದ್ಯೋಗ ಖಾತ್ರಿಯ ಮುಖ್ಯ ಉದ್ದೇಶವಾಗಿದೆ. ಮೂರು ವರ್ಷಗಳಿಂದ ಎಲ್ಲ ಕೆರೆಗಳ ಹೂಳೆತ್ತಿದ್ದರೆ, ಚೆಕ್‌ಡ್ಯಾಮ್ ಗೋಕಟ್ಟಾ ಕಟ್ಟಿಸಿದ್ದರೆ ಮತ್ತು ನಾಲಾ ಇಂಗು ಗುಂಡಿ ಅಗೆಸುವ ಕೆಲಸ ಮಾಡಿಸಿದ್ದರೆ ಹಿಂದಿನ ವರ್ಷಗಳಲ್ಲಿ ಸುರಿದ ಮಳೆ ನೀರು ಉಳಿಯುತ್ತಿತ್ತು. ಕಡೆಪಕ್ಷ ನೀರು ಮೇವು ದೊರೆಯುತ್ತಿತ್ತು. ಆದರೆ ಉದ್ಯೋಗ ಖಾತ್ರಿ ಕಾಯ್ದೆಯನ್ನು ಜಾರಿ ಮಾಡುವಲ್ಲಿ ಸರಕಾರ ಮತ್ತು ಸಂಬಂಧ ಪಟ್ಟ ಇಲಾಖೆ ಸಂಪೂರ್ಣ ನಿರ್ಲಕ್ಷ್ಯ ಮಾಡಿದೆ. ಜನರು ಕೆಲಸ ಕೇಳಿ ಬಂದರೂ ಅವರನ್ನು ದಿಕ್ಕು ತಪ್ಪಿಸಿ ವಾಪಾಸು ಕಳಿಸಲಾಗಿದೆ. ಬೀದರ್ ಜಿಲ್ಲೆಯ ಮೂರು ತಾಲ್ಲೂಕುಗಳಾದ ಭಾಲ್ಕಿ ಬಸವಕಲ್ಯಾಣ ಮತ್ತು ಔರಾದನಲ್ಲಿ ಕಳೆದ ಮೂರು ವರ್ಷ ಅಕ್ಷರಶಃ ಜನರಿಗೆ ಕೆಲಸ ಕೊಟ್ಟಿಲ್ಲ. ಆದರೆ ಎಲ್ಲ ಗ್ರಾಮ ಪಂಚಾಯತ್‌ಗಳಿಗೆ ಹಣ ಹಂಚಲಾಗಿದೆ. ಮೂರು ವರ್ಷದ ತನಿಖೆಯ ಜರೂರಿ ಇದೆ. ಕೋಟಿಗಟ್ಟಲೇ ಭ್ರಷ್ಟಾಚಾರ ನಡೆದಿದೆ ಎಂಬುದು ಜಿಲ್ಲಾ ಪಂಚಾಯತ್‌ನ ಮಾಹಿತಿಯೇ ಹೇಳುತ್ತದೆ. ರೈತಕೂಲಿಕಾರರ ಸ್ನೇಹಿಯಾದ ಈ ಕಾಯ್ದೆಯ ಬಗ್ಗೆ ಜನರಿಗೆ ಸಮಗ್ರ ಮಾಹಿತಿ ಕೊಡಲು ಪಂಚಾಯತ್ ಇಲಾಖೆ ಪ್ರಜ್ಞಾಪೂರ್ವಕವಾಗಿ ಹಿಂದೇಟು ಹಾಕುತ್ತಿದೆ. ಜನರೇ ಸ್ವತಃ ಹೋರಾಡಿ ಕೆಲಸ ಪಡೆದರೂ ಎಲ್ಲಿಯೂ ಪೇಮೆಂಟ್ ಮಾಡುತ್ತಿಲ್ಲ. ಪಂಚಾಯತ್ ಸಿಬ್ಬಂದಿಗಳೇ ಕೂಲಿಕಾರ್ಮಿಕರ ಮೇಲೆ ಗೂಂಡಾಗಿರಿ ಮಾಡಿಸುವ ಮತ್ತು ಮಹಿಳೆಯರ ಮೇಲೆ ಹಲ್ಲೆ ನಡೆಸುವ ದುಷ್ಟ ಕಾರ್ಯಕ್ಕೂ ಇಳಿದಿರುವುದು ಅವರ ಉದ್ಯೋಗ ಖಾತ್ರಿ ವಿರೋಧಿ ಧೋರಣೆ ಬಯಲುಗೊಳಿಸುತ್ತದೆ. ಜನಪ್ರತಿನಿಧಿಗಳು ಸಿಬ್ಬಂದಿ ಸ್ಥಳೀಯ ಪಟ್ಟಭದ್ರ ಶಕ್ತಿಗಳುಮತ್ತು ಅಧಿಕಾರಿವರ್ಗ ಉದ್ಯೋಗ ಖಾತ್ರಿ ವಿರೋಧಿ ವೈಫಲ್ಯಕ್ಕೆ ಕಾರಣೀಭೂತರಾಗಿದ್ದಾರೆ. ಇದರಿಂದಾಗಿ ಒಂದೆಡೆ ಗ್ರಾಮದ ಜನತೆಗೆ ಕೆಲಸವೂ ಸಿಕ್ಕಿಲ್ಲ ಮತ್ತು ಗ್ರಾಮದ ಅಭಿವೃದ್ಧಿಯೂ ಆಗಲಿಲ್ಲ.

ಬರಕ್ಕೆ 9 ಬಲಿ

ಬೀದರ್‌ನಲ್ಲಿ ಈವರೆಗೆ ಒಂಬತ್ತು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿರುವರು. ಸರಕಾರ ಅವರ ರಕ್ಷಣೆಗೆ ಯಾವ ಭರವಸೆಯೂ ಕೊಡುತ್ತಿಲ್ಲ. ಬರಗಾಲದ ಈ ಹೊತ್ತಲ್ಲಿ ಹಸಿದ ಜನರ ಹೊಟ್ಟೆ ತುಂಬಿಸಲು ಜೀವನಾವಶ್ಯಕ ವಸ್ತುಗಳನ್ನು ಕಡಿಮೆ ದರದಲ್ಲಿ ರೇಷನ್ ಅಂಗಡಿಯ ಮೂಲಕ ವಿತರಿಸಬೇಕಾಗುತ್ತದೆ.

ಏನಾಗಬೇಕು?

ಬರಗಾಲದ ಈ ಸಂದರ್ಭದಲ್ಲಿ ನಗರ ಹಳ್ಳಿಗಳೆರಡರಲ್ಲೂ ಜನ ನಿರುದ್ಯೋಗಿಗಳಾಗಿದ್ದಾರೆ. ಆದ್ದರಿಂದ ತಕ್ಷಣ ಬರಗಾಲ ಪರಿಹಾರ ಕಾಮಗಾರಿ ಕೈಗೆತ್ತಿಕೊಳ್ಳಬೇಕು. ವಿದ್ಯಾರ್ಥಿಗಳು ಶಾಲಾ-ಕಾಲೇಜು ಶುಲ್ಕ ಕಟ್ಟಲಾಗದ ಪರಿಸ್ಥಿತಿಯಲ್ಲಿರುವರು. ಪ್ರಾಥಮಿಕದಿಂದ ಪದವಿವರೆಗೆ ಓದುವ ವಿದ್ಯಾರ್ಥಿಗಳ ಬಸ್ ಪಾಸನ್ನು ಉಚಿತವಾಗಿ ಕೊಡಬೇಕಾದ ಅವಶ್ಯಕತೆ ಇದೆ. ಶುಲ್ಕ ರದ್ದು ಪಡಿಸುವ ಜರೂರಿ ಇದೆ. ಯಾವುದೇ ನಿರ್ಬಂಧವಿಲ್ಲದೆ ಸಾರ್ವತ್ರಿಕವಾಗಿ ಎರಡು ರೂಪಾಯಿ ಕೇಜಿಯಂತೆ ಗೋಧಿ ಮತ್ತು ಅಕ್ಕಿ ಪ್ರತಿ ಕುಟುಂಬಕ್ಕೆ 35 ಕೇಜಿಯಂತೆ ವಿತರಿಸಬೇಕು. ಜೋಳ, ಬೇಳೆ ಸಹ ರೇಷನ್ ಅಂಗಡಿಯಲ್ಲಿ ಕಡಿಮೆ ದರದಲ್ಲಿ ದೊರಕುವಂತಾಗಬೇಕು. ರೈತರ ಭೂಮಿಯಲ್ಲಿ ಬಿತ್ತಿದ ಬೀಜವು ನೆಲದಲ್ಲಿಯೇ ಹೂತು



ಹೋಗಿದೆ. ರೈತರು ಸಾಲಗಾರರಾಗಿದ್ದಾರೆ. ಹತಾಶರಾಗಿ ಆತ್ಮಹತ್ಯೆಯ ದಾರಿ ತುಳಿಯುತ್ತಿದ್ದಾರೆ. ಜಗತ್ತಿನ ಚರಾಚರ ಜೀವಿಗಳಿಗೆ ಅನ್ನವಿಕ್ಕುವ ಅನ್ನದಾತನನ್ನು ಉಳಿಸದಿರುವ ಸರಕಾರದ ನೀತಿಯು ದೇಶವನ್ನು ದಿವಾಳಿಯಂಚಿಗೆ ತಳ್ಳುತ್ತದೆ. ಆದ್ದರಿಂದ ಬೆಳೆ ನಾಶವಾದ ಮತ್ತು ಬೆಳೆ ಬಾರದ ಭೂಮಿಗೆ ಸರಕಾರ ಪರಿಹಾರ ಧನ ಕೊಡಬೇಕು. ದನಗಳಿಗೆ ಮೇವು ಕೇಂದ್ರವನ್ನು ಹಾಗೂ ದನಗಳ ಕೊಂಡವಾಡಿಯನ್ನು ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸ್ಥಾಪಿಸಬೇಕು. ಶುದ್ಧವಾದ ಕುಡಿಯುವ ನೀಡಿನ ವ್ಯವಸ್ಥೆ ಮಾಡಬೇಕು. ವಿದ್ಯುಚ್ಛಕ್ತಿಯನ್ನು ಥ್ರೀ ಫೇಸಲ್ಲಿ ಪೂರೈಸಬೇಕು. ಯಾವುದೇ ನಿರ್ಬಂಧವಿಲ್ಲದೆ ಉದ್ಯೋಗ ಖಾತ್ರಿ ಕಾಯ್ದೆಯನ್ನು ಜಾರಿ ಮಾಡಬೇಕು. ನಗರ ಪ್ರದೇಶಕ್ಕೂ ವಿಸ್ತರಿಸಬೇಕು. ಬರ ಇರುವ ಕಾರಣ 200 ದಿನ ಕೆಲಸ ಕೊಡಬೇಕು. ಆದ್ಯತೆಯಾಗಿ ರೈತರ 1ರಿಂದ5 ಎಕರೆ ಭೂಮಿಯಲ್ಲಿ ಜಮೀನು ಅಭಿವೃದ್ಧಿ ಕೆಲಸ ಕೈಗೊಳ್ಳಬೇಕು. ಮತ್ತು ಮಾಡಿದ ಕೆಲಸಕ್ಕೆ ವಾರಕ್ಕೊಮ್ಮೆ ಕೂಲಿ ಪಾವತಿ ಮಾಡಬೇಕು.

ತಡೆ ಹಿಡಿದ ಕೂಲಿಯನ್ನು ತಕ್ಷಣ ಪಾ
ಮಾಡಬೇಕು. ಉದ್ಯೋಗ ಖಾತ್ರಿ ಕಾಯ್ದೆ ಜ
ಮಾಡುವಲ್ಲಿ ಹಿಂದೇಟು ಹಾಕುವ ಅಡ್ಡಿ ಉ
ಮಾಡುವ ಕಾನೂನು ಉಲ್ಲಂಘನೆ ಮಾಡ
ಸಿಬ್ಬಂದಿ ಮೇಲೆ ಕ್ರಮ ಕೈಗೊಳ್ಳಬೇಕು. ಮೂ
ವರ್ಷ ನಡೆದ ಭ್ರಷ್ಟಾಚಾರದ ಬಗ್ಗೆ ಸಮಗ್ರ ತ
ಮಾಡಬೇಕು. ಆತ್ಮಹತ್ಯೆ ಮಾಡಿಕೊಂಡ ರೈ
ಕುಟುಂಬಕ್ಕೆ ಪರಿಹಾರ ಧನ ಹಾಗೂ ಸದಸ್ಯರೊಬ್ಬ
ಉದ್ಯೋಗವನ್ನು ಕೊಡಬೇಕು.

ಈ ಮೇಲ್ಕಂಡ ಹಕ್ಕೊತ್ತಾಯಗಳಿಗೆ ಆಗ್ರ
ಬೀದರ ನಗರದಲ್ಲಿ ಬೃಹತ್ ಪ್ರತಿಭಟನಾ ರ
ನಡೆದು ಜಿಲ್ಲಾಧಿಕಾರಿಗಳ ಕಚೇರಿಯನ್ನು ಮು
ಹಾಕಲಾಯಿತು. ರ್‍ಯಾಲಿಯ ನೇತೃತ್ವವನ್ನು ಸಿಪಿಐ(
ಪಕ್ಷದ ರಾಜ್ಯ ಸಭಾ ಸದಸ್ಯರಾದ ಹಾಗೂ ಪೊಲಿ
ಬ್ಯೂರೋ ಸದಸ್ಯರಾದ ಕಾ.ಬೃಂದಾ ಕಾರಾ
ಮಾಜಿ ಶಾಸಕರಾದ ಹಾಗೂ ಪಕ್ಷದ ರಾ
ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ.ಜಿ
ಶ್ರೀರಾಮರೆಡ್ಡಿ ಹಾಗೂ ರಾಜ್ಯ ಕಾರ್ಯದ
ಮಂಡಳಿ ಸದಸ್ಯರಾದ ಕಾಂ. ಕೆ ನೀಲಾ ವಹಿ

ಇನ್ನೆಷ್ಟು ಜನ ಸಾಯಬೇಕು?

ರೈತರ ಆತ್ಮಹತ್ಯೆಯನ್ನು ತಡೆಯುವಲ್ಲಿ ಹಾ
ಜನರ ಕೈಗೆ ಕೆಲಸ ಕೊಟ್ಟು ಹಸಿವು ಹಿಂಗಿಸು
ವಿಫಲವಾದ ಕೇಂದ್ರ ಮತ್ತು ರಾಜ್ಯ ಸರಕಾರ
ತರಾಟೆಗೆ ತಗೊಂಡ ಬೃಂದಾ, ಬಜೇಟಿ
ಉದ್ಯೋಗ ಖಾತ್ರಿ ಕೂಲಿಯ
ನೂರು ರೂಪಾಯ
ಹೆಚ್ಚಿಸುವುದಾಗಿ ಕೇಂದ್ರ ಸರ
ಹೇಳಿದೆ. ಆದರೆ ಅದಕ
ಹಣವಿಡದೆ ಜನತೆಯೊಂ
ಆಟವಾಡುತ್ತಿದೆ. ತಕ್ಷಣ ಕೂಲಿಯ
ನೂರ ಐವತ್ತು ರೂಪಾ
ಹೆಚ್ಚಿಸಬೇಕು ಎಂದು ಆಗ್ರಹಿಸಿ
ಚುನಾವಣೆಯಲ್ಲಿ ಮತದಾರ
ಓಲೈಸಲು ಎರಡು ರೂಪಾಯಿ
ದರದಲ್ಲಿ ಆಹಾರ ಪದಾರ್ಥಗ
ವಿತರಿಸುವುದಾಗಿ ಹೇಳಿದ ಸರ
ಈಗ ಉಣ್ಣುವ ಅನ್ನದ ಬೆಲೆ
ಗಗನಕ್ಕೇರಿಸಿ ಜನತೆಗೆ ವ
ಮಾಡುತ್ತಿದೆ ಎಂದು ಆರೋಪಿಸಿದರು. ಬಿ
ಜಿಲ್ಲೆಯಲ್ಲಿ ಕೆಲವೇ ದಿನಗಳಲ್ಲಿ ಒಂಬತ್ತು ರ
ಆತ್ಮ ಹತ್ಯೆ ಮಾಡಿಕೊಂಡಿದ್ದಾರೆ. ಸರಕಾರ
ತೆರೆಯಲು ಇನ್ನೆಷ್ಟು ರೈತರು ಸಾವಿಗೆ ಶರಣಾಗಬೆ
ಎಂದು ಪ್ರಶ್ನಿಸಿದರು.

ರ್‍ಯಾಲಿಯನ್ನುದ್ದೇಶಿಸಿ ಕಾ. ಶ್ರೀರಾಮರೆಡ್ಡಿ
ಮಾತನಾಡಿ “ಕೇಂದ್ರ ಮತ್ತು ರಾಜ್ಯ ಸರಕಾರಕ್ಕೆ
ಕಷ್ಟಗಳ ನಿವಾರಣೆ ಬೇಕಿಲ್ಲ. ಕರ್ನಾಟಕವನ್ನು
ಧಣಿಗಳು ಲೂಟಿ ಮಾಡುತ್ತಿದ್ದಾರೆ. ರೈತರ ಸ
ಕೂಲಿಕಾರರ ಸಂಕಟಗಳಿಗೆ ಎರಡು ಸರಕಾರಗಳ
ಕಾರಣವಾಗಿದೆ. ಚುನಾವಣೆಯಲ್ಲಿ ಬಡವರ
ಮೊಸಳೆ ಕಣ್ಣೀರು ಸುರಿಸುವುದು ನಂತರ ಉಳ್ಳ
ಮಣೆ ಹಾಕುವುದು ಇವರ ಯಾ
ಧೋರಣೆಯಾಗಿದೆ. ಜನರು ಸಂಘಟಿತ ಸಂಘ
ಮೂಲಕ ಮಾತ್ರ ತಮ್ಮ ಹಕ್ಕು ಪಡೆಯಲು ಸ
ಎಂದು ಕರೆ ಕೊಟ್ಟರು. ಮುತ್ತಿಗೆ ಸಭೆಯನ್ನು

ಪುಟ

ರಿಲಯನ್ಸ್ ಕಂಪನಿಯಿಂದ ಅನಿಲ ಸಂಪತ್ತು ಲೂಟಿ

ಕಳ್ಳ - ಪೊಲೀಸ್ ಆಟವಾಡುತ್ತಿರುವ ಯುಪಿಎ ಸರ್ಕಾರ

ಜನತೆಗೆ, ರಾಷ್ಟ್ರಕ್ಕೆ ಸೇರಬೇಕಾದ ಪೆಟ್ರೋಲಿಯಂ ಸಂಪನ್ಮೂಲವನ್ನು ಎರಡು ರಿಲಯನ್ಸ್ ಕಂಪನಿಗಳು ತಮ್ಮ 'ತಾತ'ನ ಆಸ್ತಿಯೋ ಎಂಬಂತೆ ಹಂಚಿಕೊಳ್ಳಲು ಅವಕಾಶ ಕೊಡಲಾಗಿದೆ ಎಂದರೆ ಅರ್ಥವೇನು?


ಜಯ

ನಮ್ಮ ದೇಶದ ಇಂಧನ ಬೇಡಿಕೆಯನ್ನು ಪೂರೈಸಲು ಶೇ. 70ಕ್ಕಿಂತಲೂ ಹೆಚ್ಚಿನ ಇಂಧನವನ್ನು ಒಂದಕ್ಕೆರಡು ಬೆಲೆ ತೆತ್ತು ನಾವು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ. ಅಂತರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆಗಳು ಕಡಿಮೆಯಿದ್ದರೂ ಯುಪಿಎ ಸರ್ಕಾರ ಪೆಟ್ರೋಲ್, ಡೀಸೆಲ್ ಮತ್ತು ಎಲ್.ಪಿ.ಜಿ. ಗಳ ಬೆಲೆಯೇರಿಸಿ ಜನತೆಗೆ ಷಾಕ್ ನೀಡುತ್ತಲೇ ಬರುತ್ತಿದೆ. ಆದರೆ, ಲಕ್ಷಾಂತರ ಕೋಟಿ ಮೌಲ್ಯದ ದೇಶದ ಅನಿಲ ಸಂಪತ್ತನ್ನು ರಿಲಯನ್ಸ್ ಕಂಪನಿಯು ಲೂಟಿ ಮಾಡಲು ಅವಕಾಶ ಮಾಡಿಕೊಟ್ಟು ತಾನು ಮಾತ್ರ ಏನೂ ಕಾಣದ ಮುಗ್ಧನಂತೆ ಕೈಕಟ್ಟಿ ಮೌನ ವಹಿಸಿರುವ ಯುಪಿಎ ಸರ್ಕಾರವನ್ನು ಏನೆಂದು ಕರೆಯುವುದೋ ತಿಳಿಯದು. 10 ವರ್ಷಗಳ ಹಿಂದೆ ತನಗೆ ಗೊತ್ತಿಲ್ಲದೆ ಪಾಕಿಸ್ತಾನದ ಉಗ್ರಗಾಮಿಗಳು 150 ಚದುರ ಕಿ.ಮೀ ಜಾಗ ಆಕ್ರಮಿಸಿಕೊಂಡಿದ್ದಾರೆಂದು ಬಿಜೆಪಿ ಸರ್ಕಾರ ಬಡಬಡಿಸಿದಾಗ ಇಡೀ ದೇಶ ಸೆಟೆದೆದ್ದು ನಿಂತಿತ್ತು. ನಂತರ ನಮ್ಮ ಸಶಸ್ತ್ರ ಸೇನಾ ಪಡೆಗಳು ಬಲಿದಾನ, ಹೋರಾಟಗಳ ಮೂಲಕ ವಾಪಸು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದವು. 2005ರಲ್ಲಿ ದೇಶದ ಒಡೆತನದಲ್ಲಿರುವ ಅನಿಲ ಪೂರೈಕೆಗೆ ಸಂಬಂಧಿಸಿದಂತೆ 'ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್' ಮತ್ತು 'ರಿಲಯನ್ಸ್ ನ್ಯಾಚುರಲ್ ರಿಸೋರ್ಸಸ್ ಲಿಮಿಟೆಡ್'ಗಳ ನಡುವೆ ಅಕ್ರಮ ಒಪ್ಪಂದವಾದಾಗಿನಿಂದ ನಾಲ್ಕು ವರ್ಷಗಳ ಕಾಲ ಮೌನವಹಿಸಿದ್ದ ಸರ್ಕಾರ, ಈ ಸುದ್ದಿ ಜಗಜ್ಜಾಹೀರಾದ ಮೇಲಷ್ಟೆ ಎಚ್ಚೆತ್ತುಕೊಂಡು 339 ಚದುರ ಕಿ.ಮೀ ವಿಸ್ತೀರ್ಣದ ಅನಿಲ ಉತ್ಪಾದನಾ ಪ್ರದೇಶಕ್ಕೆ ತಾನೇ ನಿಜವಾದ ಮಾಲೀಕನೆಂದು ದಾಖಲೆ ಪತ್ರಗಳನ್ನು ಹಿಡಿದುಕೊಂಡು ಕೋರ್ಟಿನಿಂದ ಕೋರ್ಟಿಗೆ ಭಿಕ್ಷಪಾರಿಯಂತೆ ಅಲೆಯುವಂತಾಗಿದೆ.

ಧೀರೂಬಾಯಿ ಅಂಬಾನಿಯ ಕಂಪನಿ ರಿಲಯನ್ಸ್ ಸಮೂಹವನ್ನು ಇಬ್ಬರು ಮಕ್ಕಳ ನಡುವೆ ಪಾಲು ಮಾಡಿರೋದು ಎಲ್ಲರಿಗೂ ಗೊತ್ತಿರೋ ವಿಷಯ. ಅಣ್ಣ ಮುಖೇಶ್ ಅಂಬಾನಿಯ ಒಡೆತನದ ಕಂಪನಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್' ವಿರುದ್ಧ ತಮ್ಮ ಅನಿಲ್ ಅಂಬಾನಿ ಒಡೆತನದ 'ರಿಲಯನ್ಸ್ ನ್ಯಾಚುರಲ್ ರಿಸೋರ್ಸಸ್ ಲಿಮಿಟೆಡ್' ಕಂಪನಿಯು ಸುಪ್ರೀಂ ಕೋರ್ಟಿನ ಕಟಕಟೆ ಹತ್ತಿದ ನಂತರವಷ್ಟೆ ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮಂತ್ರಿ ಮುರುಳಿ ದೇವ್ರ ಇದುವರೆಗೂ ಕಳ್ಳ ಹೆಜ್ಜೆ ಇಡುತ್ತಿದ್ದವರು, ಈಗ ಪಾತ್ರ ಬದಲಿಸಿ ಭ್ರಷ್ಟ ಪೊಲೀಸನ ವೇಷ ಧರಿಸಿ ನಿಂತಿದ್ದಾರೆ.


ಕೃಷ್ಣಾ ಗೋದಾವರಿ ಅನಿಲ ಸಂಪತ್ತಿನ ಲೂಟಿಯ ಹಿನ್ನೆಲೆ

1999 ನೇ ಇಸವಿಯಲ್ಲಿ ಭೂಗರ್ಭದಲ್ಲಿ ಸಿಗುವ ಪೆಟ್ರೋಲಿಯಂ ತೈಲ ಮತ್ತು ಅನಿಲಗಳನ್ನು ಶೋಧಿಸಿ, ಉತ್ಪಾದಿಸಲು ಖಾಸಗಿ ಕಂಪನಿಗಳನ್ನು ಕಂಟ್ರಾಕ್ಟುದಾರರಂತೆ ಸರ್ಕಾರ ನೇಮಕ ಮಾಡಿಕೊಂಡಿತು. ಅದರಂತೆ, ಆಯ್ಕೆಯಾದ ಕಂಟ್ರಾಕ್ಟು ಕಂಪನಿಯು ದೇಶದಲ್ಲಿ ಲಭ್ಯವಿರುವ ಅನಿಲ ಸಂಪತ್ತನ್ನು ಪತ್ತೆ ಹಚ್ಚುವುದು ಮತ್ತು ಅನಿಲ ಬಾವಿಗಳಿಂದ ಅನಿಲವನ್ನು ಹೊರತೆಗೆದು ಸಂಸ್ಕರಿಸುವುದು. ಹೀಗೆ ಸಂಸ್ಕರಿಸಿದ ಅನಿಲವನ್ನು ಸರ್ಕಾರ ನಿಗದಿಪಡಿಸಿದ ಬೆಲೆಗೆ ಮತ್ತು ಸರ್ಕಾರವೇ ನಿರ್ಧರಿಸುವ ಗ್ರಾಹಕ ಕಂಪನಿಗಳಿಗೆ ಅದನ್ನು ಮಾರುವುದು ಕಂಟ್ರಾಕ್ಟಿನ ನಿಯಮಾವಳಿ. ಆಂಧ್ರಪ್ರದೇಶದಲ್ಲಿರುವ 'ಕೃಷ್ಣಾ ಗೋದಾವರಿ ಅನಿಲ ಬಾವಿ' ಎಂದು ಹೆಸರಿಸಲಾದ ಪ್ರದೇಶದಲ್ಲಿ ಹೀಗೆ ನೈಸರ್ಗಿಕ ಅನಿಲವನ್ನು ಶೋಧಿಸಿ ಉತ್ಪಾದಿಸುವ ಕಾರ್ಯ ರಿಲಯನ್ಸ್ ಮತ್ತು ನಿಕೋ ರಿಸೋರ್ಸಸ್ ಪಾಲುದಾರಿಕೆಯ ಕಂಪನಿಗೆ ಸಿಕ್ಕಿತು. ಆದರೆ ರಿಲಯನ್ಸ್ ಕಂಪನಿಯನ್ನು ಅಂಬಾನಿ ಸಹೋದರರ ನಡುವೆ ವಿಭಜನೆ ಮಾಡಿದ ನಂತರ ಗೋದಾವರಿ ಅನಿಲ ಬಾವಿಯಲ್ಲಿ ದೊರೆಯುವ ನೈಸರ್ಗಿಕ ಅನಿಲವನ್ನು ಹಂಚಿಕೊಳ್ಳುವ ಸಲುವಾಗಿ 2005ರಲ್ಲಿ ಅಣ್ಣನ ಒಡೆತನದ 'ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್' ಮತ್ತು ತಮ್ಮನ ಒಡೆತನದ 'ರಿಲಯನ್ಸ್ ನ್ಯಾಚುರಲ್ ರಿಸೋರ್ಸಸ್ ಲಿಮಿಟೆಡ್' ಗಳ ನಡುವೆ ಅಕ್ರಮ ಒಪ್ಪಂದವಾಯಿತು. ಸ್ವಾರಸ್ಯಕರ ವಿಷಯವೆಂದರೆ, ತಮ್ಮ ಪಿತ್ರಾರ್ಜಿತ ಆಸ್ತಿಯನ್ನು ಪಾಲು ಮಾಡಿಕೊಳ್ಳುವಂತೆ ದೇಶದ ಅನಿಲ ಸಂಪತ್ತನ್ನು ಸಹ ಇವರು ಪಾಲು ಮಾಡಿಕೊಂಡಾಗಲೂ ಏನೂ ಗೊತ್ತಿಲ್ಲದ 'ಹೆಡ್ಡ'ನಂತೆ ಸರ್ಕಾರ ಮುಗುಮ್ಮಾಗಿ ಕುಳಿತಿತ್ತು.



ಅನಿಲವನ್ನು ಅಳೆಯುವ ಮಾನ

ತೈಲ ಬಾವಿಗಳಿಂದ ಪೆಟ್ರೋಲಿಯಂನ್ನು ಹೊರತೆಗೆದು ಸಂಸ್ಕರಿಸಿ ಇಂಧನವಾಗಿ ಬಳಸುವಂತೆಯೇ ಅನಿಲ ಬಾವಿಗಳಿಂದ ಅನಿಲವನ್ನು ಹೊರತೆಗೆದು ಇಂಧನವಾಗಿ ಬಳಸಲಾಗುತ್ತದೆ. ಪರಿಸರ ಮಾಲಿನ್ಯ ತಡೆಗಟ್ಟುವಲ್ಲಿ ಪೆಟ್ರೋಲಿಯಂ ತೈಲಕ್ಕೆ ಹೋಲಿಸಿದಲ್ಲಿ ನೈಸರ್ಗಿಕ ಅನಿಲವು ಕೆಲಮಟ್ಟಿಗೆ ಫಲಕಾರಿ. ಅನಿಲವನ್ನು



ಜಾಗತಿಕವಾಗಿ ಬಿಟಿಯು ಅಂದರೆ ಬ್ರಿಟಿಷ್ ಥರ್ಮಲ್ ಯೂನಿಟ್ ನಿಂದ ಅಳೆಯಲಾಗುತ್ತದೆ. ಒಂದು ಬಿಟಿಯು ಎಂದರೆ 1.06 ಕಿಲೋ ಜೌಲ್ಸ್ ಗೆ ಸಮ. 1 ಜೌಲ್ಸ್ ಎಂದರೆ ಒಂದು ಕೆಜಿ ತೂಕದ ವಸ್ತುವನ್ನು ಚದುರ ಸೆಕೆಂಡ್‌ವೊಂದರಲ್ಲಿ ಒಂದು ಮೀಟರ್‌ನಷ್ಟು ಚಲಿಸಲು ತಗಲುವ ಶಕ್ತಿಗೆ ಸಮಾನ. ಮತ್ತೊಂದು ರೀತಿಯಲ್ಲಿ ಹೇಳುವುದಾದಲ್ಲಿ, ಒಂದು ಜೌಲ್ ಎಂದರೆ ಒಂದು ಸೆಕೆಂಡಿನಲ್ಲಿ ಒಂದು ವ್ಯಾಟ್ ವಿದ್ಯುತ್ತನ್ನು ಉತ್ಪಾದಿಸಲು ತಗಲುವ ಶಕ್ತಿಗೆ ಸಮ.

ರಿಲಯನ್ಸ್ ಅಣ್ಣ-ತಮ್ಮಂದಿರ ಅಕ್ರಮ ಒಪ್ಪಂದ

ಈ ಒಪ್ಪಂದದಂತೆ: ಗೋದಾವರಿ ಅನಿಲ ಬಾವಿಯ ಕಂಟ್ರಾಕ್ಟು ಹೊಂದಿರುವ ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯು ಪ್ರತಿ ದಿನ 12 ದಶಲಕ್ಷ ಘನ ಮೀಟರ್ ಅನಿಲವನ್ನು ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಉಷ್ಣ ವಿದ್ಯುತ್ ಕಾರ್ಪೋರೇಷನ್ (ಎನ್.ಟಿ.ಪಿ.ಸಿ) ಕಂಪನಿಗೆ ಸರಬರಾಜು ಮಾಡುವುದು. ಮುಂದಿನ 28 ದಶಲಕ್ಷ ಘನ ಮೀಟರ್ ಅನಿಲವನ್ನು ರಿಲಯನ್ಸ್ ನ್ಯಾಚುರಲ್ ರಿಸೋರ್ಸಸ್ ಲಿಮಿಟೆಡ್ ಕಂಪನಿಗೆ ನೀಡುವುದು. ಅನಿಲ ಬಾವಿಯಲ್ಲಿ ದೊರೆಯುವ ಉಳಿಕೆ ಅನಿಲವನ್ನು ಶೇ. 60ರಷ್ಟನ್ನು ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯು ಮತ್ತು ಶೇ. 40ರಷ್ಟನ್ನು ರಿಲಯನ್ಸ್ ನ್ಯಾಚುರಲ್ ರಿಸೋರ್ಸಸ್ ಲಿಮಿಟೆಡ್ ಕಂಪನಿಯು ಇಟ್ಟುಕೊಳ್ಳುವಂತೆ ಇವೆರಡೂ ಕಂಪನಿಗಳು ತಾವೇ ಹಂಚಿಕೊಂಡವು. ಅನಿಲದ ಬೆಲೆಯನ್ನು ದಶಲಕ್ಷ ಬಿಟಿಯು ಒಂದಕ್ಕೆ 2.34 ಡಾಲರ್‌ನಂತೆ ನಿಗದಿಪಡಿಸಿಕೊಂಡರು.

ಇದರಿಂದ ಬೆಲೆ ನಿಗಧಿಯಲ್ಲಿ ಮತ್ತು ಅನಿಲವನ್ನು ಯಾರಿಗೆ ನೀಡಬೇಕು ಎನ್ನುವ ಸರ್ಕಾರಕ್ಕಿದ್ದ ಹಕ್ಕನ್ನು ಗಾಳಿಗೆ ತೂರಿದವು. ಈ ಒಪ್ಪಂದದಂತೆ ರಿಲಯನ್ಸ್ ಕಂಪನಿಯು ತನಗೆ ಅನಿಲವನ್ನು ನೀಡದೆ ದುಬಾರಿ ಹಣ ಸುಲಿಯಲು ಯತ್ನಿಸುತ್ತಿದೆಯೆಂದು ತಮ್ಮ ಅನಿಲ್ ಅಂಬಾನಿ ಮಹಾರಾಷ್ಟ್ರದ ಹೈಕೋರ್ಟಿನಲ್ಲಿ ದಾವೆ ಹೂಡಿದರು. ಆಗಷ್ಟೆ ಸರ್ಕಾರ ಎಚ್ಚೆತ್ತುಕೊಂಡು ದೇಶದ ಸಂಪತ್ತಾಗಿರುವ ಅನಿಲವನ್ನು ಯಾವುದೇ ಖಾಸಗಿ ಕಂಪನಿಯು ಅಕ್ರಮವಾಗಿ ಒಪ್ಪಂದ ಮಾಡಿಕೊಂಡು ಬೆಲೆ ನಿಗದಿ ಮಾಡಿಕೊಳ್ಳುವುದು ಮತ್ತು ತಮ್ಮೊಳಗೆ ಹಂಚಿಕೊಳ್ಳುವುದಕ್ಕೆ ಅವಕಾಶವಿಲ್ಲ ಮತ್ತು ಸರ್ಕಾರ ನಿಗದಿಪಡಿಸಿದ ಬೆಲೆಗೆ ಮತ್ತು ಹಂಚಿಕೆ ಮಾಡಿದವರೆಗೆ ಅದನ್ನು ನೀಡುವುದಷ್ಟೆ ಖಾಸಗಿ ಕಂಪನಿಗಳ ಕೆಲಸವೆಂದು 2009ರಲ್ಲಿಯಷ್ಟೆ ಸುಪ್ರೀಂಕೋರ್ಟಿನಲ್ಲಿ ವಿಶೇಷ ಅರ್ಜಿ ಸಲ್ಲಿಸಿದೆ.

ಎನ್.ಟಿ.ಪಿ.ಸಿ ಮತ್ತು ರಿಲಯನ್ಸ್ ನಡುವಿನ ಒಪ್ಪಂದ

ಮುಖೇಶ್ ಅಂಬಾನಿ ಒಡೆತನದ ರಿಲಯನ್ಸ್ ಕಂಪನಿಯು ತಮ್ಮನೊಂದಿಗೆ ಮಾತ್ರವೇ ಅಕ್ರಮ ಒಪ್ಪಂದ ಮಾಡಿಕೊಂಡು ಕೊನೆಗೆ ಕೈಕೊಟ್ಟಿಲ್ಲ. ಸರ್ಕಾರಿ ಸ್ವಾಮ್ಯದ ಎನ್.ಟಿ.ಪಿ.ಸಿ ಕಂಪನಿಯು 2004ರಲ್ಲಿ ತನ್ನ ಉಷ್ಣ ವಿದ್ಯುತ್ ಸ್ಥಾವರಗಳಿಗೆ 17ವರ್ಷ ಕಾಲ ನೈಸರ್ಗಿಕ ಅನಿಲವನ್ನು ಸರಬರಾಜು ಮಾಡಲು ಜಾಗತಿಕ ಟೆಂಡರ್ ಕರೆದಿತ್ತು. ಅದರಲ್ಲಿ ಕಡಿಮೆ ಬೆಲೆಗೆ ಅಂದರೆ ಪ್ರತಿ ದಶಲಕ್ಷ ಬಿಟಿಯು ಅನಿಲಕ್ಕೆ 2.34ಡಾಲರ್‌ನಂತೆ ಅನಿಲ ಸರಬರಾಜು ಮಾಡುವುದಾಗಿ ನ್ಯಾಯಬದ್ಧ ಒಪ್ಪಂದವನ್ನು ರಿಲಯನ್ಸ್ ಕಂಪನಿಯು ಮಾಡಿಕೊಂಡಿತ್ತು. ಆದರೆ ನಂತರದಲ್ಲಿ ತಾನು ಆ ಬೆಲೆಗೆ ಅನಿಲ ಸರಬರಾಜು ಮಾಡಲು ಸಾಧ್ಯವಿಲ್ಲವೆಂದು ರಿಲಯನ್ಸ್ ಕಂಪನಿಯು ಉಲ್ಟಾ ಹೊಡೆಯಿತು.

ರಾಸಾಯನಿಕ ಗೊಬ್ಬರ ಬೆಲೆಯೇರಿಕೆಯಲ್ಲಿ ಸರ್ಕಾರದ ಪಾತ್ರ

ಇಂತಹ ಸಂದರ್ಭದಲ್ಲಾದರೂ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ದೇಶದ ಸಂಪತ್ತು ಸುಲಭದರದಲ್ಲಿ ಜನತೆಗೆ ದೊರೆಯುವಂತೆ ಮಾಡಬಹುದಿತ್ತು. ಆದರೆ ಈ ಕುರಿತು ನಿರ್ಲಕ್ಷ್ಯ ತೋರುತ್ತಾ, 2007ರಲ್ಲಿ ಸಭೆ ಸೇರಿದ ಮಂತ್ರಿಗಳ ಸಭೆಯಲ್ಲಿ ಸರ್ಕಾರ ಅನಿಲ ಬೆಲೆಯನ್ನು ಪ್ರತಿ ದಶಲಕ್ಷ ಬಿಟಿಯು ಗೆ 4.2 ಡಾಲರಿನಂತೆ ನಿಗದಿಪಡಿಸಿ ಮುಖೇಶ್ ಅಂಬಾನಿಯ ರಿಲಯನ್ಸ್ ಕಂಪನಿಯು ಲಾಭಹೊಡೆಯಲು ಅನುಕೂಲ ಮಾಡಿಕೊಟ್ಟಿತು. ವಾಸ್ತವವಾಗಿ ಖಾಸಗಿ ಕಂಪನಿಯು ಅನಿಲವನ್ನು ಬಾವಿಯಿಂದ ಹೊರತೆಗೆಯಲು ತಗಲುವ ವೆಚ್ಚವನ್ನು ಆಡಿಟ್

ಪುಟ 1[illegible]ಕ್ಕೆ

ಅಸ್ಪೃಶ್ಯತೆ, ಜಾತಿ ದೌರ್ಜನ್ಯಗಳ ವಿರುದ್ಧ ಹೋರಾಟಕ್ಕೆ ಸಿಪಿಐ(ಎಂ) ಕಾರ್ಯಾಗಾರದ ನಿರ್ಣಯ

ಸ್ವಾತಂತ್ರ್ಯದ 60 ವರ್ಷಗಳ ನಂತರವೂ ದಲಿತರ ಸ್ಥಿತಿ ದುರ್ಬರ

ಕೆ. ವರದರಾಜನ್

ಸ್ವಾತಂತ್ರ್ಯ ಪಡೆದು 60 ವರ್ಷಗಳೇ ಕಳೆದು ಹೋಗಿದ್ದರೂ, ದಲಿತರು ಅಭಿವೃದ್ಧಿ ಹೊಂದಿಲ್ಲ. ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯ ಹೋಗಿಲ್ಲ ಎಂದು ಸಿಪಿಐ(ಎಂ) ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರಾದ ಕೆ.ವರದರಾಜನ್‌ರವರು ಹೇಳಿದರು.

ದಲಿತ ಪ್ರಶ್ನೆಗಳ ಕುರಿತು ಕೊಪ್ಪಳಜಿಲ್ಲೆ - ಗಂಗಾವತಿಯ ಸರೋಜಮ್ಮ ಕಲ್ಯಾಣ ಮಂಟಪದಲ್ಲಿ ಆಗಸ್ಟ್ 14 ರಂದು ಆರಂಭವಾದ ಸಿಪಿಐ(ಎಂ) ಪಕ್ಷದ ರಾಜ್ಯ ಮಟ್ಟದ ಅಧ್ಯಯನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.



ದೇಶದಲ್ಲಿ ಇಂದಿಗೂ ಶೇ.75 ರಷ್ಟು ದಲಿತರ ಬದುಕು ಭೂಮಿಯನ್ನೆ ಹೊಂದಿಕೊಂಡಿದೆ. ಅಂದರೆ ಕೃಷಿ ಕ್ಷೇತ್ರವನ್ನೇ ಅವಲಂಬಿಸಿದೆ. ಇವರಲ್ಲಿ ಶೇ.25 ರಷ್ಟು ಜನ ಮಾತ್ರ ಸಣ್ಣ ಮತ್ತು ಮಾಧ್ಯಮ ರೈತರಾಗಿದ್ದಾರೆ. ಶೇ.50ಕ್ಕೂ ಹೆಚ್ಚು ಜನರು ಭೂ ಹೀನ ಕೂಲಿಕಾರರಾಗಿದ್ದಾರೆ. ನಗರ ಪ್ರದೇಶಗಳಲ್ಲಿರುವ ದಲಿತರಲ್ಲಿ ಸಹ ಬಹಳಷ್ಟು ಜನ ಅಸಂಘಟಿತ ವಲಯದಲ್ಲಿದ್ದಾರೆ.

ದೇಶದ ಒಟ್ಟು 16.6 ಕೋಟಿ ದಲಿತರಲ್ಲಿ ಕೇವಲ 13 ಲಕ್ಷ ಜನ ಮಾತ್ರ ಸರ್ಕಾರಿ ನೌಕರರಾಗಿದ್ದಾರೆ. ಅಂದರೆ ಶೇ.1ರಷ್ಟು ಜನರು ಕೂಡ ಸರ್ಕಾರಿ ನೌಕರರಲ್ಲ. ಅದರಲ್ಲಿಯೂ ಕೂಡ ಎ ಮತ್ತು ಬಿ ಶ್ರೇಣಿಯ ನೌಕರರಾಗಿರುವವರು ದೇಶದಲ್ಲಿ ಕೇವಲ 52ಸಾವಿರ ಮಾತ್ರ. 13 ಲಕ್ಷ ಸರ್ಕಾರಿ ನೌಕರರಲ್ಲಿ 1.31 ಲಕ್ಷ ಜನ ಕಸ ತೆಗೆಯುವವರಾಗಿದ್ದಾರೆ.

ಮೀಸಲಾತಿ ಸಾಕು, ನಿಲ್ಲಿಸಬೇಕು.ಎನ್ನುವವರು ಈ ಅಂಶವನ್ನು ಗಮನಿಸಬೇಕು. ಮೀಸಲಾತಿ ಮುಂದುವರಿಯ ಬೇಕು. 'ಮೀಸಲಾತಿ' ಯಿಂದ ಮಾತ್ರವೇ ದಲಿತರ ಸ್ಥಿತಿ ಬದಲಾಗುವುದಿಲ್ಲ. ಭೂ ಹೀನರಿಗೆ ಭೂಮಿ ನೀಡುವ ಭೂ ಸುಧಾರಣೆಗಾಗಿ ಭೂ ಮಾಲೀಕತ್ವದ ವಿರುದ್ಧ ಹೋರಾಟ ಬೆಳೆದು ಬರಬೇಕು. ಭೂ ಸುಧಾರಣೆಯನ್ನು ಯಶಸ್ವಿಯಾಗಿ ಜಾರಿಗೆ ತಂದಿರುವ ಪಶ್ಚಿಮ ಬಂಗಾಳ, ಕೇರಳ, ತ್ರಿಪುರದಂತಹ ರಾಜ್ಯದಲ್ಲಿ ದಲಿತರ ಮೇಲಿನ ದೌರ್ಜನ್ಯಗಳ ಪ್ರಮಾಣ ತೀವ್ರವಾಗಿ ಕಡಿಮೆಯಾಗಿದೆ. ಜನ ಚಳುವಳಿ ಬಲವಾಗಿರುವ ಕಡೆಗಳಲ್ಲಿ ದೌರ್ಜನ್ಯಗಳು ನಡೆಯುವುದು ನಿಂತೇ ಹೋಗಿದೆ. ಯಾವುದೇ ಸಮಸ್ಯೆ ಬಂದರೂ ಅದು ಮೊದಲು ದಲಿತರನ್ನೇ ತಟ್ಟುತ್ತದೆ. ಉದಾರೀಕರಣ, ಖಾಸಗೀಕರಣದಿಂದ ಮೊದಲು ದಾಳಿಗೆ ತುತ್ತಾದವರು ದಲಿತರು.

ಇಂದಿಗೂ ದೇಶದಲ್ಲಿ ದಲಿತರಿಗೆ ಪ್ರತ್ಯೇಕ ಲೋಟಗಳನ್ನಿಡುವ ಅಸ್ಪೃಶ್ಯತೆ ಆಚರಣೆಯಲ್ಲಿದೆ. ಊರಿನ ರಸ್ತೆ ಬಳಸುವಂತಿಲ್ಲ. ಗೋಡೆಗಳನ್ನೇ ನಿಲ್ಲಿಸಿ ದಲಿತ ಕೇರಿ ಪ್ರತ್ಯೇಕಿಸುವುದಿದೆ. ತಮಿಳುನಾಡಿನ ಊತುಪುರಂನಲ್ಲಿ ಇಂತಹ ಗೋಡೆಯನ್ನು ಸಿಪಿಐ(ಎಂ)ನ ತೀವ್ರ ಹೋರಾಟದ ಕಾರಣದಿಂದ ಸರ್ಕಾರ ಒಡೆಯಿತು. ದಲಿತರು ಗಂಡು ನಾಯಿಯನ್ನು ಸಾಕಬಾರದೆಂಬ ನಿಷೇಧವೂ ಇರುವಂತಹ ಉದಾಹರಣೆ ಸಹ ಇದೆ. ದಲಿತರ ಮನೆಯ ಗಂಡು ನಾಯಿ, ಮೇಲ್ಜಾತಿಯ ಜನರ ಮನೆಯ ಹೆಣ್ಣು ನಾಯಿಯೊಂದಿಗೆ ಸೇರಿ ಮೇಲ್ಜಾತಿ ಜನರ ಸಂಸ್ಕೃತಿಯನ್ನು ಹಾಳು ಮಾಡುತ್ತವೆಂಬುದೇ ಇದಕ್ಕೆ ಕಾರಮ. ಸಿಪಿಐ(ಎಂ) ಪಕ್ಷ ಇದರ ವಿರುದ್ಧ ಆಂದೋಲನ ನಡೆಸಿತು. ಜನರಿಂದ ನಿಧಿ ಸಂಗ್ರಹಿಸಿ ಗಂಡು ನಾಯಿ ಖರೀದಿಸಿ ಮೆರವಣಿಗೆಯಲ್ಲಿ ತಂದು ದಲಿತ ಕುಟುಂಬಗಳಿಗೆ ಕೊಡಲಾಯಿತು ಎಂದು ವರದರಾಜನ್ ವಿವರಿಸಿದರು.

ಸಮಾರಂಭದ ಆರಂಭದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆಯವರು ಪ್ರಾಸ್ತಾವಿಕವಾಗಿ ಮಾತನಾಡಿ ದಲಿತರ ಬಟ್ಟೆ ಒಗೆಯಲು ಡೋಬಿಗಳು ಸಹ ಒಪ್ಪದ ಪರಿಸ್ಥಿತಿ, ದಲಿತರಿಗೆ ಮನೆ ಬಾಡಿಗೆಗೆ ಕೊಡಲು ಒಪ್ಪದ ಪರಿಸ್ಥಿತಿ ಇಂದಿಗೂ ನಮ್ಮಲ್ಲಿದೆ. ಕಳೆದ 10 ವರ್ಷಗಳಲ್ಲಿ ದಲಿತರ ಅಭಿವೃದ್ಧಿಗೆ ನೀಡಲಾಗಿದ್ದ ಬಜೆಟ್‌ನ ಶೇ.40 ರಷ್ಟು ಬಳಕೆಯೇ ಆಗಿಲ್ಲ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ದಲಿತರ ಮೇಲೆ ದೌರ್ಜನ್ಯ ಹೆಚ್ಚುತ್ತಿದೆ. ಆದರೆ ಆ ಬಗ್ಗೆ ಪೋಲೀಸ್ ಠಾಣೆಗಳಲ್ಲಿ ಪ್ರಕರಣಗಳೇ ದಾಖಲಾಗುತ್ತಿಲ್ಲ. ದಾಖಲು ಮಾಡಬಾರದೆಂದು ಸೂಚನೆಯನ್ನು ನೀಡಲಾಗಿದೆ. ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕುವ ಪಿಡುಗು ಸಹ ವ್ಯಾಪಕವಾಗಿದೆ. ಈ ಎಲ್ಲವುಗಳ ವಿರುದ್ಧ ಪ್ರಬಲ ಹೋರಾಟ ಬೆಳೆದು ಬರಬೇಕು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕರು ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಜಿ.ವಿ.ಶ್ರೀರಾಮರೆಡ್ಡಿ ಯವರು ಮಾತನಾಡಿ ಸಾಮಾಜಿಕ ಅಸಮಾನತೆಯ ಬೇರು ಅಸಮಾನ ಆರ್ಥಿಕ ವ್ಯವಸ್ಥೆಯಲ್ಲಿದೆ. ಸಾಮಾಜಿಕ ಅಸಮಾನತೆಯ ವಿರುದ್ಧ ಹಾಗೂ ಆರ್ಥಿಕ ಅಸಮಾನತೆಯ ವಿರುದ್ಧ ಎರಡರ ವಿರುದ್ಧವೂ ಹೋರಾಟ ನಡೆಯಬೇಕು. ಜಾತಿ ತಾರತಮ್ಯ, ಅಸ್ಪೃಶ್ಯತೆಯ ವಿರುದ್ಧದ ಹೋರಾಟ, ಹಾಗೂ ವರ್ಗ ಹೋರಾಟ ಒಂದಕ್ಕೊಂದು ವಿರುದ್ಧ ಅಲ್ಲ ಅವು ಒಂದಕ್ಕೊಂದು ಪೂರಕವಾಗಿರಬೇಕು. ಎಂದರು.


ಸಿಪಿಐ(ಎಂ) ಕೊಪ್ಪಳ ಜಿಲ್ಲಾ ಸಮಿತಿ ಸದಸ್ಯರಾದ ಹುಲಗಪ್ಪ ಸ್ವಾಗತಿಸಿದರು. ಜಿಲ್ಲಾ ಕಾರ್ಯದರ್ಶಿ ಆರ್.ಕೆ. ದೇಸಾಯಿ ವಂದಿಸಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ವೇದಿಕೆಯಲ್ಲಿದ್ದರು. ಹಲವು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ವೇದಿಕೆಯಲ್ಲಿದ್ದರೂ, 2 ದಿನಗಳ ಅಧ್ಯಯನ ಶಿಬಿರದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಬೀದರ್ ಬರದ ಬಾಧೆ...

ಪುಟ 10 ರಿಂದ

ಕಾಂ. ನೀಲಾ ಮಾತನಾಡುತ್ತ, "ರೈತರು ಆತ್ಮಹತ್ಯೆ ಮಾಡಿಕೊಂಡರು ಕುರುಡ ಕಿವುಡ ಮೂಕವಾಗಿದೆ ಈ ಸರಕಾರ. ಇದು ಜನದ್ರೋಹವಲ್ಲದೆ ಮತ್ತೇನು? ಆದರೆ ಎಚ್ಚೆತ್ತ ದುಡಿಯುವ ಜನ ಇಂದು ನದಿಗಳಾಗಿ ಹರಿದು ಬಂದಿದ್ದಾರೆ. ಕೆಂಬಾವುಟವು ಎತ್ತಿ ಹೋರಾಟಕ್ಕೆ ಸಜ್ಜಾಗಿದ್ದಾರೆ. ಇನ್ನು ಮುಂದಾದರೂ ಸರಕಾರ ಮತ್ತು ಸರಕಾರಿ ಯಂತ್ರ ಜನತೆಯ ನೆರವಿಗೆ ಬರದಿದ್ದರೆ ಸಾಗರವಾಗಿ ಧುಮ್ಮಿಕ್ಕುವ ದಿನಗಳು ಸರಕಾರ ಎದುರಿಸಬೇಕಾಗುತ್ತದೆ.ನಾಳೆಯಿಂದ ಎಲ್ಲ ಗ್ರಾಮಗಳಲ್ಲಿ ಕೆಲಸ ಕೇಳಿ ಬಂದ ಜನರಿಗೆ ಕೂಡಲೇ ಕೆಲಸ ಕೊಡಬೇಕು. ನಿರಾಕರಿಸಿದಲ್ಲಿ ಜನರ ತೀವ್ರ ಚಳುವಳಿಯನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಜನರ ಮೌನ ಮತ್ತು ಸಹನೆಗೂ ಒಂದು ಮಿತಿ ಇದೆ. ಗ್ರಾಮ ಪಂಚಾಯತ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಕಚೇರಿಗೆ ಬೀಗ ಜಡಿದು ಕೆಲಸ ಪಡೆಯುತ್ತೇವೆ." ಎಂದು ಹೇಳಿದರು.

ಪಕ್ಷದ ಜಿಲ್ಲಾ ಮುಖಂಡರಾದ ಕಾ.ಸಂಗಶೆಟ್ಟಿ ಪಾಟಿಲ ಇವರು, "ಸರ್ಕಾರಗಳು ಬರ ಬಿದ್ದಾಗಲೂ ಜನರೊಂದಿಗೆ ಚಲ್ಲಾಟವಾಡುತ್ತಿರುವುದನ್ನು ಸಹಿಸಲಾಗುವುದಿಲ್ಲ" ಎಂದರು. ಸಂಗಾತಿಗಳಾದ ವಿಜಯಕುಮಾರ ಸೋನಾರೆ, ದೇವಿದಾಸ್, ದಿನೇಶ, ಸ್ಯಾಮಸನ್, ಚಿನ್ನಮ್ಮ ಮಹಾದೇವಿ ಮುಂತಾದವರು "ನಾವು ಬೆವರನು ಸುರಿಸಿ ದುಡಿಯುವ ಜನ ನಮ ಬೆವರಿನ ಪಾಲನು ಕೇಳುವೆವು. ತುಂಡು ಭೂಮಿಯಲ್ಲ ಒಂದು ದೇಶವಲ್ಲ ಇಡೀ ಭೂಮಂಡಲವನೇ ಕೇಳುವೆವು" ಎಂಬ ಕ್ರಾಂತಿ ಗೀತೆಯ ಮೂಲಕ ಹೋರಾಟಕ್ಕೆ ಕ್ರಾಂತಿಕಾರಿ ಸಂಚಲನೆಯನ್ನು ತಂದುಕೊಟ್ಟರು. ಕಾಂ. ಶಿವರಾಜ ಪಾಟಿಲ ಕಾಂ. ಅಂಬುಬಾಯಿ ಕಾಂ. ದೇವಾನಂದ ಕಾಂ.ಸಿದ್ದಪ್ಪ ಕಾಂ. ಮೆಹತಾಬ್ ಕಾಂ. ವೀರಶೆಟ್ಟಿ ವಟ್ಟಾಂಬೆ, ಕಾಂ.ವಿಶ್ವನಾಥ ಉಪ್ಪೆ ಕಾಂ. ಮಾದಪ್ಪ ಕಾಂ. ಸಂಗ್ರಾಮ ಕಾಂ. ನ ಸಮ್ಮ ಕಾಂ. ಶಾಂತಮ್ಮ ಕಾಂ. ಕಲಾವತಿ ಕಾಂ. ಭಾರತಿ ಕಾಂ. ಆರ್ ಪಿ ರಾಜಾ ಮುಂತಾದವರು ಹೋರಾಟದ ನೇತೃತ್ವ ವಹಿಸಿದರು.




ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತುರ್ತು ಕ್ರಮವಹಿಸುವ ಭರವಸೆ ಕೊಟ್ಟ ಮೇಲೆ ಬೃಹತ್ ಮುತ್ತಿಗೆಯನ್ನು ವಾಪಾಸು ಪಡೆಯಲಾಯಿತು.

ಸಾವಿರಾರು ಕೆಂಬಾವುಟಗಳನ್ನು ಜನ ಹಣ ಕೊಟ್ಟು ಖರಿದಿ ಮಾಡಿದ್ದು ವಿಶೇಷವಾಗಿತ್ತು. ಸಾಗರದಂತೆ ನುಗ್ಗಿ ಬಂದ ಜನರು ಕೆಲಸಕ್ಕಾಗಿ ದಿಲ್ಲಿವರೆಗೆ ಹೋರಾಡುತ್ತೇವೆ ಎಂದು ಬಾವುಟ ಎತ್ತಿ ಘೋಷಿಸಿದರು. ಹೋರಾಟದ ಕೆಚ್ಚು ಮತ್ತು ರೊಚ್ಚಿಗೆ ಅಧಿಕಾರಿಗಳು ತಲ್ಲಣಿಸಬೇಕಾಯ್ತು. ಸಭೆಯ ನಡುವಲ್ಲಿ ಹದಿನೈದು ನಿಮಿಷ ಆದೆಲ್ಲಿಂದ ಮೋಡ ಆವರಿಸಿತೋಡ ನೋಡ ನೋಡುತ್ತಲೇ ಧೋ ಎಂದ ಸುರಿಯತೊಡಗಿತು. ಹೋರಾಟಗಾರರು ಮತ್ತಷ್ಟು ಉತ್ತೇಜಿತರಾದರು. ಮ ಯಲ್ಲಿಯೇ ಕೆಂಬಾವುಟ ಎತ್ತಿ ಘೋಷಣ ಮೊಳಗಿಸಿದರು. ಜಿಲ್ಲಾಧಿಕಾರಿ ಕಚೇರಿಯ ಗೇಟು ಮುಚ್ಚಿದಾಗ ಜನರು ನುಗ್ಗಿ ತೆರೆದರು ಒಳನುಗ್ಗಿದರು. ನಾವೇ ಕಟ್ಟಿದ ಬಂಗಲೆಯಲ್ಲಿ ನಮಗೆ ಜಾಗ ಇಲ್ಲವೇ? ಎಂದು ಪ್ರಶ್ನಿಸಿದರು. ದುಡಿಯುವ ಜನ ಹೋರಾಟದ ಕಾವಿಗೆ ಪೋಲೀಸರ ಲಾಠಿಯು ಚಲಿಸದಾಯಿತು. ಮಳೆಯಲ್ಲಿ ಬೃಂದಾ ಸಹ ನೆನೆದರು ಅರ್ಧ ಗಂಟೆ ಜಿಲ್ಲಾಧಿಕಾರಿಗಳು ಸಭೆ ನಡೆಸಿ ತಕ್ಷಣ ಸಮಸ್ಯೆ ಬಗೆ ಹರಿಸುವ ಭರವಸೆ ಕೊಟ್ಟರು.

ಬರದ ನಡುವೆ ಬೆಲೆಯೇರಿಕೆ ಬರೆ

ಯುಪಿಎ ದರ್ಬಾರ್ II ನಲ್ಲಿ



ಕೇಂದ್ರ ಸಂಪುಟ ವೈಮಾನಿಕ ಇಂಧನದ ಮೇಲಿನ ತೆರಿಗೆಗಳ ಬಗ್ಗೆ ಪರಾಮರ್ಶಿಸಲು ಆಗಸ್ಟ್ 13ರಂದು ಒಂದು ಮಂತ್ರಿಗಳ ಗುಂಪನ್ನು ರಚಿಸಿದೆ. ಎರಡು ವಾರಗಳ ಹಿಂದೆ ಜುಲೈ 21ರಂದು ಸಂಸತ್ತಿನಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಗಳನ್ನು ಕಡಿತ ಮಾಡಿ ಬೆಲೆಯೇರಿಕೆಗಳಿಂದ ತತ್ತರಿಸುತ್ತಿರುವ ಜನಗಳಿಗೆ ತುಸುವಾದರೂ ಪರಿಹಾರ ಕೊಡಿ ಎಂದು ಜನತೆಯ ಪ್ರತಿನಿಧಿಗಳು ಕೇಳಿದಾಗ ಇದೇ ಸರಕಾರ ಒಪ್ಪಿರಲಿಲ್ಲ. ರಸ್ತೆಗಳಲ್ಲಿ ಸಂಚರಿಸಬೇಕಾದ ಜನಸಾಮಾನ್ಯರ ಬಗ್ಗೆ ಇಲ್ಲದ ಕಾಳಜಿ ಆಕಾಶದಲ್ಲಿ ಹಾರಾಡುತ್ತಿರುವವರ ಬಗ್ಗೆ ಮಾತ್ರ ಏಕೆ? ಕೆಲವು ಖಾಸಗಿ ವಿಮಾನಯಾನ ಕಂಪನಿಗಳ ಮಾಲಕರ ಬೆದರಿಕೆಗೆ ಸರಕಾರ ತಲೆಬಾಗುತ್ತಿದೆ ಎಂಬ ಸಂದೇಶ ಕೊಟ್ಟಂತಾಗುವುದಿಲ್ಲವೇ ಎಂದು ಸಿಐಟಿಯು ಕಾರ್ಯದರ್ಶಿ ದೀಪಂಕರ್ ಮುಖರ್ಜಿ ಪ್ರಧಾನ ಮಂತ್ರಿಗಳಿಗೆ ಈ ಕುರಿತು ಬರೆದ ಪತ್ರದಲ್ಲಿ ಪ್ರಶ್ನಿಸಿದ್ದಾರೆ.

■ ■ ■

ಬಿಕ್ಕಟ್ಟು ಮುಗಿದಿದೆಯೇ?

ಇದು ಈಗ ಮತ್ತೆ-ಮತ್ತೆ ಕೇಳಲಾಗುವ ಪ್ರಶ್ನೆ. ಅತೀ ಕೆಟ್ಟ ಸಮಯವನ್ನು ಈಗ ದಾಟಿ ಬಂದಿದ್ದೇವೆ ಎಂದು ಯೋಜನಾ ಆಯೋಗದ ಉಪಾಧ್ಯಕ್ಷ ಅಹ್ಲುವಾಲಿಯಾ ಹೇಳುತ್ತಾರೆ. ಐಎಂಎಫ್ ಮುಖ್ಯಸ್ಥರೂ ಅದನ್ನೇ ಹೇಳಿದ್ದಾರೆ. ಆದರೆ ನಮ್ಮಲ್ಲಿ ಕೆಟ್ಟ ಸಮಯ ಶುರುವಾದದ್ದಾದರೂ ಯಾವಾಗ ಎಂದು ಅವರು ಹೇಳಿರಲೇ ಇಲ್ಲವಲ್ಲ. ಅಲ್ಲದೆ ಪ್ರಧಾನ ಮಂತ್ರಿಗಳು, ಆಹಾರ ಮಂತ್ರಿಗಳು ಬೇರೆಯೇ ಹೇಳುತ್ತಿದ್ದಾರಲ್ಲಾ? ಬರದಿಂದಾಗಿ ಆಹಾರ ಉತ್ಪಾದನೆ ಕಡಿಮೆಯಾಗಲಿದೆ, ಅದರಿಂದ ಕಷ್ಟಗಳು ಹೆಚ್ಚಲಿವೆ ಎಂದು ಅವರು ಎಚ್ಚರಿಸುತ್ತಿದ್ದಾರಲ್ಲಾ! ಆಹಾರ ಮಂತ್ರಿಗಳು ಈ ವರ್ಷ ಭತ್ತದ ಉತ್ಪಾದನೆ 1ಕೋಟಿ ಟನ್ ಗಳಷ್ಟು ಕಡಿಮೆಯಾಗಬಹುದು ಎಂದಿದ್ದಾರೆ. ಅಹ್ಲುವಾಲಿಯಾರವರ ಪ್ರಿಯ ಶೇರು ಸೂಚ್ಯಂಕ ಈ ಸುದ್ದಿಯಿಂದಲೇ ಗಮನಾರ್ಹವಾಗಿ (ಆಗಸ್ಟ್ 19 ರಂದು 226 ಪಯಿಂಟುಗಳಷ್ಟು) ಇಳಿದಿದೆ ಎನ್ನಲಾಗಿದೆ.

■ ■ ■

246 ಜಿಲ್ಲೆಗಳಲ್ಲಿ ಬರ ಪರಿಸ್ಥಿತಿ!

ದೇಶದಲ್ಲಿ ಹತ್ತು ರಾಜ್ಯಗಳು ಬರ ಪರಿಸ್ಥಿತಿ ಘೋಷಿಸಿದ್ದು ಒಟ್ಟು 246 ಜಿಲ್ಲೆಗಳಲ್ಲಿ ಬರ ಪರಿಸ್ಥಿತಿ ಇದೆ ಎಂದು ಹೇಳಲಾಗಿದೆ. ಅಂದರೆ ಸುಮಾರು ಅರ್ಧದಷ್ಟು (ಸುಮಾರು 47ಶೇ.) ದೇಶ ಬರ ಪೀಡಿತವಾಗಿದೆ.

ಪ್ರಧಾನ ಮಂತ್ರಿಗಳ ಕೆಂಪುಕೋಟೆ ಭಾಷಣದಲ್ಲೂ ಇದರ ಪ್ರಸ್ತಾಪ ಬಂದಿದೆ. ಬರ ಪರಿಸ್ಥಿತಿ ಆರ್ಥಿಕತೆಯನ್ನು ತಟ್ಟಬಹುದು, ಆದರೆ ಯಾರೂ ಹಸಿವಿನಿಂದ ಸಾಯಲು ಬಿಡುವುದಿಲ್ಲ ಎಂದು ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಹೀಗೆ ಹೇಳುತ್ತಿರುವಾಗಲೇ ಆಂಧ್ರಪ್ರದೇಶದಲ್ಲಿ ಕಳೆದ 40 ದಿನಗಳಲ್ಲಿ 20 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಅಲ್ಲಿನ ಕಾಂಗ್ರೆಸ್ ಸರಕಾರವೇ ಒಪ್ಪಿಕೊಂಡಿದೆ. ಬರ ಈ ಸಾವುಗಳಿಗೆ ಕಾರಣ ಎಂದು ಹೇಳಲಾಗುತ್ತಿದೆ, ಆದರೆ ಇದು ಖಚಿತಗೊಂಡಿಲ್ಲ ಎನ್ನುತ್ತಿದೆ ಸರಕಾರ.

■ ■ ■

ಇದೆಂತಾ ಮನೋಭಾವ?

ಬರ ಪರಿಸ್ಥಿತಿಯಿಂದ ದೇಶದ ಜಿಡಿಪಿಯ ಮೇಲೇನೂ ಪರಿಣಾಮ ಬೀರುವುದಿಲ್ಲ, ಏಕೆಂದರೆ ಬರಪೀಡಿತ ಪ್ರದೇಶಗಳ ರೈತರಿಂದ ಜಿಡಿಪಿಗೆ ಬರಬಹುದಾದ ಕೊಡುಗೆ 3ಶೇ. ಮಾತ್ರ ಎಂದು ಕೆಲವು ಹಣಕಾಸು ಪತ್ರಿಕೆಗಳು ವಿಶ್ಲೇಷಿಸಿವೆಯಂತೆ. ಅಂದರೆ ಈ ಬಗ್ಗೆ ಸರಕಾರ ಬಹಳೇನೂ ತಲೆಕೆಡಿಸಿಕೊಳ್ಳಬೇಕಾಗಿಲ್ಲ ಎಂಬುದು ಅವರ ಸೂಚನೆ. ಇಂತಹ ಮನೋಭಾವನೆಯಿಂದಲೇ ನಮ್ಮ ದೇಶ ಜಗತ್ತಿನಲ್ಲೇ ಅತಿ ಹೆಚ್ಚು ಬಡವರಿರುವ, ಪೋಷಕ ಆಹಾರದ ಕೊರತೆಯಿಂದ ನರಳುವ ಜನರಿರುವ ದೇಶವಾಗಿದೆ ಎಂದು ಪ್ರಖ್ಯಾತ ಕೃಷಿ ತಜ್ಞ ಡಾ. ಎಂ.ಎಸ್. ಸ್ವಾಮಿನಾಥನ್ ನೋವಿನಿಂದ ಹೇಳಿದ್ದಾರೆ. ಹೀಗಾದರೆ ಹಸಿವು ಮತ್ತು ಬಡತನವನ್ನು 2015ರೊಳಗೆ ಅರ್ಧದಷ್ಟು ಇಳಿಸಬೇಕು ಎಂಬ ವಿಶ್ವಸಂಸ್ಥೆಯ ಶತಮಾನದ ಗುರಿಗಳ ಮೊದಲ ಅಂಶವೇ ಸಾಧನೆಯಾಗಲಿಕ್ಕಿಲ್ಲ ಎಂದು ಅವರು ಹೇಳುತ್ತಾರೆ. ಕೃಷಿಯೆಂದರೆ ಕೇವಲ ಆಹಾರ ಉತ್ಪಾದಿಸುವ ಯಂತ್ರವಲ್ಲ, ಅದು 60 ಶೇಕಡಾಕ್ಕೂ ಹೆಚ್ಚು ದೇಶವಾಸಿಗಳ ಜೀವನಾಧಾರ ಎಂದು ಅವರು ನೆನಪಿಸುತ್ತಾರೆ.

■ ■ ■

ಮತ್ತಷ್ಟು ಬೆಲೆಯೇರಿಕೆಯ ಬೆದರಿಕೆ

ಬರದಿಂದಾಗಿ ಬೆಲೆಗಳು ಮತ್ತಷ್ಟು ಏರಬಹುದು ಎಂದು ಈಗ ಪ್ರಧಾನಮಂತ್ರಿಗಳು, ಆಹಾರ ಮಂತ್ರಿಗಳಾದಿಯಾಗಿ ಎಲ್ಲರೂ ಹೆದರಿಸಲಾರಂಭಿಸಿದ್ದಾರೆ. ಆದರೆ ಇದೊಂದು ವಂಚನೆ ಎನ್ನುತ್ತಾರೆ ಪ್ರಖ್ಯಾತ ಪತ್ರಕರ್ತ ಪಿ. ಸಾಯಿನಾಥ್. ಏಕೆಂದರೆ ಕಳೆದ ಐದು ವರ್ಷಗಳಲ್ಲಿ ಬರ ಪರಿಸ್ಥಿತಿ ಇರಲಿಲ್ಲ. ಕಳೆದ ವರ್ಷವಂತೂ ಬಂಪರ್ ಆಹಾರ ಉತ್ಪಾದನೆ ಆಯ್ತು ಎಂದು ಸರಕಾರವೇ ಬೆನ್ನು ತಟ್ಟಿಕೊಂಡಿದೆ. ಆದರೆ 2004 ರಿಂದ 2008ರ ನಡುವೆಯೇ ಆಹಾರ ಸಾಮಗ್ರಿಗಳ ಬೆಲೆಗಳು ಸರಾಸರಿಯಾಗಿ 40 ಶೇ. ಹೆಚ್ಚಿದವು. ಕಳೆದ ಒಂದು ವರ್ಷದಲ್ಲಿ, ಅದರಲ್ಲೂ ಕಳೆದ ಮೂರು ತಿಂಗಳಲ್ಲಿ ಮತ್ತಷ್ಟು ಬೆಲೆಯೇರಿಕೆಯಾಗಿದೆ. ಇಷ್ಟೊಂದು ಬೆಲೆಯೇರಿಕೆಗೆ ಏನು ಕಾರಣ ಎಂದು ನಮ್ಮ ಆಹಾರ ಮಂತ್ರಿಗಳಿಗೂ ಗೊತ್ತಾಗುತ್ತಿಲ್ಲವಂತೆ. ಕಳ್ಳ ದಾಸ್ತಾನು, ಕಾಳಸಂತೆಗಳೇ ಕಾರಣವಿರಬಹುದು ಎನ್ನುತ್ತಾರೆ. ಇರಬಹುದು. ಆದರೆ ಇನ್ನೊಂದು ಕಾರಣದ ಬಗ್ಗೆ ಎಲ್ಲರೂ ಮೌನವಾಗಿದ್ದಾರೆ ಎನ್ನುತ್ತಾರೆ ಸಾಯಿನಾಥ್. ಅದೆಂದರೆ ಆಹಾರ ಸರಕುಗಳಲ್ಲಿ ವಾಯಿದಾ ವ್ಯವಹಾರ ಅಂದರೆ ಸಟ್ಟಾಕೋರತನ. ಅದನ್ನು ಕೊನೆಗೊಳಿಸಿ ಎಂದರೆ ಸರಕಾರದ್ದು ದಿವ್ಯಮೌನ!?

■ ■ ■

ನ್ಯಾಯಕ್ಕೆ ಬರ!

ವಾಸ್ತವವಾಗಿ ನ್ಯಾಯಕ್ಕೆ ಬರ ಬಂದಿದೆ ಎನ್ನುತ್ತಾರೆ ಪಿ. ಸಾಯಿನಾಥ್. ಅತ್ತ ರೇಗಾಕ್ಕೆ, ಪಡಿತರವನ್ನು ಸಾರ್ವತ್ರಿಕಗೊಳಿಸಲಿಕ್ಕೆ, ಆರೋಗ್ಯಕ್ಕೆ , ಶಿಕ್ಷಣಕ್ಕೆ ಸರಕಾರದ ಬಳಿ ಹಣವಿಲ್ಲ. ಆದರೆ ಕಾರ್ಪೊರೇಟ್ ಜಗತ್ತಿಗೆ ಮಾತ್ರ ರಿಯಾಯ್ತಿಗಳ ಮಹಾಪೂರ ಹರಿಸಲು ಹಣದ ಬರವಿಲ್ಲ ಎನ್ನುತ್ತಾರೆ ಅವರು. 2008-09ರ ಬಜೆಟಿನಲ್ಲಿ ದೊಡ್ಡ ಕಂಪನಿಗಳಿಗೆ ನೀಡಿದ ರಿಯಾಯ್ತಿಗಳಿಂದ ಸರಕಾರದ ಬೊಕ್ಕಸಕ್ಕೆ ಆದ ಕಡಿತ ರೂ.68914 ಕೋಟಿ. 2009-1 ರ ಬಜೆಟಿನಲ್ಲಿ ಕೋಟ್ಯಂತರ ಬಡ ಗ್ರಾಮೀಣ ಜನರಿಗೆ ಬೇಕಾದ ರೇಗಾಕ್ಕೆ ನಿಗದಿಯಾಗಿರುವ ಹಣ ರೂ.39100/- ಕೋಟಿ ಎಂಬ ಸಂಗತಿಯತ್ತ ಅವರು ಗಮನ ಸೆಳೆಯುತ್ತಾರೆ.

ಹಗರಣವೇ ಅಲಂಕಾರ



ಬಿಜೆಪಿ ದರ್ಬಾರ್‌ನಲ್ಲಿ

ರಾಜ್ಯದಲ್ಲಿರುವುದು ಬಿಜೆಪಿ ಸರ್ಕಾರ. ಹಗರಣಗಳೇ ಈ ಸರ್ಕಾರದ ಅಲಂಕಾರ. ಕೋಮುಗಲಭೆ, ಭ್ರಷ್ಟಾಚಾರ ಇವೆರಡೂ ಸರ್ಕಾರವೆಂಬ ರಥದ ಎರಡು ಚಕ್ರಗಳಿದ್ದಂತೆ. ಹಗರಣಗಳ ಕಳಂಕವೇ ಸಂಪುಟದ ಬಹುತೇಕ ಸಚಿವರುಗಳು 'ಶೃಂಗಾರ'. ಈ ಪಟ್ಟಿಗೆ ಇದೀಗ ಸೇರ್ಪಡೆ ಸಮಾಜ ಕಲ್ಯಾಣ ಸಚಿವ ಡಿ.ಸುಧಾಕರ್.

ಹೆಚ್‌ಎಎಲ್ ನೌಕರರು, ಬಿಎಂಟಿಸಿ ನೌಕರರು ಇವರು ಅಂತ ನಕಲಿ ದಾಖಲೆ ಸೃಷ್ಟಿಸಿ ಬ್ಯಾಂಕಿಗೆ ಒದಗಿಸಿ, 5.5. ಕೋಟಿ ಸಾಲ ಎತ್ತಿ ಬ್ಯಾಂಕಿಗೆ ವಂಚಿಸಿದ ಆರೋಪದ ಮೇಲೆ ಸಿಬಿಐ ಈಗ ಈ ಬಿಜೆಪಿ ಸಚಿವರ ವಿರುದ್ಧ ಆರೋಪಪಟ್ಟಿ ಸಲ್ಲಿಸಿದೆ. 5.5 ಕೋಟಿ ರೂಪಾಯಿ ಬ್ಯಾಂಕ್‌ಗೆ ಈಗಾಗಲೇ 'ನಾಮ' ಆಗಿದೆ. ನಿವೇಶನ ಖರೀದಿ ಸಂಬಂಧ ಇಂತಹ ನಕಲಿ ದಾಖಲೆ ಸೃಷ್ಟಿಸಿ ಪೂರೈಸಲಾಗಿದೆಯಂತೆ.

ಏನೇ ವಿಚಾರಣೆ ನಡೆಯಲಿ, ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡುವುದಿಲ್ಲ ಅಂದಿದ್ದಾರೆ ಘನ ಸಚಿವರು. ಆಹಾ ಏನು ನೈತಿಕತೆ!!

ಇದು ಶುದ್ಧ ನಟನೆ ಅಲ್ಲವೇ?

ಹಾವೇರಿ ಗೋಲಿಬಾರ್ ಬಗ್ಗೆ ಯಾರಿಗೂ ಹೆಚ್ಚು ವಿವರಿಸಬೇಕಿಲ್ಲ. ಗೊಬ್ಬರ ಕೇಳಿದ ರೈತರ ಎದೆಗೆ ಗುಂಡು ಹಾರಿಸಿ ಕೊಂದದ್ದು, ಆದಾದ ಮೇಲೆ ಯಡಿಯೂರಪ್ಪನವರು ಸಿದ್ದಪ್ಪ ಚೂರಿಯವರ ಮನೆಗೆ ಬಂದು 'ಇನ್ನೆಂದೂ ರೈತರ ಮೇಲೆ ಗುಂಡು ಹಾರಿಸುವುದಿಲ್ಲ' ಎಂದು ಕಣ್ಣೀರಧಾರೆ ಹರಿಸಿದ್ದು, ಯಾವುದನ್ನು ಜನ ಮರೆತಿಲ್ಲ. ಗೋಲಿಬಾರ್ ಘಟನೆಯ ಬಗೆಗೆ ಈಗ ವಿಚಾರಣೆ ನಡೆಯುತ್ತಿದೆ. ರಾಜ್ಯ ಬಿಜೆಪಿ ಸರ್ಕಾರದ ಕೃಷಿ ಸಚಿವ ಎಸ್.ಎ.ರವೀಂದ್ರನಾಥ್ ಕೆದಂಬಾಡಿ ಜಗನ್ನಾಥಶೆಟ್ಟಿ ಆಯೋಗ ಮುಂದೆ 'ಗೋಲಿಬಾರ್‌ನಲ್ಲಿ ಸತ್ತವರು ರೈತರೇ ಅಲ್ಲ' ಅಂತ ಸಾಕ್ಷ್ಯ ನುಡಿದಿದ್ದಾರೆ. 'ಹಾವೇರಿ ಗೋಲಿಬಾರ್‌ನಲ್ಲಿ ಮೃತಪಟ್ಟ ಇಬ್ಬರ ಬಳಿಯೂ ಕೃಷಿಭೂಮಿ ಇದೆ. ಆದರೆ ಅವರು ರೈತರಲ್ಲ' ಎಂದಿದ್ದಾರೆ ಘನಸಚಿವರು. ಮುಖ್ಯಮಂತ್ರಿಯಾದರೂ ಅದನ್ನೇ ಹೇಳುವವರು. ಹಾಗಿದ್ದರೆ ಸಿದ್ದಪ್ಪ ಮನೆಯಲ್ಲಿ ಕಣ್ಣೀರಿಟ್ಟು ಗೋಳುಗರೆದದ್ದು ನಾಟಕ ಅಂತಲ್ಲವೇ? ನಟನೆ ಅಂತಲ್ಲವಾದರೆ ಕೃಷಿ ಸಚಿವರನ್ನು ಯಡಿಯೂರಪ್ಪ ವಜಾ ಮಾಡುವರೇ?

ಸಿ.ಎಂ. ಗೆ ಚುನಾವಣಾ ಆಯೋಗದ ಛೀಮಾರಿ

ವಿಧಾನಸಭಾ ಉಪಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ಕೊಳ್ಳೇಗಾಲ ಕ್ಷೇತ್ರದಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಜನತೆಗೆ ಏನೇನೋ ಭರವಸೆ ಕೊಟ್ಟುಬಿಟ್ಟರು. ಭರವಸೆ ಅಂದರೆ ಹೊಸ ಹೊಸ ಭರವಸೆ. ಚುನಾವಣೆ ಆಯೋಗದ ನೀತಿ ಸಂಹಿತೆಯೆಲ್ಲಾ ಗಾಳಿ ಪಾಲು. ಆಯೋಗ ನೋಟೀಸ್ ನೀಡಿತು. ಮುಖ್ಯಮಂತ್ರಿಗಳು ಲಿಖಿತ ಉತ್ತರ ಕೊಟ್ಟರು. ಈಗಾಗಲೇ ನಿರ್ಧರಿಸಲಾಗಿದ್ದ ಯೋಜನೆಗಳನ್ನೇ ನಾನು ಪುನರುಚ್ಚರಿಸಿದ್ದೇನೆ. ನೀತಿ ಸಂಹಿತೆ ಉಲ್ಲಂಘನೆ ಆಗಿಲ್ಲ ಅಂತ.ಆಯೋಗ ವಿಚಾರ ಪರಿಶೀಲಿಸಿತು. ಇಲ್ಲ. ಆ ಯೋಜನೆಗಳು ಮೊದಲೇ ನಿರ್ಧರಿಸಿದ್ದಲ್ಲ. ಹೊಚ್ಚ ಹೊಸ ಭರವಸೆಗಳು, ಸರಿ ಕೊನೆಗೆ ರಾಜ್ಯದ ಘನ ಮುಖ್ಯಮಂತ್ರಿಗಳಿಗೆ ಚುನಾವಣಾ ಆಯೋಗ.ನೀತಿ ಸಂಹಿತೆಯ ಉಲ್ಲಂಘನೆಗಾಗಿ ಛೀಮಾರಿ ಹಾಕಿದೆ. ಯಾರು ಛೀಮಾರಿ ಹಾಕಿದರೇನಾಯ್ತು! ಹೇಗಾದರೂ ಸರಿ ಗೆಲ್ಲುವುದು ಮುಖ್ಯ ಅಲ್ಲವೇ?

'ಸೆಪ್ಟೆಂಬರ್ ಚಳುವಳಿಯನ್ನು ಯಶಸ್ವಿಗೊಳಿಸಿ'

ವಿ.ಜೆ.ಕೆ.ನಾಯರ್

ಅಸಂಘಟಿತ ಕಾರ್ಮಿಕರ ಕನಿಷ್ಠ ವೇತನವನ್ನು ರೂ.6000ಕ್ಕೆ ಹೆಚ್ಚಿಸಬೇಕೆಂದು ಹಾಗೂ ಇತರ ಬೇಡಿಕೆಗಳಿಗೆ ಒತ್ತಾಯಿಸಿ ಸಿಐಟಿಯು ನೇತೃತ್ವದಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ನಡೆಯುವ ಚಳುವಳಿಯನ್ನು ಸಂಪೂರ್ಣ ಯಶಸ್ವಿಗೊಳಿಸಿ ಎಂದು ಸಿಐಟಿಯು ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಅಖಿಲ ಭಾರತ ಉಪಾಧ್ಯಕ್ಷರಾದ ವಿ.ಜೆ.ಕೆ.ನಾಯರ್‌ರವರು ಗ್ರಾಮಪಂಚಾಯಿತಿ ನೌಕರರಿಗೆ ಕರೆ ನೀಡಿದರು. ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ 5ನೇ ರಾಜ್ಯ ಸಮ್ಮೇಳನದ ಅಂಗವಾಗಿ ಆಗಸ್ಟ್ 7 ರಂದು ಗುಲ್ಬರ್ಗಾದ ಸೂಪರ್ ಬಜಾರ್‌ನಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಕರ್ನಾಟಕ ರಾಜ್ಯದಲ್ಲಿ ಗ್ರಾಮ ಪಂಚಾಯಿತಿ ನೌಕರರು ಸಿಐಟಿಯುನ ಪ್ರಮುಖ ಭಾಗವಾಗಿದ್ದಾರೆ. ರಾಜ್ಯದ ಗ್ರಾಮೀಣ ಪ್ರದೇಶದಲ್ಲಿರುವ ಪಂಚಾಯಿತಿ ನೌಕರರು ಸರ್ಕಾರದ ಧೋರಣೆಗಳ ವಿರುದ್ಧ ಜನರನ್ನು ಜಾಗೃತಿಗೊಳಿಸುವುದರಲ್ಲಿ ಪ್ರಮುಖ ಪಾತ್ರವಹಿಸಬೇಕು ಎಂದು ಹೇಳಿದರು.

ದಿನೇ ದಿನೇ ಬೆಲೆಗಳು ಹೆಚ್ಚುತ್ತಿವೆ. ಹಿಂದಿನ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಜಾರಿಗೆ ತಂದ ಮುಂಗಡ ವ್ಯಾಪಾರ ಪದ್ಧತಿಯನ್ನು ಇಂದಿನ ಕಾಂಗ್ರೆಸ್ ಸರ್ಕಾರವೂ ಮುಂದುವರಿಸುತ್ತಿದ್ದು, ಇದರಿಂದ ಬೇಳೆಕಾಳುಗಳು ವಿದೇಶಕ್ಕೆ ರಫ್ತು ಆಗುತ್ತಿದ್ದು, ದೊಡ್ಡ ದೊಡ್ಡ ವ್ಯಾಪಾರಿಗಳು ದಾಸ್ತಾನು ಮಾಡಿ ಹಣ ಗಳಿಸುತ್ತಿದ್ದಾರೆ. ರೈತರಿಗೂ ಸೂಕ್ತವಾದ ಬೆಲೆ ಸಿಗದೆ, ಗ್ರಾಹಕರೂ ಹೆಚ್ಚಿಗೆ ದರ ನೀಡಬೇಕಾದ ಪರಿಸ್ಥಿತಿ ಬಂದೊದಗಿದೆ. ಇಂತಹ ಸಂದರ್ಭದಲ್ಲಿ ಅಸಂಘಟಿತ ಕಾರ್ಮಿಕರ ಕನಿಷ್ಠ ವೇತನವನ್ನು ಕುಶಲರಲ್ಲದ ಕಾರ್ಮಿಕರಿಗೆ ಕನಿಷ್ಠ ರೂ.6,000ಕ್ಕೆ ಹೆಚ್ಚಿಸಬೇಕೆಂದು ಒತ್ತಾಯಿಸಿದರು. ಅಂತೆಯೇ ಅರೆ ಕುಶಲ ಕಾರ್ಮಿಕರಿಗೆ ರೂ.6,900 ಕುಶಲ ಕಾರ್ಮಿಕರಿಗೆ ರೂ.9,000 ನೀಡಬೇಕು ಎಂಬುದು ಸಿಐಟಿಯು ಬೇಡಿಕೆಯಾಗಿದೆ. ಬೆಂಗಳೂರು ನಗರ ಪ್ರದೇಶದಲ್ಲಿ ಮನೆ ಬಾಡಿಗೆ ಮತ್ತಿತರ ವಸ್ತುಗಳ ಬೆಲೆ ಹೆಚ್ಚಾಗಿರುವುದರಿಂದ ಕನಿಷ್ಠ ವೇತನ ರೂ.6000 ಬದಲಿಗೆ ರೂ.10,000 ನೀಡಬೇಕು ಎಂದು ಅವರು ಒತ್ತಾಯಿಸಿದರು.



ಕೇಂದ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಸರ್ಕಾರಗಳು ಜಾರಿಗೆ ತಂದ ಉದಾರೀಕರಣ ನೀತಿಗಳಿಂದಾಗಿ ಕೆಲವೇ ಕೆಲವು ಶ್ರೀಮಂತರು ಅತಿ ಶ್ರೀಮಂತರಾಗುತ್ತಿದ್ದಾರೆ. ಕೇವಲ 10 ಖಾಸಗಿ ಕಾರ್ಪೋರೇಟ್ ಕಂಪನಿಗಳ ಆಸ್ತಿ 5 ವರ್ಷದ ಹಿಂದೆ 3,54,000 ಕೋಟಿ ರೂ. ಇದ್ದದ್ದು ಇಂದು 10 ಲಕ್ಷ ಕೋಟಿ ರೂ. ಗಳಿಗಿಂತಲೂ ಹೆಚ್ಚಾಗಿದೆ. ಆದರೆ ಗ್ರಾಮ ಪಂಚಾಯತ್ ನೌಕರರು ತಿಂಗಳುಗಟ್ಟಲೆ ವೇತನವಿಲ್ಲದೆ ಉಪವಾಸ ಬೀಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಗ್ರಾಮ ಪಂಚಾಯತ್ ನೌಕರರು ಇತರ ನೌಕರ ವಿಭಾಗದೊಂದಿಗೆ ಸೇರಿ ಸರ್ಕಾರದ ನೀತಿಗಳ ವಿರುದ್ಧ ಐಕ್ಯ ಹೋರಾಟಕ್ಕೆ ಮುಂದಾಗಬೇಕೆಂದು ವಿಜೆಕೆ ನಾಯರ್ ಕರೆ ನೀಡಿದರು.

ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತ್ ನೌಕರರ 5ನೇ ರಾಜ್ಯ



ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಗ್ರಾಮ ಪಂಚಾಯಿತಿ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಮಾತನಾಡಿ 20 ವರ್ಷಗಳ ದೀರ್ಘ ಹೋರಾಟದ ಫಲವಾಗಿ ಕನಿಷ್ಠ ವೇತನ ಮತ್ತು ತುಟ್ಟಿಭತ್ಯೆ ನಿಗದಿಪಡಿಸಲು ಸಾಧ್ಯವಾಗಿದೆ. ಆದರೆ, ಮಂತ್ರಿಗಳ ಮನೆ ರಿಪೇರಿಗಾಗಿ ಲಕ್ಷಗಟ್ಟಲೆ ಹಣ ಖರ್ಚು ಮಾಡುವ ಬಿಜೆಪಿ ಸರ್ಕಾರ ನೌಕರರಿಗೆ ನಿಗದಿತ ವೇತನ ನೀಡಲು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಟೀಕಿಸಿದರು. ಎಡಪಕ್ಷಗಳ ಆಡಳಿತವಿರುವ ಕೇರಳ ಮತ್ತು ಪಶ್ಚಿಮಬಂಗಾಳಗಳಲ್ಲಿ ನೌಕರರ ಪರಿಸ್ಥಿತಿ ಉತ್ತಮವಾಗಿದೆ. ನಮ್ಮ ಸಂಘವು 3ನೇ ರಾಜ್ಯ ಹಣಕಾಸು ಆಯೋಗಕ್ಕೆ ಸಲ್ಲಿಸಿದ ಮನವಿಯ ಆಧಾರದಲ್ಲಿ ಪ್ರತ್ಯೇಕ ವೇತನ ನಿಧಿ ರಚಿಸಬೇಕೆಂದು ಹೇಳಿ 6 ತಿಂಗಳು ಕಳೆದರೂ ಇನ್ನೂ ಜಾರಿ ಮಾಡಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಪಂಚಾಯಿತಿಗಳಿಗೆ ನೀಡುತ್ತಿರುವ ಅನುದಾನವನ್ನು 6 ಲಕ್ಷ ರೂ.ಗಳಿಂದ ಕನಿಷ್ಠ 25 ಲಕ್ಷ ರೂ.ಗಳಿಗೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅಧಿಕಾರ ವಿಕೇಂದ್ರೀಕರಣ ಮಾಡುವ ಬದಲು ಪಂಚಾಯತ್‌ಗಳ ಅಧಿಕಾರವ ಮೊಟಕುಗೊಳಿಸಲಾಗುತ್ತಿದೆ. ಆಶ್ರಯ ಮನೆ ಹಂಚಿ ಅಧಿಕಾರವನ್ನು ಪಂಚಾಯಿತ್ಗಳಿಂದ ಕಿತ್ತು ಶಾಸಕ ನೀಡಲು ಹೊರಟಿದೆ. ಇದನ್ನು ತೀವ್ರವಾಗಿ ನೌಕರ ವಿರೋಧಿಸಬೇಕು ಎಂದು ನೀಡಿದರು.

ಕರ್ನಾಟಕ ರಾಜ್ಯ ಗ್ರಾ ಪಂಚಾಯತ್ ನೌಕರರ ಸಂಘ ಪ್ರಧಾನ ಕಾರ್ಯದ ಎಂ.ಬಿ.ನಾಡಗೌಡ ಅವ ಸ್ವಾಗತಿಸಿ, ಉಪಾಧ್ಯಕ್ಷರಾ ಗೋಪಾಲಕೃಷ್ಣ ಅರಳ ವಂದಾರ್ಪಣೆ ಮಾಡಿದರು

ಸಿಐಟಿಯು ಗುಲ್ಬರ್ಗಾ ಜಿಲ್ಲಾ ಸಮಿತಿ ಪರವ ಗೌರಮ್ಮ ಪಾಟೀಲ್ ಮಾತನಾಡಿ ಗ್ರಾ ಪಂಚಾಯತ್ ನೌಕರರ ಹೋರಾಟಕ್ಕೆ ಸಂಪೂ ಬೆಂಬಲ ನೀಡುವುದಾಗಿ ಘೋಷಿಸಿದರು.

ವೇದಿಕೆಯಲ್ಲಿ ಸಿಐಟಿಯು ಗುಲ್ಬರ್ಗಾ ಜಿ ಅಧ್ಯಕ್ಷೆ ಹಾಗೂ ಅಂಗನವಾ ನೌಕರರ ರಾಜ್ಯ ಅಧ್ಯಕ್ಷೆ ಶ ಘಂಟೆ, ಜನವಾದಿ ಮಹಿ ಸಂಘಟನೆಯ ಮುಖಂಡರಾದ ಜಗದೇವಿ ನೂಲ್ಕ ಸ್ವಾಗತ ಸಮಿತಿ ಕಾರ್ಯದರ್ಶಿ ಮಂಜು ಪಟೇಲ್, ಪಂಚಾಯಿತಿ ನೌಕರರ ಸಂಘದ ಪದಾಧಿಕಾರಿಗಳು ಮತ್ತಿತರರು ಉಪಸ್ಥಿತರಿದ್ದರು.

ಇದಕ್ಕೂ ಮೊದಲು ಗುಲ್ಬರ್ಗಾದ ಮ ರಸ್ತೆಯಲ್ಲಿರುವ ಕನ್ನಡ ಭವನದಿಂದ ಪ್ರಮು ಬೀದಿಗಳಲ್ಲಿ ಬೃಹತ್ ಮೆರವಣಿಗೆ ನಡೆಸಲಾ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದ ಸಾವಿರ ಗ್ರಾಮ ಪಂಚಾಯಿತಿ ನೌಕರರು ತಮ್ಮ ಅಕ್ಕ ಸಂಘ ಹಾಗೂ ಸಿಐಟಿಯುಗೆ ಜಯಘೋ ಮೊಳಗಿಸಿದರು. ಉಪ ಚುನಾವಣೆಯ ನೀತಿ ಸಂ ಹೆಸರಿನಲ್ಲಿ ಸಿಐಟಿಯು ಪತಾಕೆ ಹಿಡಿಯಬಾರದ ಒತ್ತಡವನ್ನು ಧಿಕ್ಕರಿಸಿದರು. ತಿಂಗಳುಗಟ್ಟಲೆ ವೇ ನೀಡದ ಬಿಜೆಪಿ ಸರ್ಕಾರಕ್ಕೆ ಧಿಕ್ಕಾರ, ಬೆಲೆ ಹೆಚ್ಚಿಸುತ್ತಿರುವ ಕೇಂದ್ರ ಮತ್ತು ಸರ್ಕಾರಗಳಿಗೆ ಧಿಕ್ಕಾರ' 'ಸೆಪ್ಟೆ ಚಳುವಳಿಯನ್ನು ಯಶಸ್ವಿಗೊ ಮೊದಲಾದ ಘೋಷಣೆ ಮುಗಿಲುಮುಟ್ಟಿದವು.

ವಿಚಾರಸಂಕಿರಣ : ಸಮ್ಮೇ ಅಂಗವಾಗಿ 'ಅಧಿ ವಿಕೇಂದ್ರೀಕರಣ ಮತ್ತು ಗ್ರಾ ಪಂಚಾಯತುಗಳ ಆರ ಸಬಲೀಕರಣ' ಕು ವಿಚಾರಸಂಕಿರಣ ವ ಏರ್ಪಡಿಸಲಾಗಿತ್ತು.

ವಿಚಾರಸಂಕಿರಣದಲ್ಲಿ ಮಾಜಿ ಸಚಿವ ಹ ಕಾಂಗ್ರೆಸ್ ಮುಖಂಡ ಹೆಚ್.ಸಿ.ಮಹದೇ ಗುಲ್ಬರ್ಗಾ ಜಿಲ್ಲೆಯ ಸೇಡಂ ಶಾಸಕ ಶರ ಪಾಟೀಲ್, ಬಿಜೆಪಿ ಶಾಸಕ ಶಶಿಲ್ ನಮ ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮ ಸದಸ್ಯ ಹಾಗೂ ಮಾಜಿ ಶಾಸಕ

ಪುಟ 1


ಪ್ರತಿನಿಧಿ ಸಭೆ

ಆಗಸ್ಟ್ 8 ರಂದು ವೀರಶೈವ ಕಲ್ಯಾಣ ಮಂಟಪದಲ್ಲಿ ನಡೆದ ಪ್ರತಿನಿಧಿ ಸಭೆಯಲ್ಲಿ 24 ಜಿಲ್ಲೆಗಳಿಂದ 730 ಮಂದಿ ಭಾಗವಹಿಸಿದ್ದರು. ಪ್ರಧಾನ ಕಾರ್ಯದರ್ಶಿಯವರು ವರದಿ ಮಂಡಿಸಿದ ಬಳಿಕ 2 ಹಂತದ ಚರ್ಚೆಯಲ್ಲಿ 35 ಮಂದಿ ಭಾಗವಹಿಸಿದ್ದು ಸಂಘಟನೆಯನ್ನು ವಿಸ್ತರಿಸುವ, ಗಟ್ಟಿಗೊಳಿಸುವ ಬಗ್ಗೆ ಮಾತನಾಡಿದರು. ತಾಲ್ಲೂಕುಮಟ್ಟದ ಹೋರಾಟ ನಡೆಸಿದ ಫಲವಾಗಿ ಆದೇಶಗಳು ಜ್ಯಾರಿಯಾಗುತ್ತಿದ್ದು ತಾಲ್ಲೂಕುಮಟ್ಟದಲ್ಲಿ ಸಂಘಟನೆಯನ್ನು ಗಟ್ಟಿಗೊಳಿಸಬೇಕೆಂದು ವಿವರಿಸಿದರು.

ಗುಲ್ಬರ್ಗ ಜಿಲ್ಲೆ ಗ್ರಾಮ ಪಂಚಾಯತಿಯಲ್ಲಿ ಕಸಗುಡಿಸುವ ಕೆಲಸ ಮಾಡುತ್ತಿರುವ ರುದ್ರಮ್ಮ '1 ವರ್ಷದಿಂದ ವೇತನ ಸಿಗುತ್ತಿಲ್ಲ, ನಮ್ಮ ಮಕ್ಕಳು ಮರಿ ಹೇಗೆ ಬದುಕಬೇಕು' ಎಂದು ಪ್ರಶ್ನಿಸುವಾಗ ನೌಕರರ ಕರಾಳ ಅನುಭವ ಕಿವಿಗೆ ಅಪ್ಪಳಿಸುತ್ತಿತ್ತು. ಆಕ್ರೋಶ ಹೆಚ್ಚಾಗುತ್ತಿತ್ತು. ಗ್ರಾಮರಾಜ್ಯ, ರಾಮರಾಜ್ಯ ಎಂದು ಬೊಗಳೆ ಬಿಡುವ ಮಂತ್ರಿಗಳು ಮಾತು ಪೊಳ್ಳು ಎನ್ನುವುದು ಸ್ಪಷ್ಟವಾಗುತ್ತಿತ್ತು.

ಜಿಲ್ಲಾ ಸಮಿತಿಯು ಪರವಾಗಿ ಮಾತನಾಡಿದ ಉಪಾಧ್ಯಕ್ಷ ಕಾಂ. ಶಿವಶರಣಪ್ಪ ಬೋಡೆಯವರು 'ಗ್ರಾಮ ಪಂಚಾಯಿತಿ ನೌಕರರ ಐಕ್ಯತೆಯನ್ನು ಸಹಿಸದ ಆಡಳಿತರೂಢ ಬಿಜೆಪಿಯ ಚೇಲಾಗಳು ಯೂನಿಯನ್ ಒಡೆಯಲು ಪ್ರಯತ್ನಿಸುತ್ತಿದ್ದಾರೆ. ಅವರ ಪ್ರಯತ್ನವನ್ನು ಸಂಪೂರ್ಣ ವಿಫಲಗೊಳಿಸುತ್ತೇವೆ' ಎಂದಾಗ ಇಡೀ ಸಮ್ಮೇಳನವು ಕರತಾಡನದ ಮೂಲಕ ಐಕ್ಯತೆಯನ್ನು ಪ್ರದರ್ಶಿಸಿತು.

ಪ್ರತಿನಿಧಿ ಸಭೆಯು ಈ ಕೆಳಗಿನ ಪ್ರಮುಖ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು.



...ಂಚಾಯಿತ್ ನೌಕರರ ರಾಜ್ಯ ಸಮ್ಮೇಳನ.....

...ಶ್ರೀರಾಮರೆಡ್ಡಿ ಭಾಗವಹಿಸಿದ್ದರು. ಕ.ರಾ.ಶ್ರೀ. ...ಕರರ ಸಂಘದ ಅಧ್ಯಕ್ಷರಾದ ಮಾರುತಿ ...ನ್ನಡೆಯವರು ವಿಚಾರಸಂಕಿರಣದ ಅಧ್ಯಕ್ಷತೆ ವಹಿಸಿ ...ವನೆ ಮಾಡುತ್ತ, ಪಶ್ಚಿಮ ಬಂಗಾಳದಲ್ಲಿ 1977 ...ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದ ನಂತರ ...ರ ವಿಕೇಂದ್ರೀಕರಣಕ್ಕೆ ಮಹತ್ವ ನೀಡಿ, ಗ್ರಾಮ ...ಾಯತುಗಳಿಗೆ ಚುನಾವಣೆ ನಡೆಸಿದ್ದು ...ತ್ರವಲ್ಲದೆ, ಆರ್ಥಿಕವಾಗಿ ಹೆಚ್ಚು ಅನುದಾನ ...ಗೂ ಅಧಿಕಾರಗಳನ್ನು ನೀಡಿ ಗ್ರಾಮ ...ಾಯತುಗಳ ಸಬಲೀಕರಣಕ್ಕೆ ಮುಂದಾಯಿತು ...ು ಹೇಳಿದರು.

...ಾಂಗ್ರೆಸ್ ಮುಖಂಡ ಹೆಚ್.ಸಿ. ...ದೇವಪ್ಪನವರು ಕರ್ನಾಟಕದಲ್ಲಿ ಪಂಚಾಯತ್ ...ವ್ಯವಸ್ಥೆಯನ್ನು ಬಲಗೊಳಿಸಲು ಅಬ್ದುಲ್ ...ಸಾಬ್ ಅವರು ವಹಿಸಿದ ಪಾತ್ರವನ್ನು ...ಂಡರು. ಗ್ರಾಮ ಪಂಚಾಯತುಗಳು ...ವಾಗಿ ಸಬಲೀಕರಣಗೊಂಡರೆ ಮಾತ್ರ ...ಣ ಪ್ರದೇಶದ ಜನರ ಆರ್ಥಿಕ ಬೆಳವಣಿಗೆಗೆ ...ಯವಾಗುತ್ತದೆ. ಅದೇ ಸಂದರ್ಭದಲ್ಲಿ ...ಯತುಗಳ ಕೆಲಸಗಳನ್ನು ಜಾರಿಗೊಳಿಸುವ ...ರಿಗೂ ಸಹ ವೇತನ ಹೆಚ್ಚಳ ಆಗಬೇಕಾಗಿದೆ ...ರು.

...ಐ(ಎಂ) ಪರವಾಗಿ ಮಾತನಾಡಿದ ...ಶ್ರೀರಾಮರೆಡ್ಡಿಯವರು 1957 ರಲ್ಲಿ ಕೇರಳದಲ್ಲಿ ...ರಕ್ಕೆ ಬಂದ ಇ.ಎಂ.ಎಸ್. ...ೂದರಿಪಾಡ್ ಸರ್ಕಾರ ಅಧಿಕಾರ ವಿಕೇಂದ್ರೀಕರಣಕ್ಕೆ ನಾಂದಿ ಹಾಡಿತು. ನಂತರ ಪಶ್ಚಿಮ ಬಂಗಾಳ, ತ್ರಿಪುರಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಗೊಳಿಸಿತು. ಈ ಮೂರು ರಾಜ್ಯಗಳಲ್ಲಿ ಕೇವಲ ಅಧಿಕಾರ ವಿಕೇಂದ್ರೀಕರಣ ಮಾಡಿದ್ದು ಮಾತ್ರವಲ್ಲದೆ ಪಂಚಾಯತುಗಳಿಗೆ ಹೆಚ್ಚಿನ ಅಧಿಕಾರ ಮತ್ತು ಆರ್ಥಿಕ ಸವಲತ್ತುಗಳನ್ನು ಒದಗಿಸಲಾಗಿದೆ ಎಂದು ವಿವರಿಸಿದರು.

ಒಟ್ಟಾರೆಯಾಗಿ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಬಲಗೊಳಿಸಲು ಕೇವಲ ಚುನಾವಣೆಗಳನ್ನು ನಡೆಸಿ ಪಂಚಾಯತುಗಳನ್ನು ರಚಿಸಿದರೆ ಸಾಲದು, ಜತೆಯಲ್ಲಿ ಹೆಚ್ಚಿನ ಅನುದಾನ ನೀಡುವುದು ಅಗತ್ಯ ಎನ್ನುವ ಅಭಿಪ್ರಾಯಕ್ಕೆ ಬರಲಾಯ್ತು.

ನಿರ್ಣಯ : ಕನಿಷ್ಟ ವೇತನಕ್ಕಾಗಿ ಒತ್ತಾಯ

1. ಸೆಪ್ಟೆಂಬರ್ ಚಳುವಳಿಯನ್ನು ಯಶಸ್ವಿಗೊಳಿಸುವುದು.
2. ಸರಕಾರದ ಹೊರಗುತ್ತಿಗೆ ನೀತಿಯನ್ನು ವಿರೋಧಿಸಿ
3. ಗ್ರಾಮೀಣ ಪ್ರದೇಶದಲ್ಲಿ ಸಮರ್ಪಕವಾಗಿ ವಿದ್ಯುತ್ ಸರಬರಾಜಿಗಾಗಿ
4. ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕ ಜ್ಯಾರಿಗಾಗಿ
5. ಪಂಚಾಯತ್‌ಗಳಿಗೆ ನೀಡುವ ಅನುದಾನವನ್ನು 25 ಲಕ್ಷ ರೂ.ಗಳಿಗೆ ಹೆಚ್ಚಿಸಲು ಒತ್ತಾಯಿಸಿ

ಎಸ್‌ಎಫ್‌ಐನಿಂದ ಸುನಿಲ್ ಮಾನ್ಪಡೆ ಮೊದಲಾದವರು ಸಮ್ಮೇಳನಕ್ಕೆ ಶುಭ ಕೋರಿ ಮಾತನಾಡಿದರು.

79 ಸದಸ್ಯರ ರಾಜ್ಯಸಮಿತಿಯನ್ನು ಆಯ್ಕೆ ಮಾಡಲಾಗಿದ್ದು 6 ಸ್ಥಾನಗಳನ್ನು ಖಾಲಿ ಬಿಡಲಾಗಿದೆ. ರಾಜ್ಯಸಮಿತಿ ಸದಸ್ಯರು 27 ಪದಾಧಿಕಾರಿಗಳನ್ನು ಆಯ್ಕೆ ಮಾಡಿದ್ದು ಮಾರುತಿ ಮಾನ್ಪಡೆ ಅಧ್ಯಕ್ಷರಾಗಿ, ಎಂ.ಬಿ.ನಾಡಗೌಡ ಪ್ರಧಾನ ಕಾರ್ಯದರ್ಶಿಯಾಗಿ ಆರ್.ಎಸ್ ಬಸವರಾಜ್, ಖಜಾಂಚಿಯಾಗಿ ಆಯ್ಕೆಯಾಗಿರುತ್ತಾರೆ. ಕಂಪ್ಯೂಟರ್ ನಿವಾಹಕರ ಉಪಸಮಿತಿ ಹಾಗೂ ಮಹಿಳಾ ನೌಕರರ ಉಪಸಮಿತಿ ರಚಿಸಲು ನಿರ್ಧರಿಸಲಾಗಿದ್ದು ಕಾಂ.ತ್ರಿವೇಣಿ ಮಹಿಳಾ ಉಪಸಮಿತಿಯ ಸಂಚಾಲಕರಾಗಿರುತ್ತಾರೆ.

ಕಾರ್ಯಕ್ರಮದ ಕೊನೆಯ ಭಾಗವಾಗಿ 3 ದಿನಗಳ ಸಮ್ಮೇಳನವನ್ನು ಯಶಸ್ವಿಯಾಗಿಸಲು ಪ್ರಯತ್ನಿಸಿದ ವಿವಿಧ ಸಾಮೂಹಿಕ ಸಂಘಟನೆಗಳಿಗೆ ಸೇರಿದ ಸಂಗಾತಿಗಳನ್ನು ಹರ್ಷೋದ್ಗಾರಗಳಿಂದ ಸಮ್ಮೇಳನವು ಅಭಿನಂದಿಸಿತು.

ಆಗಸ್ಟ್ 9 ರಂದು ಮಧ್ಯಾಹ್ನ 3 ಗಂಟೆಗೆ 'ಗದ್ದೇ ಗೆಲ್ಲುವೆವು' ಹಾಡಿನೊಂದಿಗೆ ಮುಕ್ತಾಯವಾದ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ 5ನೇ ರಾಜ್ಯ ಸಮ್ಮೇಳನವು ಸಂಘಟನೆಯನ್ನು ವಿಸ್ತಾರಗೊಳಿಸುವ ಗಟ್ಟಿಗೊಳಿಸುವ ಮತ್ತು ಸಿಐಟಿಯುನೊಂದಿಗೆ ಎಲ್ಲಾ ವಿಭಾಗದ ಕಾರ್ಮಿಕರನ್ನು, ನೌಕರರನ್ನು ಐಕ್ಯಗೊಳಿಸುವ ಭರವಸೆಯನ್ನು ಮೂಡಿಸಿದೆ.

ಕಾಂ. ಸೂರಿ...

ಪುಟ 16 ರಿಂದ

ಸಂಗಾತಿಗಳ ಮೇಲೆ ಬೀಳುತ್ತದೆ. ಕಾರ್ಯಕ್ರಮಗಳಿಗೆ ಅವರ ನಿರೀಕ್ಷೆಯಷ್ಟು ಜನ ಸೇರಿಸಲಾಗ ದಿದ್ದಾಗ ಅವರು ರೇಗುತ್ತಿದ್ದರು. ಆದರೆ ನಮ್ಮ ಸಂಗಾತಿಗಳು ಯಾರು ಅದನ್ನು ತಪ್ಪಾಗಿ ಭಾವಿಸುತ್ತಿರಲಿಲ್ಲ. ತಮಿಳುನಾಡು, ಆಂಧ್ರ ಪ್ರದೇಶದಂತಹ ರಾಜ್ಯಗಳಲ್ಲಿ ನಮ್ಮ ಚಳುವಳಿ ಬಹಳ ವೇಗವಾಗಿ ಹಾಗೂ ವ್ಯಾಪಕವಾಗಿ ಬೆಳೆಯುತ್ತಿರುವುದನ್ನು ನೋಡುತ್ತಿದ್ದ ಅವರು ತಮ್ಮ ಕೊನೆಯ ದಿನಗಳು ಹತ್ತಿರವಾಗುತ್ತಿರುವಾಗ ಕರ್ನಾಟಕದಲ್ಲಿ ನಮ್ಮ ಚಳುವಳಿ ಬೆಳೆಯಬೇಕಾದಷ್ಟು ಬೆಳೆಯಲಿಲ್ಲವಲ್ಲ ಎಂಬ ನೋವು ಅವರನ್ನು ಕೆರಳಿಸುತ್ತಿತ್ತು. ಒಬ್ಬ ಜವಾಬ್ದಾರಿಯುತ ಕಮ್ಯುನಿಸ್ಟ್ ಕಾರ್ಯಕರ್ತ ನಲ್ಲಿ ತನ್ನ ಕೆಲಸದ ಬಗ್ಗೆ ಈ ತರಹದ ಅತೃಪ್ತಿ ಇರುವುದು ಆರೋಗ್ಯಕರ. ನಮ್ಮ ಸಣ್ಣ ಪುಟ್ಟ ಸಾಧನೆಗಳ ಬಗ್ಗೆ ನಾವು ಸಂತೃಪ್ತ ಭಾವನೆ ಹೊಂದುವುದು ನಮ್ಮ ಚಳುವಳಿಯ ಬೆಳವಣಿಗೆಯ ದೃಷ್ಟಿಯಿಂದ ಅಪೇಕ್ಷಣೀಯವಲ್ಲ.

ಕರ್ನಾಟಕದಲ್ಲಿ ಕಮ್ಯೂನಿಸ್ಟ್ ಚಳುವಳಿಯ ಬಲಾಬಲವನ್ನು ವಸ್ತುನಿಷ್ಠವಾಗಿ ನೋಡಲು ನಮಗೆ ಸಾಧ್ಯವಾದರೆ, ನಾವು ಸಹ ಕಾಮ್ರೆಡ್ ಸೂರಿಯವರ ತರಹ ದಣಿವರಿಯದೆ, ವಿಶ್ರಾಂತಿ ಬಯಸದೆ ಕಾರ್ಯೋನ್ಮುಖರಾಗಬೇಕಾಗುತ್ತದೆ. ಇಂತಹ ದೃಢ ಸಂಕಲ್ಪದೊಂದಿಗೆ ಮುನ್ನಡೆಯುವುದೇ ಸುಮಾರು 79 ವರ್ಷಗಳ ಕಾಲ ಕಾರ್ಮಿಕ ವರ್ಗಕ್ಕಾಗಿ ಸದಾ ಚಡಪಡಿಸಿ ನಮ್ಮಿಂದ ಮರೆಯಾದ ಅಪೂರ್ವ, ಅದಮ್ಯ ಚೇತನಕ್ಕೆ ನಾವು ಸಲ್ಲಿಸಬೇಕಾದ ನೈಜ ಶ್ರದ್ಧಾಂಜಲಿ.

...ಕ್ಷಿಣ ಕನ್ನಡದ ಬುಡಕಟ್ಟು ಸಮುದಾಯ 'ಕೊರಗರು'

...ರಿಂದ

...ರದ ವಿದ್ವಾಂಸ ರಾಮಪ್ಪ ವರ್ಮಿಕ್‌ರವರು ...ರ ಬಗ್ಗೆ ಬಹಳಷ್ಟು ವಿವರಗಳನ್ನು ನೀಡಿದುದರ ...ಉಲ್ಲೇಖವಿದೆ. ಅದೇ ರೀತಿ ಉಳ್ಳಾಲ ...ಂದ್ರರಾವ್, ಬಿ.ಎ. ಸಾಲೆತ್ತೂರು, ...ದ ಮಾಲಗತ್ತಿ, ಒಡೆಯರ್ ಡಿ ಹೆಗ್ಗಡೆ ...ಷ್ಣ ಟಿ.ಶೆಟ್ಟಿ, ಎಡ್ಗರ್ ಥರ್‌ಸ್ಟೋನ್ ತಮ್ಮ ...ಪೂರ್ಣ ಬರಹಗಳ ಮೂಲಕ ಕೊರಗ ...ಯದ ದುಃಖವನ್ನು ಅಕ್ಷರದ ಮೂಲಕ ...ರೆ. ಇತ್ತೀಚೆಗೆ ಕಳೆದ ದಶಕದಲ್ಲಿ ...ೂಡಿನಲ್ಲಿ ಐ.ಎ.ಎಸ್. ಅಧಿಕಾರಿಯಾಗಿ ದುಡಿದಿದ್ದ ಪಿ. ವಾಸುದೇವನ್‌ರವರು ಕೊರಗರ ಮಧ್ಯೆ ದುಡಿದಿರುವುದು ಮಾತ್ರವಲ್ಲದೆ The koragas forgottan lot' ಎಂಬ ಮಹತ್ವಪೂರ್ಣ ಕೃತಿಯನ್ನು ರಚಿಸಿರುತ್ತಾರೆ. ಸಾಹಿತಿಗಳಾಗಿ ಕಯ್ಯಾರ ಕಿಂಞ್ಞಣ್ಣರೈ, ಅಮೃತ ಸೋಮೇಶ್ವರ ರಂಥವರುಗಳು ಕೂಡಾ ತಮ್ಮ ಕಥೆ, ಕವನಗಳ ಮೂಲಕ ಕೊರಗರಿಗಾಗಿ ಪ್ರತಿಸ್ಪಂದಿಸಿ ದ್ದಾರೆ. ಬ್ರಿಟಿಷ್ ಇತಿಹಾಸಕಾರರಾದ ಎಸ್.ಸಿ. ದುಬೆ, ಎಂ.ಡಿ. ವೇರ್‌ಹೌಸ್, ಷರ್ಟಿಂಗ್, ಹಾಗೂ ಇಥಿಯೋಪಿಯಾದ ಪ್ರಾಧ್ಯಾಪಕ ರಿಚರ್ಡ್ ಥಂಕ್ ಫರ್ಡ್‌ರವರುಗಳು ಕೂಡಾ ಸಾಕಷ್ಟು ಸಂಶೋಧನೆ ನಡೆಸಿದರಾಗಿದ್ದಾರೆ.

ಭಾಷಲ್ ಮಿಷನ್‌ನ ಆಗಮನ ಹಾಗೂ ಮಿಷನರಿ ಕೆಲಸದ ಫಲವಾಗಿ ಹಲವಾರು ಜನ ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿದ್ದಾರೆ. ಮಂಜೇಶ್ವರದ ನಾಮಂಜೂರಿನಲ್ಲಿ ಇಂತಹ ಜನ ಕಾಲನಿಯಿದ್ದು ಅವರನ್ನು ಕ್ರೈಸ್ತ ಕೊರಗರರೆಂದು ಕರೆಯಲಾಗುತ್ತದೆಂದು ಸಿ.ವಾಸುದೇವನ್ ರವರು ತಮ್ಮ ಪುಸ್ತಕದಲ್ಲಿ ತಿಳಿಸಿರುತ್ತಾರೆ.

ಕೊರಗ ಸಮುದಾಯದಲ್ಲಿ ಅಂಡೆ ಕೊರಗರು ವಸ್ತ್ರದ ಕೊರಗರು, ತಿಪ್ಪಿದ ಕೊರಗರು, ವಂಟಿ ಕೊರಗರು, ಮೂಡು ಕೊರಗರು, ಮುಂಡು ಕೊರಗರು ಹಾಗೂ ಬಾಕುಡೆ ಕೊರಗರು ಎಂಬ ವಿಭಾಗಗಳಿವೆ. ತಮ್ಮ ಸಮುದಾಯದ ಜನರ ಮಧ್ಯೆ ತಮ್ಮದೇ ಆದ ಕೊರಗ ಭಾಷೆಯನ್ನು ಉಪಯೋಗಿಸುತ್ತಿದ್ದು, ಇದು ಪ್ರತ್ಯೇಕ ದ್ರಾವಿಡ ಭಾಷೆ ಎಂದು ಭಾಷಾ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.

ಒಟ್ಟಿನಲ್ಲಿ ಸ್ವಾತಂತ್ರ್ಯಾನಂತರವೂ ಕೂಡಾ ಕೊರಗರು ಅತ್ಯಂತ ಹಿಂದುಳಿದಿರುವಿಕೆ ಮತ್ತು ಎಲ್ಲಾ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಈ ಸಮುದಾಯದ ಅಳಿವು ಉಳಿವು ನಮ್ಮ ಸಮಾಜದ ಮುಖ್ಯವಾಹಿನಿಯಲ್ಲಿ ಇವರ ಭಾಗವಹಿಸುವಿಕೆ ತೀವ್ರ ಸ್ವರೂಪದ ಶೋಷಣೆಗೆ ಒಳಗಾದ ಇವರನ್ನು ಸರ್ವಾಂಗೀಣ ಅಭಿವೃದ್ಧಿ ಕೇವಲ ಅಧ್ಯಯನದಿಂದ ಮಾತ್ರ ಸಾಧ್ಯವಿಲ್ಲ. ಪ್ರಗತಿಪರ ಕಾರ್ಯಕ್ರಮಗಳ ಜಾರಿಗಾಗಿ ರೂಪಿಸುವ ಹೋರಾಟ ನಿರ್ಣಾಯಕವಾಗಿದೆ.

...ಲಯನ್ಸ್ ಕಂಪನಿಯಿಂದ ಅನಿಲ ಸಂಪತ್ತು ಲೂಟಿ

... ರಿಂದ

...ಸರ್ಕಾರ ಬೆಲೆ ನಿಗದಿಪಡಿಸಬೇಕು. ಆದರೆ, ...ಆಡಿಟ್ ಸಂಸ್ಥೆಯು ಇಲ್ಲಿ ಆಡಿಟ್ ...ೇ ಇಲ್ಲ, ಹೀಗೆ ಮೂಲ ನೈಸರ್ಗಿಕ ಅನಿಲದ ...ರಿಸುವ ಮೂಲಕ ರೈತರು ವ್ಯವಸಾಯಕ್ಕಾಗಿ ...ವಿದ್ಯುತ್, ರಾಸಾಯನಿಕ ಗೊಬ್ಬರಗಳ ...ಸಹಜವಾಗಿ ಏರುವಂತೆ ಮಾಡುವಲ್ಲಿ ...ಪಾತ್ರವಹಿಸಿದೆ. ಇತ್ತ ಅನಿಲ ಸಿಗದೆ ತನ್ನ ಉಷ್ಣ ವಿದ್ಯುತ್ ಸ್ಥಾವರಗಳನ್ನು ನಡೆಸಲಾಗದೆ ಒದ್ದಾಡುತ್ತಿದ್ದ ಎನ್.ಟಿ.ಪಿ.ಸಿ ಕಂಪನಿಗೆ ಮತ್ತೊಂದು ಸಾರ್ವಜನಿಕ ಉದ್ದಿಮೆಯಾದ ಓ.ಎನ್.ಜಿ.ಸಿ ಕಂಪನಿಯು ಅದೇ ಅನಿಲವನ್ನು ಕೇವಲ 1.8ಡಾಲರಿಗೆ ಸರಬರಾಜು ಮಾಡುತ್ತಿದೆ. ಆದರೆ, ಖಾಸಗಿ ಕಂಪನಿಯು ಲಾಭ ಹೊಡೆದುಕೊಳ್ಳಲು ಸರ್ಕಾರವೇ ಮುಂದೆ ನಿಂತು ಅನಿಲದ ಬೆಲೆಯನ್ನು ಎರಡೂವರೆ ಪಟ್ಟು ಹೆಚ್ಚಿಸಿದೆ.

ಸಿಪಿಐ(ಎಂ) ಒತ್ತಾಯ

ದೇಶದ ಸಂಪತ್ತಿಗೆ 'ಜನತೆಯೇ ಮಾಲೀಕರು' ಎಂದು ಬೊಗಳೆ ಬಿಡುವ ಸರ್ಕಾರ ತಕ್ಷಣವೇ ರಿಲಯನ್ಸ್ ಕಂಪನಿಯು ನಿರ್ವಹಿಸುತ್ತಿರುವ ಗೋದಾವರಿ ಅನಿಲ ಬಾವಿಯಿಂದ ಹೊರಬರುತ್ತಿರುವ ಅನಿಲವನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳಬೇಕು. ಅದನ್ನು ಸಾರ್ವಜನಿಕ ಸಂಸ್ಥೆಯಾದ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ (ಜಿ.ಎ.ಐ.ಎಲ್) ಗೆ ವಹಿಸಬೇಕು. ದೇಶದ ಅನಿಲ ಮತ್ತು ತೈಲ ಸಂಪತ್ತಿನ ಉತ್ಪಾದನೆ, ಸಾಗಣೆ, ಮತ್ತು ವಿತರಣೆಯನ್ನು ಸರ್ಕಾರಿ ಸ್ವಾಮ್ಯದ ಕಂಪನಿಗಳಾದ ಓ.ಎನ್.ಜಿ.ಸಿ. ಆಯಿಲ್, ಮತ್ತು ಜಿ.ಎ.ಐ.ಎಲ್ ಕಂಪನಿಗಳಿಗೆ ಸಂಪೂರ್ಣವಾಗಿ ವಹಿಸಿಕೊಟ್ಟು ರಿಲಯನ್ಸ್‌ನಂತಹ ಖಾಸಗಿ ಕಂಪನಿಗಳು ಸಂಪತ್ತನ್ನು ಲೂಟಿ ಮಾಡಿ ಜನತೆಯಿಂದ ದುಬಾರಿ ಬೆಲೆ ವಸೂಲಿ ಮಾಡುವ ದಗಲ್‌ಬಾಜಿ ನಿಲ್ಲಬೇಕು ಎಂದು ಸಿಪಿಐ(ಎಂ) ಮತ್ತು ಎಡಪಕ್ಷಗಳು ಸರ್ಕಾರವನ್ನು ಒತ್ತಾಯಿಸಿವೆ.

ಕಾಂ. ಸೂರಿ : ಬತ್ತದ ಸ್ಫೂರ್ತಿಯ ನೆನಪಿನ ಒರತೆ



ಆಗಸ್ಟ್ 24, 2009 ಹಿರಿಯ ಸಿಪಿಐ(ಎಂ) ನೇತಾರ ಕಾಂ.ಸೂರಿಯವರ 85ನೇ ಜನ್ಮದಿನ. ಅದಮ್ಯ ಚೈತನ್ಯದ ಚಿಲುಮೆ ಧೀಮಂತಿಕೆಯ ಸಂಕೇತವಾದ ಸೂರಿಯವರ ಕುರಿತು ಒಡನಾಡಿ ನಿತ್ಯಾನಂದಸ್ವಾಮಿಯವರ ಬರಹ ಸೂರಿಯವರ ನೆನಪಿನಲ್ಲಿ.

ನಿತ್ಯಾನಂದ ಸ್ವಾಮಿ

ಇತ್ತೀಚಿಗೆ ಪಕ್ಷಕ್ಕೆ ಬಂದಿರುವ ಅನೇಕ ನಮ್ಮ ಸಂಗಾತಿಗಳಿಗೆ ಕಾಮ್ರೇಡ್ ಸೂರಿ ಎಂದರೆ ಒಂದು ರೀತಿಯ ಭಯ. ಅವರು ಮಾತನಾಡುತ್ತಿರಲಿಲ್ಲ, ಗುಡುಗುತ್ತಿದ್ದರು. ಅದು ವಿಧಾನ ಸೌಧದಲ್ಲಾಗಲಿ, ಫ್ಯಾಕ್ಟರಿ ಗೇಟಿನಲ್ಲಾಗಲಿ, ಸಂಧಾನ ಸಭೆಗಳಲ್ಲಾಗಲಿ, ಹೋರಾಟದ ವೇದಿಕೆಗಳಲ್ಲಾಗಲಿ, ಸೂರಿಯವರು ಮಾತನಾಡುತ್ತಿದ್ದಾರೆಂದರೆ ಬೆಂಕಿಯ ಚೆಂಡುಗಳು ಉರುಳಿ ಬಂದಂತೆ! ಅವರ ಮಾತುಗಳಲ್ಲಿ ಕುಹಕ ನಾಜೂಕತನ ಇರುತ್ತಿರಲಿಲ್ಲ. ಇದ್ದುದನ್ನು ಇದ್ದಂತೆ ಹೇಳಲು ಅವರು ಹಿಂಜರಿಯುತ್ತಿರಲಿಲ್ಲ. ಅವರ ಅಭಿಪ್ರಾಯಗಳು ಆದೇಶಗಳಂತೇ ಕಾಣುತ್ತಿದ್ದವು. ಅವರೊಂದಿಗೆ ಅಭಿಪ್ರಾಯ ಹಂಚಿಕೊಳ್ಳುವುದು ಸಾಧ್ಯವೇ ಇಲ್ಲ ಎಂದು ತೋಚುತ್ತಿತ್ತು. ಆದರೆ ಅನುಭವದ ಆಳದಿಂದ ಬರುತ್ತಿದ್ದ ಅವರ ಒಂದೊಂದು ಮಾತಿನ ತೂಕ ಕೇಳುಗರ ಮೇಲೆ ಗಾಢವಾದ ಪರಿಣಾಮ ಬೀರುತ್ತಿತ್ತು. ಅವರೊಂದಿಗೆ ಸಹಮತ ಇಲ್ಲದವರು ಸಹ ಅವರ ಮಾತುಗಳಿಂದ ಬೆರಗಾಗದೆ ಇರುತ್ತಿರಲಿಲ್ಲ. ಹೀಗಾಗಿ ಅವರ ನಿರ್ಭಿಡೆಯ ಮಾತುಗಳಿಂದ ಯಾರೂ ಮುನಿಸಿಕೊಳ್ಳುವ ಪ್ರಶ್ನೆಯೇ ಇರುತ್ತಿರಲಿಲ್ಲ. ಕಾಂಗ್ರೆಸ್‌ನಂತ ಆಳುವ ಪಕ್ಷಗಳ ಪುಢಾರಿಗಳಾಗಲಿ, ವೈಕೋದಂತಹ ಬಹುರಾಷ್ಟ್ರೀಯ ಕಂಪೆನಿಯ ಆಡಳಿತ ವರ್ಗದವರಾಗಲಿ ಕಾಮ್ರೆಡ್ ಸೂರಿಯವರ ಅಭಿಪ್ರಾಯಗಳನ್ನು ಲಘುವಾಗಿ ಪರಿಗಣಿಸುತ್ತಿರಲಿಲ್ಲ. ಪಕ್ಷದ ಒಳಗೂ ಕಾಮ್ರೆಡ್ ಸೂರಿಯವರ ಅಭಿಪ್ರಾಯಕ್ಕೆ ವಿರುದ್ಧವಾದ ವಾದಕ್ಕೆ ಸುಲಭವಾಗಿ ಬಹುಮತ ದೊರೆಯುತ್ತಿರಲಿಲ್ಲ.

ಕಾಮ್ರೆಡ್ ಸೂರಿಯವರ ಅಭಿಪ್ರಾಯಕ್ಕೆ ದೊರಕುತ್ತಿದ್ದ ಸಾರ್ವತ್ರಿಕ ಮನ್ನಣೆಗೆ ಅವರು ಅಪ್ಪಿಕೊಂಡ ಸಿದ್ಧಾಂತಕ್ಕೆ ಅವರ ದೃಢವಾದ ಬದ್ಧತೆಯೇ ಕಾರಣವಾಗಿತ್ತು. ಮಾರ್ಕ್ಸ್‌ವಾದದಲ್ಲಿ ಅವರು ಬೆಳೆಸಿಕೊಂಡು ಬಂದ ಅಚಲವಾದ ವಿಶ್ವಾಸ, ಅವರಲ್ಲಿದ್ದ ಕಾರ್ಮಿಕ ವರ್ಗದ ಕ್ರಾಂತಿಕಾರಿ ಕಣ್ಣೋಟದ ಸ್ಪಷ್ಟತೆ ಅವರನ್ನು ಹಾಗೆ ನುಡಿಸುತ್ತಿತ್ತು. ಪ್ರತಿಯೊಂದು ಬೆಳವಣಿಗೆಯನ್ನು ಮಾರ್ಕ್ಸ್‌ವಾದದ ಒರೆಗೆ ಹಚ್ಚುವುದನ್ನು ಅವರು ಅನುಭವದಿಂದ ಕಲಿತಿದ್ದರು. ಕೆಲವೊಮ್ಮೆ ಅವರು ತುಂಬಾ ಹಠಮಾರಿಯಾಗಿ ಕಂಡರೂ ತಾತ್ವಿಕ ವಿಶ್ಲೇಷಣೆಗೆ ಅವರು ತಲೆಬಾಗುತ್ತಿದ್ದರು ಮತ್ತು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳಲು ಸಿದ್ಧರಾಗುತ್ತಿದ್ದರು. ಅವರು ನಂಬಿದ ತತ್ವಗಳಿಗೆ ವಿರುದ್ಧವಾಗಿ ಅವರು ಎಂದಿಗೂ ರಾಜಿಮಾಡಿಕೊಳ್ಳದಿರುವುದರಿಂದ ಅವರ ನಿಲುವುಗಳು ಅನೇಕ ಸಲ ತುಂಬ ಕಠೋರವಾಗಿ ಕಾಣುತ್ತಿದ್ದವು. ಪಕ್ಷದ ಸಂಗಾತಿಗಳಿಗೂ ಕೆಲವೊಮ್ಮೆ ಅವರ ಧೋರಣೆಗಳು ಒರಟಾಗಿ ಭಾಸವಾಗಿರಬಹುದು. ಅವರ ಧೋರಣೆಗಳಲ್ಲಿ ಕೆಲವೊಮ್ಮೆ ವ್ಯಕ್ತಿನಿಷ್ಠ ದೋಷಗಳು ಇದ್ದಿರಬಹುದಾದರೂ ಅವುಗಳ ಆಳದಲ್ಲಿ ಇರುತ್ತಿದ್ದ ಕಾಳಜಿಗಳು ಮಾತ್ರ ಕಾರ್ಮಿಕ ವರ್ಗದ ಪಕ್ಷಪಾತಿ ಮುಖಂಡನಲ್ಲಿ ಸಹಜವಾಗಿ ಇರಲೇಬೇಕಾದವುಗಳು ಆಗಿರುತ್ತಿದ್ದವು.

ತಪ್ಪುಗಳ ಅರಿವು

ಸಂಗಾತಿಯೊಬ್ಬರೊಂದಿಗೆ ಅವರು ಮಾತಿಗೆ ಆರಂಭಿಸುವುದೇ ಗದರಿಸುವಂತೆ ಕಾಣುತಿತ್ತು. ಅವರ ಈ ಪ್ರವೃತ್ತಿಗೆ ಹೆದರಿಕೊಂಡು ಕೆಲವು ಸಂಗಾತಿಗಳು ಅವರ ಕಣ್ಣಿಗೆ ಬೀಳುವುದನ್ನೇ ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದರು. ಆದರೆ ಅವರು ಸಿಟ್ಟಿನಿಂದ ಮಾತನಾಡುವುದಕ್ಕೆ ಯಾರ ಆಕ್ಷೇಪವೂ ಇರುತ್ತಿರಲಿಲ್ಲ. ಪಕ್ಷದಲ್ಲಿ ನಮ್ಮ ಕರ್ತವ್ಯಗಳ ಬಗ್ಗೆ ಎತ್ತರದ ಧ್ವನಿಯಲ್ಲಿ ಎಚ್ಚರಿಸಲು ಅವರಿಗೆ ಹಕ್ಕಿದೆ ಎಂಬುದೇ ಪಕ್ಷದೊಳಗೆ ಎಲ್ಲರ ಭಾವನೆಯಾಗಿತ್ತು. ಸುಮಾರು 65 ವರ್ಷಗಳ ಕಾಲ ಶ್ರಮಿಸಿ ಅವರು ರಾಜ್ಯದ ಕಮ್ಯೂನಿಸ್ಟ್ ಆಂದೋಲನಕ್ಕೆ ನೀಡಿದ ಕೊಡುಗೆ, ಮಾಡಿದ ತ್ಯಾಗ ಅವರಿಗೆ ಪಕ್ಷದಲ್ಲಿ ಅಂತಹ ಹಕ್ಕನ್ನು ನೀಡಿತ್ತು. **ಆದರೆ ಎಷ್ಟೇ ಎತ್ತರಕ್ಕೆ ಅವರು ಬೆಳೆದಿದ್ದರೂ, ಅವರು ತಾವು ಸದಸ್ಯರಾಗಿರುವ ಸಮಿತಿಗಳಲ್ಲಿ ತಮಗಿಂತಲೂ ವಯಸ್ಸಿನಿಂದ ಹಾಗೂ ಅನುಭವದಲ್ಲಿ ಕಿರಿಯರಾಗಿರುವ ಸಂಗಾತಿಗಳ ಟೀಕೆಗಳಿಗೆ, ವಿಮರ್ಶೆಗಳಿಗೆ ತಮ್ಮನ್ನು ಒಳ ಪಡಿಸಿಕೊಳ್ಳಲು ಹಿಂಜರಿಯು ತ್ತಿರಲಿಲ್ಲ.** ಇಷ್ಟೊಂದು ವಯಸ್ಸಾದ ಬಳಿಕ ತನ್ನ ಕೆಲವು ಪ್ರವೃತ್ತಿಗಳನ್ನು ಈಗ ತಿದ್ದಿಕೊಳ್ಳುವುದು ತುಂಬಾ ಕಷ್ಟದ ಕೆಲಸವಾಗಿದೆ ಎಂದು ತಮ್ಮ ಅಸಹಾಯಕತೆಯನ್ನು ಮುಚ್ಚುಮರೆ ಇಲ್ಲದೆ ಅವರು ವ್ಯಕ್ತಪಡಿಸುತ್ತಿದ್ದರು. ತನ್ನ ವರ್ತನೆಯ ಕೆಲವು ದೋಷಗಳು ತಿದ್ದುಪಡಿಯಾಗದೆ ಉಳಿದರೆ ಪಕ್ಷದ ಬೆಳವಣಿಗೆಗೆ ಧಕ್ಕೆಯಾಗುತ್ತದೆ ಎಂಬ ಅರಿವು ಅವರನ್ನು ಕಾಡದೆ ಇರುತ್ತಿರಲಿಲ್ಲ.



ವ್ಯವಸ್ಥೆ ವಿರುದ್ಧ ಆಕ್ರೋಶ

ದೇಶದಲ್ಲಿ ಬೇರೂರಿ ನಿಂತಿರುವ ಬಂಡವಾಳಶಾಹಿ ಭೂಮಾಲಿಕ ಪದ್ಧತಿಯ ವಿರುದ್ಧದ ಆಕ್ರೋಶ ಕಾಮ್ರೆಡ್ ಸೂರಿಯವರ ನರನಾಡಿಗಳಲ್ಲಿ ಮನೆ ಮಾಡಿತ್ತು. ಅವರ ಯಾವುದೇ ಭಾಷಣವು ಈ ಶೋಷಕ ಪದ್ಧತಿಯ ಖಂಡನೆಯಿಲ್ಲದೆ ಅಂತ್ಯವಾಗುತ್ತಿರಲಿಲ್ಲ. ಕೈಗಾರಿಕಾ ಕಾರ್ಮಿಕರನ್ನಾಗಲಿ, ರೈತರನ್ನಾಗಲಿ, ಮಹಿಳೆಯರನ್ನಾಗಲಿ, ವಿದ್ಯಾರ್ಥಿ, ಯುವಜನರನ್ನಾಗಲಿ ಉದ್ದೇಶಿಸಿ ಅವರು ಮಾತನಾಡಲು ಹೊರಟಾಗ, **"ಈ ವ್ಯವಸ್ಥೆ ಬದಲಾಗದೆ ನಿಮಗೆ ಬಿಡುಗಡೆ ಇಲ್ಲ"** ಎಂಬ ಮಾತನ್ನು ಹೇಳಲು ಅವರು ಎಂದೂ ಮರೆಯುತ್ತಿರಲಿಲ್ಲ. ಅಮೇರಿಕನ್ ಸಾಮ್ರಾಜ್ಯವಾದದ ಬಗ್ಗೆ ಅವರು ಮಾತನಾಡುವಾಗ ಅವರ ಅಂತರಾಳದಲ್ಲಿ ನೆಲೆನಿಂತ ಅವರ ಕಮ್ಯುನಿಸ್ಟ್ ಪ್ರಜ್ಞೆ ಪ್ರಖರತೆಯೊಂದಿಗೆ ಪ್ರತ್ಯಕ್ಷವಾಗುತ್ತಿತ್ತು. ದೇಶದಲ್ಲಿ ಇಂದು ಕಾರ್ಮಿಕ ವರ್ಗದ ಐಕ್ಯತೆ ಯನ್ನು ನಾಶ ಮಾಡುತ್ತಿರುವ ಕೋಮುವಾದ ಮೂಲಭೂತವಾದದ ಬಗ್ಗೆ ಮಾತನಾಡುವಾಗಂತೂ ಕಾಮ್ರೆಡ್ ಸೂರಿ ಕೆಂಡಮಂಡಲವಾಗುತ್ತಿದ್ದರು. "ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ಸಂಗ್ರಾಮ ನಡೆಯುತ್ತಿದ್ದಾಗ ಈ ಅದ್ವಾನಿಗಳು, ವಾಜಪೇಯಿಗಳು ಎಲ್ಲಿದ್ದರು? ಎಂದು ಪ್ರಶ್ನಿಸುವಾಗ ಅವರು ಸಿಟ್ಟಿನಿಂದ ಕಿಡಿಕಿಡಿಯಾಗುತ್ತಿದ್ದರು. ಇದರ ಜೊತೆ ಜೊತೆಯಲ್ಲಿ ತಾನು ಕಳೆದ ಐದಾರು ದಶಕಗಳಿಂದ ಸಂಘಟಿಸುತ್ತಾ ಬಂದಿರುವ ಕರ್ನಾಟಕದ ಕಾರ್ಮಿಕರ ರಾಜಕೀಯ ಪ್ರಜ್ಞೆಯನ್ನು ಎತ್ತರಿಸುವಲ್ಲಿ ಸಾಕಷ್ಟು ಯಶಸ್ವಿ ಆಗಲಿಲ್ಲವಲ್ಲಾ ಎಂದು ಅವರು ಒಳೊಗೊಳಗೆ ಕೊರಗುತ್ತಿದ್ದರು ಮಾತ್ರವಲ್ಲ ಕೆಲವೊಮ್ಮೆ ತನ್ನ ನೆಚ್ಚಿನ ಕಾರ್ಮಿಕರನ್ನು ಈ ಕಾರಣಕ್ಕಾಗಿ ಬೈದೇ ಬಿಡುತ್ತಿದ್ದರು.

ಚತುರ, ಚಾಣಕ್ಷ

ಕಾರ್ಮಿಕರ ಒಂದೊಂದು ಬೇಡಿಕೆಯ ಬಗ್ಗೆ ಕಾಮ್ರೆಡ್ ಸೂರಿಯವರು ನೀಡುತ್ತಿದ್ದ ಗಮನ ಮತ್ತು ಅವುಗಳ ಕುರಿತು ಆಡಳಿತ ವರ್ಗದೊಂದಿಗೆ ಮಾತುಕತೆ ನಡೆಸುವಾಗ ವಹಿಸುತ್ತಿದ್ದ ಕಾಳಜಿ ಅವರನ್ನು ಕಾರ್ಮಿಕರ ನಡುವೆ ಅತ್ಯಂತ ಜನಪ್ರಿಯಗೊಳಿಸಿತ್ತು. ಹೋರಾಟಗಳನ್ನು ರೂಪಿಸುವುದರಲ್ಲಿ ಮತ್ತು ಯಶಸ್ವಿಯಾಗಿ ನಡೆಸುವುದರಲ್ಲಿ ಮಾತ್ರವಲ್ಲ ದ್ವಿಪಕ್ಷೀಯ ಮಾತುಕತೆಗಳಲ್ಲಿ ತ್ರಿಪಕ್ಷೀಯ ಸಂಧಾನ ಸಭೆಗಳಲ್ಲಿ ಅವರೊಬ್ಬ ಚತುರ, ಚಾಣಾಕ್ಷ ಟ್ರೇಡ್ ಯೂನಿಯನ್ ಮುಖಂಡರೆಂದು ನಾಡಿನ ಉದ್ದಗಲಕ್ಕೂ ತಿಳಿದ ವಿಷಯವಾಗಿತ್ತು. ಆದ್ದರಿಂದಲೇ ಅವರ ವಯಸ್ಸು 80ಕ್ಕೆ ಹತ್ತಿರವಾಗಿ ಶ್ರವಣ ಶಕ್ತಿ ಕುಗ್ಗಿದ್ದರೂ ಅನೇಕ ಬೃಹತ್ ಕೈಗಾರಿಕೆಗಳ ಕಾರ್ಮಿಕರು ತಮ್ಮ ಸಂಘಗಳಿಗೆ ಅವರ ನೇತೃತ್ವವ[...] ಬಯಸುತ್ತಿದ್ದರು. ಆಡಳಿತ ವರ್ಗಗಳ "ಹಾಯರ [...] ಆ್ಯಂಡ್ ಫಾಯರ್" ನೀತಿಯನ್ನು ಖಂಡಿಸಲು ಅವರು ಎಂದೂ ಮೀನಮೇಷ ಮಾಡುತ್ತಿರಲಿಲ್ಲ. ಆದರೆ ಅದೇ ಸಮಯದಲ್ಲಿ ಕಾರ್ಮಿಕರು ತಮ್ಮೊಳ[...] ಬೆಳೆಸಿಕೊಳ್ಳುತ್ತಿರುವ ತಪ್ಪು ಪ್ರವೃತ್ತಿಗಳನ್ನು ಸ[...] ಅವರು ಅಷ್ಟೇ ನಿಷ್ಠುರವಾಗಿ ವಿರೋಧಿಸುತ್ತಿದ್ದರು.

ಕಾರ್ಮಿಕರಲ್ಲಿ ಹೆಚ್ಚುತ್ತಿರುವ ಆರ್ಥಿಕವಾದ[...] ಗ್ರಾಹಕ ಸಂಸ್ಕೃತಿ ಕೆಲಸದಲ್ಲಿ ಬೇಜವಾಬ್ದಾರಿತನ[...] ಕುಡುಕತನದಂತಹ ದುಷ್ಟಟಗಳು ಅವರನ್[...] ರೇಗಿಸುತ್ತಿದ್ದವು. ಕಾರ್ಮಿಕರ[...] ಕಡಿಮೆಯಾಗುತ್ತಿರುವ ತ್ಯಾಗ ಮನೋಭಾವ[...] ಕಾರ್ಮಿಕ ವರ್ಗದ ರಾಜಕೀಯ ಪಕ್ಷ (ಕಮ್ಯೂನಿಸ[...] ಪಕ್ಷ)ಕ್ಕೆ ಧನಸಹಾಯ ಮಾಡಲು ಮುಂದಾಗದಿರು[...] ಪ್ರವೃತ್ತಿ ಕಾರ್ಮಿಕ ವರ್ಗದ ಸಾಹಿತ್ಯ, ಐಕ್ಯರಂಗ[...] ಸಿಐಟಿಯು ಸಂದೇಶ ಮುಂತಾದ ಪತ್ರಿಕೆಗಳನ[...] ಕೊಂಡು ಓದುವುದರಲ್ಲಿ ಅನಾಸಕ್ತಿಯನ್ನು ಕಂಡ[...] ಅವರು ಇತ್ತೀಚಿನ ದಿನಗಳಲ್ಲಿ ತುಂಬ[...] ಚಿಂತಿತರಾಗುತ್ತಿದ್ದರು. ಕಾರ್ಮಿಕ ವರ್ಗದ ಐಕ್ಯತೆ[...] ಭಂಗ ತರುತ್ತಿರುವ ಜಾತಿವಾದ ಕೋಮುವಾದ[...] ವಿರುದ್ಧ ಕಾರ್ಮಿಕರು ಬಲವಾಗಿ ಮತ್[...] ಬಹಿರಂಗವಾಗಿ ಧ್ವನಿಎತ್ತಲು ಹಿಂದೇಟ[...] ಹಾಕುತ್ತಿರುವುದು ಅವರ ರಕ್ತದೊತ್ತಡದ ಹೆಚ್ಚಳ[...] ಕಾರಣವೂ ಆಗುತ್ತಿತ್ತು. ಈಗ, ನಮಗೆ ಬೈದ[...] ಹೇಳುವವರು ನಮ್ಮ ನಡುವೆ ಇಲ್ಲದಿರುವಾಗ[...] ನಮ್ಮೊಳಗಿನ ಪರಕೀಯ ಪ್ರವೃತ್ತಿಗಳನ[...] ಕಿತ್ತುಹಾಕಲು ನಮ್ಮ ಕಾರ್ಮಿಕ ವರ್ಗ ಸ್ವಯ[...] ಸರ್ಜರಿಗೆ ಮುಂದಾಗಬೇಕಾಗುತ್ತದೆ.

ಆರೋಗ್ಯಕರ ಅತೃಪ್ತಿ

ಕಾಮ್ರೆಡ್ ಸೂರಿಯವರ ಜೀವ ಅದೊಂದ[...] "ತಣಿಯದ ತನು". ಅವರಿಗೆ ಯಾವ ಯಶ[...] ಕಾರ್ಯಕ್ರಮವೂ ಸಂತೃಪ್ತಿ ತರುತ್ತಿರಲಿಲ್ಲ. ರೈತ[...] ರ್‍ಯಾಲಿಗೆ ಹತ್ತಾರು ಸಾವಿರ ರೈತರನ್ನು ಅಣಿನೆರೆಸಲ[...] ಸಾಧ್ಯವಾದರೂ ಅವರಿಗೆ ತೃಪ್ತಿಯಿಲ್ಲ. ವಿದ್ಯಾರ್ಥಿ[...] ಸಂಘಟನೆಗೆ ಒಂದು ಲಕ್ಷದಷ್ಟು ಸದಸ್ಯ[...] ಸಂಗ್ರಹಿಸಿದರೂ ಅವರಿಗೆ ಅದು ಸಾಲದು. ರಾಜ್ಯ[...] ರಾಜಧಾನಿ ಬೆಂಗಳೂರು ಆಗಿರುವುದರಿಂ[...] ಬೆಂಗಳೂರಿನಲ್ಲಿ ಮೇಲಿಂದ ಮೇ[...] ಕಾರ್ಯಕ್ರಮಗಳು ಏರ್ಪಡುವುದು ಸಹಜ[...] ಇತ್ತೀಚಿನ ದಿನಗಳಲ್ಲಿ ಪಕ್ಷದ ಕರೆಗಳು ಸ[...] ಗಣನೀಯವಾಗಿ ಹೆಚ್ಚಾಗಿವೆ. ಈ ಎ[...] ಸಂದರ್ಭಗಳಲ್ಲಿ ಜನರನ್ನು ಸೇರಿಸುವ ಜವಾಬ್ದಾ[...] ಹೆಚ್ಚಾಗಿ ಬೆಂಗಳೂರಿನ ಪಕ್ಷದ ಸಮಿತಿ ಹಾಗ[...]

ಪುಟ 15

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH

ಸಂಪಾದಕರ ಫೈಲ್.